ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ಸಂಪುಟ 8 ಸಂಚಿಕೆ 51
ಡಿಸೆಂಬರ್ 21, 2014
ಪುಟ 16 ರೂ. 10/-

Blog :janashakthi.wordpress.com e-mail : js_weekly@yahoo.com



ಪ್ರಜಾಪ್ರಭುತ್ವ ಬಲಗೊಳ್ಳಲು ಜಾತಿವ್ಯವಸ್ಥೆ ನಾಶವಾಗಲೇಬೇಕು



ಆರು ತಿಂಗಳ ಮೋದಿ ಆಡಳಿತ : ಬಂಡವಾಳಗಾರರನ್ನು ಓಲೈಸುವ ಕಾಂಗ್ರೆಸ್ ನೀತಿಗಳ ಮುಂದುವರಿಕೆ



ಜನತೆಯ ಆಶೋತ್ತರಗಳನ್ನು ಸಾಕಾರಗೊಳಿಸಲು ಯೋಜನೆ ಅಗತ್ಯ

– ಮಾಣಿಕ್ ಸರ್ಕಾರ್



ಬೆಳಗಾವಿ ಅಧಿವೇಶನ : ಕಾಲಹರಣದ ಕಲಾಪವಾಗದಿರಲಿ

ಬ್ರಹ್ಮನ್ ಮತ್ತು ಬ್ರಾಹ್ಮಣ್ಯ

"ಸರ್ವ ಖಲ್ವಿದ ಬ್ರಹ್ಮಂ ತಜ್ಜಲಾನೀತಿ ಶಾಂತ ಉಪಾಸೀತ

ಇವೆಲ್ಲವೂ ಬ್ರಹ್ಮದಿಂದಲೇ ಹುಟ್ಟಿ ಲಯವಾಗಿ ಅದರಲ್ಲೇ ಇರುವುದರಿಂದ ಇವೆಲ್ಲವೂ ಬ್ರಹ್ಮವೇ " ಛಾಂದೋಗ್ಯೋಪನಿಷತ್ – 3–14–1

ಇದು ಪ್ರಸಿದ್ಧ ಉಪನಿಷತ್ ವಾಕ್ಯಗಳಲ್ಲೊಂದು. ಎಲ್ಲವೂ ಬ್ರಹ್ಮವೇ . ಆತ್ಮ ಎಂಬ ಪರಿಕಲ್ಪನೆಯೊಡನೆಯೇ ಉಪನಿಷತ್ತುಗಳಲ್ಲಿ ಕಾಣುವ ಮತ್ತೊಂದು ಕಲ್ಪನೆ ಬ್ರಹ್ಮನ್ . ಹಿಂದಿನ ಸಂಚಿಕೆಗಳಲ್ಲಿ ಆತ್ಮನ ಬಗ್ಗೆ ವಿವರಿಸುವಾಗಲೇ ಬ್ರಹ್ಮನ್ ಬಗೆಗಿನ ಪ್ರಸ್ತಾಪಗಳೂ ಬಂದವು. ಬ್ರಹ್ಮನ್ ನ ಕಲ್ಪನೆ ಆತ್ಮನ ಕಲ್ಪನೆಯೊಂದಿಗೇ ಭಾರತೀಯ ತತ್ವಶಾಸ್ತ್ರದ ಪರಮೋಚ್ಚ ಸಾಧನೆಯೆಂದೇ ವರ್ಣಿಸಲ್ಪಡುತ್ತಿದೆ. ಇಡೀ ವಿಶ್ವಕ್ಕೆ ದೊಡ್ಡ ಕೊಡುಗೆಯೆಂಬ ಹೆಗ್ಗಳಿಕೆಯನ್ನೂ ಹೊತ್ತಿದೆ. ಆದರೆ ಈ ಬ್ರಹ್ಮನ್ ಎಂದರೆ ಏನೆಂಬುದನ್ನು ವಿವರಿಸುವಾಗ ಆತ್ಮವನ್ನು ವಿವರಿಸಿರುವಂತೆಯೇ ನೇತಿ, ನೇತಿ ಎಂದರೆ ಅದಲ್ಲ , ಇದೂ ಅಲ್ಲ ಎಂಬಂತೆಯೇ ವಿವರಿಸಲಾಗಿದೆ.

ಭಾಗ – 47



ಜೋಮನ ದುಡಿ
ಜಿ. ಎನ್. ನಾಗರಾಜ್

"ಸ ಹೊವಾಚ ಏತದ್ವೈ ತದಕ್ಷರಂ ಗಾರ್ಗಿ ಬ್ರಾಹ್ಮಣಾ ಅಭಿವದಂತಿ"

ಯಾಜ್ಞವಲ್ಕ್ಯರು ಹೇಳಿದರು : ಗಾರ್ಗಿಯೇ, ಈ ಅಕ್ಷರವಾದ (ನಾಶವಿಲ್ಲದ) ಬ್ರಹ್ಮನ ಬಗ್ಗೆ ಬ್ರಾಹ್ಮಣರು ಹೀಗೆ ಹೇಳುತ್ತಾರೆ.– ಅದು ಅಣುವಲ್ಲ, ಸ್ಥೂಲವಲ್ಲ , ಹ್ರಸ್ವವಲ್ಲ, ದೀರ್ಘವಲ್ಲ: ಕೆಂಪು ಬಣ್ಣವುಳ್ಳದ್ದಲ್ಲ, ತೇವವಲ್ಲ, ಛಾಯೆಯಲ್ಲ, ಕತ್ತಲೆಯಲ್ಲ, ವಾಯುವಲ್ಲ, ಆಕಾಶವಲ್ಲ, ಅದು ಸಂಗರಹಿತ, ಅದಕ್ಕೆ ರುಚಿಯಾಗಲೀ, ಗಂಧವಾಗಲಿ, ಇಲ್ಲ, ಅದು ಕಣ್ಣಲ್ಲ, ಕಿವಿಯಲ್ಲ, ವಾಕ್ಕಲ್ಲ, ಮನಸ್ಸಲ್ಲ, ತೇಜಸ್ಸಲ್ಲ, ಪ್ರಾಣವಲ್ಲ, ಅದಕ್ಕೆ ಬಾಯಿಯಿಲ್ಲ, ಅಳತೆಯಿಲ್ಲ, ಅದಕ್ಕೆ ಒಳಗು ಹೊರಗುಗಳಿಲ್ಲ, ಅದು ಯಾವುದನ್ನೂ ತಿನ್ನುವುದಿಲ್ಲ, ಅದನ್ನು ಯಾವುದೂ ತಿನ್ನುವುದಿಲ್ಲ. (ಬೃಹದಾರಣ್ಯಕ ಉಪನಿಷತ್ 3–8–8)

ಹೀಗೆ ಬ್ರಹ್ಮನ್ ಎಂದರೆ ಯಾವುದೂ ಅಲ್ಲ. ಮಾನವ ಮಾತ್ರರಿಗೆ ಗೊತ್ತಿರುವ, ಈ ಪ್ರಪಂಚದ ಯಾವುದೇ ವಸ್ತುವಲ್ಲ ಎಂದು ಹೇಳಲು ಬಹಳ ಶ್ರಮವಹಿಸಿ ಈ 'ಅದಲ್ಲ ಇದೂ ಅಲ್ಲ' ಎಂಬ ಮಾರ್ಗವನ್ನು ಹುಡುಕಲಾಗಿದೆ. ಆದ್ದರಿಂದ ಇದನ್ನು ಯಾರೂ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಬಿಂಬಿಸುವುದೇ ಗು–ರಿಯಾಗಿದೆ.

ಹೀಗೆ ವಿವರಿಸಲಾಗದ, ಅರ್ಥ ಮಾಡಿಕೊಳ್ಳಲಾಗದ ಸ್ವರೂಪದ ಅತ್ಮ ಮತ್ತು ಇಂತಹುದೇ ವಿವರಣೆಯಿರುವ ಬ್ರಹ್ಮನ್ ಎಂಬುದನ್ನು ಸೃಷ್ಟಿ ಮಾಡಲಾಯಿತು. ಇಂತಹ ಆತ್ಮ ಮತ್ತು ಬ್ರಹ್ಮ ರ ನಡುವಣ ವ್ಯತ್ಯಾಸವನ್ನು ವಿವರಿಸಲು ಉಪನಿಷತ್ತಿನ ಋಷಿಗಳಿಗೂ ಬಹಳ ಕಷ್ಟವಾಗಿ ಬಿಟ್ಟಿದೆ. ಆದ್ದರಿಂದ ಅವರೇ ಗೊಂದಲಕ್ಕೊಳಗಾಗುತ್ತಾರೆ. ಎರಡೂ ಒಂದೇ ಎನ್ನುವುದು, ಒಂದು ಇನ್ನೊಂದನ್ನು ಸೇರುತ್ತದೆ ಎನ್ನುವುದೂ, ಅದನ್ನು ಮೋಕ್ಷ ಎಂದು ಕರೆಯುವುದು, ಹಾಗೆ ಬ್ರಹ್ಮನನ್ನು ಸೇರದ ಆತ್ಮ ಮತ್ತೆ ಪುನರ್ಜನ್ಮ ಪಡೆಯುತ್ತದೆ, ಹೀಗೆ ಪಡೆ–ಯುತ್ತಾ ಹೋಗುತ್ತದೆ ಎನ್ನುವುದೂ, ಎರಡರ ವಿವರಣೆಯೂ ಒಂದೇ ರೀತಿ ಇರುವುದು ಉಪನಿಷತ್ತುಗಳಲ್ಲಿ ಕಾಣುತ್ತದೆ.

ಈ ಎರಡನ್ನು ಮನುಷ್ಯ ಮಾತ್ರರು ನೋಡಿರುವ ಯಾವ ವಸ್ತುವಿಗೂ ಹೋಲಿಸಲಾಗದ ಸ್ವರೂಪವನ್ನು ಹೊಂದಿರುವಂತೆ ಇವುಗಳನ್ನು ವರ್ಣಿಸುವುದರಲ್ಲಿಯೇ ಒಂದು ಗೂಢತನ ಕಾಣುತ್ತದೆ. ಸಾಮಾನ್ಯ ಮನುಷ್ಯರಿಗಾರಿಗೂ ಇವುಗಳನ್ನು ಕಾಣಲಾಗುವುದಿಲ್ಲ ಅರ್ಥಮಾಡಿಕೊಳ್ಳಲಾಗುವುದಿಲ್ಲ ಎಂದು ಬಿಂಬಿಸುವುದೇ ಈ ಎಲ್ಲ ವರ್ಣನೆಯ ಕಾರಣ ಇದ್ದಂತೆ ಕಾಣುತ್ತದೆ.

ಬ್ರಾಹ್ಮಣರಿಗೆ ಮಾತ್ರ ಸಾಧ್ಯ ! ! !

ಇಂತಹ ನಿಗೂಢ ಜ್ಞಾನವನ್ನು ಸುಲಭವಾಗಿ ತಿಳಿದುಕೊಳ್ಳಲಾಗುವುದಿಲ್ಲ. ಏಕೆಂದರೆ ಅದು ತರ್ಕವನ್ನು ಮೀರಿದುದು ಎನ್ನುತ್ತವೆ ಉಪನಿಷತ್ತುಗಳು . ಉಪನಿಷತ್ತು ಎಂದರೇನೆ ರಹಸ್ಯ ಜ್ಞಾನ . ಪ್ರೊ . ಹಿರಿಯಣ್ಣನವರು ಹೇಳುವಂತೆ " ಉಪನಿಷತ್ತುಗಳಲ್ಲಿಯೇ ಈ ಪದದ ಪ್ರಯೋಗವಿರುವುದು ಕಂಡುಬರುತ್ತದೆ. ಅಲ್ಲಿ ಈ ಪದವು ಸಾಮಾನ್ಯವಾಗಿ ರಹಸ್ಯ ಎಂಬುದಕ್ಕೆ ಸಮಾನಾರ್ಥಕವಾಗಿ ಕಾಣಿಸಿಕೊಳ್ಳುತ್ತದೆ. ಆದುದರಿಂದ ಅದೇ ಆ ಪದದ ಮೂಲಾರ್ಥವಾಗಿರಬೇಕು. ಉಪ (ಹತ್ತಿರ) ನಿ (ಶ್ರದ್ಧೆಯಿಂದ) ಸತ್ (ಕುಳಿತು) ಎಂಬುದು ಪದದ ಮೂಲಾರ್ಥ . ಅಂತಹ ಏಕಾಂತದಲ್ಲಿ ನೀಡಿದ ರಹಸ್ಯವಾದ ಉಪದೇಶ ಎಂಬ ಅರ್ಥವನ್ನು ಕಾಲಕ್ರಮದಲ್ಲಿ ಅದು ಪಡೆಯಿತು. "

ಕಠೋಪನಿಷತ್ತು ಹೇಳುತ್ತದೆ :

"ಯಾವ ಆತ್ಮನು ಶ್ರವಣ ಮಾಡುವುದಕ್ಕೂ ಅನೇಕರಿಗೆ ಲಭ್ಯವಾಗುವುದಿಲ್ಲವೋ ಅಂಥ ಯಾವ ಆತ್ಮನನ್ನು ಶ್ರವಣ ಮಾಡುತ್ತಿದ್ದರೂ ಅನೇಕರು ತಿಳಿಯುವುದಿಲ್ಲವೋ ಅಂಥ ಆತ್ಮನನ್ನು ಪ್ರತಿಪಾದಿಸುವವನು ಆಶ್ಚರ್ಯಭೂತನು. ಅದನ್ನು ಪಡೆದುಕೊಳ್ಳುವ ಕೌಶಲ್ಯವುಳ್ಳವನು ಆಶ್ಚರ್ಯಭೂತನು. ಆ ಆತ್ಮನನ್ನು ಕುಶಲನಿಂದ ಉಪದೇಶ ಪಡೆದು ತಿಳಿಯುವವನು ಆಶ್ಚರ್ಯ ಭೂತನಾದವನು."

ನರೇಣಾವರೇಣ ಪ್ರೋಕ್ತ ಏಷಃ
ಸುವಿಜ್ಞೇಯೋ ಬಹುಧಾ ಚಿಂತ್ಯಮಾನಃ
ಅನನ್ಯ ಪ್ರೋಕ್ತೇ ಗತಿರತ್ರ ನಾಸ್ತಿ
ಅಣಿಯಾನ್ ಹ್ಯತರ್ಕ್ಯಮಣು ಪ್ರಮಾಣಾತ್.
ಕಠೋಪನಿಷತ್ತು 1–2–8


ಶ್ರೇಷ್ಠನಲ್ಲದವನು ಉಪದೇಶ ಮಾಡಿದಾಗ ಆ ಆತ್ಮವನ್ನು ಚೆನ್ನಾಗಿ ಅರಿಯಲಾಗುವುದಿಲ್ಲ. ಏಕೆಂದರೆ ಅದನ್ನು ಬಗೆಬಗೆಯಾಗಿ ಚಿಂತಿಸಿದ್ದಾರೆ. ಮತ್ತೊಬ್ಬರಿಂದ ಉಪದೇಶ ಪಡೆದಲ್ಲದೆ ಅದನ್ನು ತಿಳಿಯುವುದಕ್ಕಾಗುವುದಿಲ್ಲ. ಏಕೆಂದರೆ ಅದು ಅಣು ಪ್ರಮಾಣಕ್ಕಿಂತಲೂ ಸೂಕ್ಷ್ಮವಾದುದು ಮತ್ತು ತರ್ಕವನ್ನು ಮೀರಿದುದು. "

ಆತ್ಮನ ಬಗ್ಗೆ ತಿಳಿದಿದ್ದೇನೆಂದರೇ ಆಶ್ಚರ್ಯಕರವಾದುದು.. ಅದನ್ನು ಶ್ರೇಷ್ಠನಾದವನೇ ಉಪದೇಶ ಮಾಡಬೇಕು.

"ನಾಯಮಾತ್ಮ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇಣ
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ
ಆತ್ಮಾ ವಿವೃಣುತೇ ತನೂ ಸ್ವಾಂ
ಕಠೋಪನಿಷತ್ತು 1–2–23

ಈ ಆತ್ಮನನ್ನು ಪ್ರವಚನಗಳಿಂದ ಆಗಲೀ ಅಥವಾ ಚಿಂತನೆಯಿಂದಾಗಲೀ ಧ್ಯಾನದಿಂದಾಗಲೀ ಅಥವಾ ಅನೇಕ ಬಾರಿ ಕೇಳುವುದರಿಂದಾಗಲೀ ಪಡೆದುಕೊಳ್ಳಲಾಗುವುದಿಲ್ಲ. ಯಾರನ್ನು ಆ ಪರಮಾತ್ಮನು ವರಿಸುವನೋ ಅವನೇ ಅವನನ್ನು ಪಡೆದುಕೊಳ್ಳುತ್ತಾನೆ. ಅಂಥವನಿಗೆ ಆತ್ಮನು ತನ್ನನ್ನು ತಾನು ತೋರಿಸಿಕೊಳ್ಳುತ್ತಾನೆ. "

ಸರಿ, ಮುಗಿದೇ ಹೋಯಿತಲ್ಲ. ಮನುಷ್ಯರು ತಮ್ಮ ಯಾವುದೇ ಪ್ರಯತ್ನದಿಂದ ತಿಳಿದುಕೊಳ್ಳಲಾಗುವುದಿಲ್ಲ. ಹೀಗಾಗಿ ಎಲ್ಲರಿಗೂ ಲಭ್ಯನಲ್ಲ. ಆತ್ಮನ ಕೃಪೆ ಯಾರ ಮೇಲೆ ಬೀಳುವುದೋ ಅವನು ಮಾತ್ರ ತಿಳಿದುಕೊಳ್ಳಬಲ್ಲನು.



ಉತ್ತಿಷ್ಠತ , ಜಾಗ್ರತ ಪ್ರಾಪ್ಯವಾರನ್ನಿಬೋಧತಃ
ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ
ದುರ್ಗಂ ಪಥಸ್ತ ಕವಯೋ ವದಂತಿ
ಕಠೋಪನಿಷತ್ತು 1–3–14

ಇದೊಂದು ಬಹಳ ಪ್ರಸಿದ್ಧವಾದ ಶ್ಲೋಕ. ಆದರೆ ಸಾಮಾನ್ಯವಾಗಿ ನಾವು ಅರ್ಥ ಮಾಡಿಕೊಂಡಂತಿಲ್ಲ ಅದರ ಅರ್ಥವೂ ಕೂಡ. 'ಆತ್ಮ , ಬ್ರಹ್ಮವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟಕರವಾದುದು. ಕತ್ತಿಯ ಅಲಗಿನಂತೆ ಹರಿತವಾದುದು. ಆದ್ದರಿಂದ ಅದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಶ್ರೇಷ್ಠರಾದವರನ್ನೇ ಆಶ್ರಯಿಸಬೇಕು. ಅದಕ್ಕಾಗಿ ಏಳಿ ಎಚ್ಚರವಾಗಿರಿ.'

ಹೀಗೆ ಆತ್ಮ, ಬ್ರಹ್ಮನ ಅರಿವು ಸಾಮಾನ್ಯರಿಗೆ ಸಿದ್ಧಿಸುವುದೂ ಇಲ್ಲ, ಅದಕ್ಕಾಗಿ ಶ್ರೇಷ್ಠರನ್ನೇ ಆಶ್ರಯಿಸಬೇಕು. ಅಂತಹ ಶ್ರೇಷ್ಠರು ಯಾರೆಂದು ಎಲ್ಲರಿಗೂ ತಂತಾನೆ ಗೊತ್ತಾಗುವಂತಹುದೇ. ಯಾಜ್ಞವಲ್ಕ್ಯನೇ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾನಲ್ಲಾ ಈ ಮೇಲೆ ಉಲ್ಲೇಖಿಸಲಾದ ಶ್ಲೋಕದಲ್ಲಿ. ಬ್ರಹ್ಮವನ್ನು ವರ್ಣಿಸಿದವರೇ ಬ್ರಾಹ್ಮಣರೆಂದು. ಆದ್ದರಿಂದ ಅವರನ್ನೇ ಆಶ್ರಯಿಸಬೇಕು. ಹಿಂದಿನ ಸಂಚಿಕೆಗಳಲ್ಲಿ ಉಲ್ಲೇಖಿಸಿದಂತೆ ಕೆಲ ಕ್ಷತ್ರಿಯರು ಈ ರಹಸ್ಯ ಜ್ಞಾನವನ್ನು ಪಡೆದಿದ್ದರು. ಅವರಿಂದ ಬ್ರಾಹ್ಮಣರೇ ಉಪದೇಶ ಪಡೆದಿದ್ದಾರೆ. ಆದರೆ ಅದೇ ಯಾಜ್ಞವಲ್ಕ್ಯರು ಮತ್ತೆ ಮತ್ತೆ ಹೇಳಿದಂತೆ ಬ್ರಾಹ್ಮಣರೇ ಈ ಜ್ಞಾನವನ್ನು ಸಂಪಾದಿಸುವುದಕ್ಕೆ ಯೋಗ್ಯರು. ಅವರೇ ಈ ಜ್ಞಾನವನ್ನು ಉಪದೇಶ ಮಾಡುವುದಕ್ಕೆ ಯೋಗ್ಯರು. ಕ್ಷತ್ರಿಯರು ಕೂಡ ಅವರಿಂದಲೇ ಈ ಜ್ಞಾನವನ್ನು ಪಡೆಯಬೇಕು.

ತೈತ್ತೀರಿಯ ಉಪನಿಷತ್ತು ಅದನ್ನು ಮತ್ತಷ್ಟು ಸ್ಪಷ್ಟ ಪಡಿಸುತ್ತದೆ :

ಯೇ ಕೇ ಚಾಸ್ಮಚ್ಛ್ರೇಯಾಂಸ ಸೋ ಬ್ರಾಹ್ಮಣಾಃ
ತೇಷಾಂ ತ್ವಯಾಸನೇ ನ ಪ್ರಶ್ವಸಿತವ್ಯಂ .
ಯೇ ತತ್ರ ಬ್ರಾಹ್ಮಣಾ ಸಂಮರ್ಶಿನಃ

ನಮಗಿಂತಲು ಶ್ರೇಷ್ಠರಾದ ಬ್ರಾಹ್ಮಣರ ಜೊತೆ ಆಸೀನನಾಗಬಾರದು. ಧರ್ಮಾಚರಣೆಯಲ್ಲಿ ತತ್ಪರರಾದ ಬ್ರಾಹ್ಮಣರನ್ನು ಅನುಸರಿಸಬೇಕು.

ಹೀಗೆ ಉಪನಿಷತ್ತುಗಳ ರಹಸ್ಯ ಜ್ಞಾನ –ಆತ್ಮ– ಬ್ರಹ್ಮಗಳ ಜ್ಞಾನ ಬ್ರಾಹ್ಮಣರಿಗೆ ಮೀಸಲಾದದ್ದು, ಅವರು ಮಾತ್ರ ತಿಳಿದುಕೊಳ್ಳಲು ಸಾಧ್ಯವಾದದ್ದು ಎಂಬ ಬಗ್ಗೆ ನೇರಾನೇರ ಸೂಚನೆಗಳು, ಪರೋಕ್ಷ ಸೂಚನೆಗಳೂ ಯಥೇಚ್ಛವಾಗಿವೆ.

ಹಿಂದೆ ಯಜ್ಞಾಚರಣೆ ಬ್ರಾಹ್ಮಣಗಳೆಂಬ ಗ್ರಂಥಗಳಲ್ಲಿ ನೇಮಿಸಲ್ಪಟ್ಟಂತೆ ಪುರೋಹಿತ ವರ್ಗಗಳ ಪಾತ್ರ ಪ್ರಮುಖವಾಗಿತ್ತು. ಉಪನಿಷತ್ತುಗಳ ಕಾಲದಲ್ಲಿ ಯಾಗ ಯಜ್ಞಗಳು ಪ್ರಾಮುಖ್ಯತೆ ಕಳೆದುಕೊಂಡವು. ಆತ್ಮಜ್ಞಾನ, ಬ್ರಹ್ಮಜ್ಞಾನ ಪ್ರಧಾನವಾಯಿತು. ಇವುಗಳನ್ನು ವಿವರಿಸಲು ಬ್ರಾಹ್ಮಣರ ಜೊತೆಗೆ ಕ್ಷತ್ರಿಯರೂ ಕೂಡ ಮುಖ್ಯ ಪಾತ್ರ ವಹಿಸಿದರು. ಆದರೂ ಕೂಡ ಈ ಮೇಲಿನ ಮತ್ತು ಹಿಂದಿನ ಸಂಚಿಕೆಗಳಲ್ಲಿ ವಿವರಿಸಿದಂತೆ ಈ ಜ್ಞಾನವನ್ನು ಪಡೆಯುವ ಮತ್ತು ವಿವರಿಸುವ ಶ್ರೇಷ್ಠರು ಬ್ರಾಹ್ಮಣರೇ ಆದರು. ಬ್ರಹ್ಮಜ್ಞಾನ ಬ್ರಾಹ್ಮಣರೊಂದಿಗೆ ಸಮೀಕರಣಗೊಳಿಸಲ್ಪಟ್ಟಿತು. ಇದನ್ನು ಮುಂದೆ ಅನೇಕ ಸ್ಮೃತಿಗಳು, ಶಂಕರ, ಮಧ್ವ, ರಾಮಾನುಜ, ಮೊದಲಾದ ಆಚಾರ್ಯರು ಇನ್ನೂ ಪ್ರಬಲವಾಗಿ ಪ್ರತಿಪಾದಿಸಿದರು.

●

ಸಂಪಾದಕೀಯ



▌ನಿತ್ಯಾನಂದಸ್ವಾಮಿ

ಜಾತಿ ಹೆಸರಲ್ಲಿ ನಿಂದಿಸುವುದನ್ನು ತಡೆಯಲು ಕಾನೂನು ಬರಲಿ

ರಾಜ್ಯದಲ್ಲಿ ಕ್ಷೌರಿಕರು, ಮಡಿವಾಳರು, ದರವೇಶಿಗಳು ಮೊದಲಾದ ಕೆಲ ಸಮುದಾಯಗಳನ್ನು ನಿಂದನಾತ್ಮಕ ಪದಗಳನ್ನು ಬಳಸಿ ಕರೆಯುವುದನ್ನು ನಿರ್ಬಂಧಿಸಲು ಕಾನೂನು ರೂಪಿಸಲಾಗುವುದೆಂದು ಸಮಾಜ ಕಲ್ಯಾಣ ಸಚಿವ ಎಚ್. ಆಂಜನೇಯ ಅವರು ಹೇಳಿದ್ದಾರೆ ಎಂದು ವರದಿಯಾಗಿದೆ. ಇಂದಿನ ಸಚಿವರು, ಶಾಸಕರು ಹೇಳಿದ್ದೆಲ್ಲವನ್ನು ಮಾಡುತ್ತಾರೆ, ಮಾಡುವುದನ್ನೇ ಹೇಳುತ್ತಾರೆ ಎಂಬ ವಿಚಾರದಲ್ಲಿ ಜನತೆಗೆ ವಿಶ್ವಾಸವೇ ಇಲ್ಲದಂತಾಗಿರುವಾಗ ನಮ್ಮ ಸಮಾಜ ಕಲ್ಯಾಣ ಸಚಿವರ ಈ ಭರವಸೆ ವಿಶ್ವಾಸಾರ್ಹವೇ ಎಂಬ ಅನುಮಾನ ವ್ಯಕ್ತವಾಗಿದ್ದರೆ ಆಶ್ಚರ್ಯವೇನಿಲ್ಲ.

ಮೌಢ್ಯಾಚರಣೆಗಳನ್ನು ತಡೆಗಟ್ಟುವ ಕಾನೂನು ತರುತ್ತೇವೆ ಎಂದು ಹೇಳಿ ಪ್ರಚಾರ ಗಿಟ್ಟಿಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಹಿಂದೇಟು ಹಾಕುತ್ತಿದ್ದಾರೆ. ನಮ್ಮ ಸಮಾಜದಲ್ಲಿ ಇರುವ ಮೌಢ್ಯದ ಲಾಭ ಪಡೆಯುತ್ತಾ ಬಂದಿರುವ ಕಾಂಗ್ರೆಸ್ ಪಕ್ಷದೊಳಗೆ ಅಂತಹ ಪ್ರಗತಿಪರ ಕಾನೂನೊಂದನ್ನು ತರುವ ಬಗ್ಗೆ ಸಹಮತ ಇರಲಾರದು. ಅಧಿಕಾರಕ್ಕಿಂತ ತಾನು ಪ್ರತಿಪಾದಿಸುವ ಅಹಿಂದಪರ ಧೋರಣೆಗಳೇ ಮುಖ್ಯ ಎಂದು ಸಿದ್ದರಾಮಯ್ಯ ಅವರು ಭಾವಿಸುವುದಾದರೆ ವಿಳಂಬಮಾಡದೆ ಎಲ್ಲಾ ಧರ್ಮೀಯರ ನಡುವೆ ಪ್ರಚಲಿತವಿರುವ ಮೌಢ್ಯಾಚರಣೆಗಳನ್ನು ತಡೆಗಟ್ಟುವ ಕಾನೂನನ್ನು ಜಾರಿಗೆ ತರಬೇಕು.

ಇನ್ನು, ಜಾತಿ ಹೆಸರಿನಲ್ಲಿ ಬೈಯುವುದು, ಹೀಯಾಳಿಸುವುದು, ಅವಮಾನಿಸುವುದರ ವಿರುದ್ಧ ಕ್ರಮಕೈಗೊಳ್ಳಲು ಸಾಧ್ಯವಾಗುವಂತಹ ಕಾನೂನನ್ನು ತರುವುದೂ ಸಹ ಅಗತ್ಯವಾಗಿದೆ. ಶ್ರೇಣೀಕೃತ ಜಾತಿಪದ್ಧತಿ ಪಾಳೆಗಾರಿ ವ್ಯವಸ್ಥೆಯ ಉತ್ಪನ್ನವಾಗಿದೆ. ಪಾಳೆಗಾರಿ ಜಮೀನ್ದಾರರು ದುಡಿಯುವ ವರ್ಗಕ್ಕೆ ಸೇರಿದ ಸಮುದಾಯಗಳನ್ನು ತಮ್ಮ ಹೊಲಗದ್ದೆಗಳಲ್ಲಿ ದುಡಿಸುತ್ತಾ, ಶೋಷಣೆ ಮಾಡುತ್ತಾ ಬಂದಿದ್ದಾರೆ. ದುಡಿಯುವ ಜನಸಮುದಾಯಗಳು ತಮಗೆ ವಿಧೇಯರಾಗಿ ದುಡಿಯುವಂತೆ ಮಾಡಲು ಅವರನ್ನು ಜಾತಿ ಹೆಸರಲ್ಲಿ ಕರೆಯುವುದನ್ನು, ಬೈಯುವುದನ್ನು ರೂಢಿ ಮಾಡಿಕೊಂಡು ಬಂದಿದ್ದಾರೆ, ಈ ಪ್ರವೃತ್ತಿ ಈಗ ಜಾತಿ ಹೆಸರಲ್ಲಿ ಕೆಲವು ಸಮುದಾಯಗಳ ಜನರನ್ನು ಅವಮಾನಿಸಲು ಬಳಸಲ್ಪಡುತ್ತಿದೆ.


ಕ್ಷೌರಮಾಡಿ ನಮ್ಮನ್ನು ನಾಗರಿಕರಾಗಿ ಕಾಣುವಂತೆ ಮಾಡುವ ನಮ್ಮ ಕ್ಷೌರಿಕ ಬಂಧುಗಳ ಮುಖ ನೋಡಲು ಹೇಸುವವರು ನಾಗರಿಕರೆ? ಅವರ ಮುಖಗಳನ್ನು ನೋಡದೆ ನಮ್ಮ ಮುಖಗಳು ಚಂದವಾಗಲು ಸಾಧ್ಯವೆ? ಅವರನ್ನು ಜಾತಿ ಹೆಸರಲ್ಲಿ ನಿಂಧಿಸುವುದಾಗಲಿ, ಆ ಜಾತಿಯ ಹೆಸರಲ್ಲಿ ಇನ್ನ್ಯಾರನ್ನು ಬೈಯುವುದಾಗಲಿ ನಿಲ್ಲಲೇಬೇಕು. ಹಾಗೆಯೇ ನಮ್ಮ ಹೊಲಸು ಬಟ್ಟೆಗಳನ್ನು ಸ್ವಚ್ಛ ಮಾಡಿ ನೀಡುವ ಮಡಿವಾಳರನ್ನಾಗಲಿ ಇತರ ಕಾಯಕ ಸಮುದಾಯಗಳ ಜನರನ್ನಾಗಲಿ ಜಾತಿ ಹೆಸರಲ್ಲಿ ಅವಮಾನಿಸುವುದನ್ನು ತಡೆಗಟ್ಟಲು ಕಾನೂನು ಕ್ರಮ ಅಗತ್ಯವಿದೆ.

ಕೇವಲ ಕಾನೂನು ತರುವುದರಿಂದ ಈ ಪಿಡುಗು ನಿಲ್ಲಲಾರದು. ದಲಿತರನ್ನು ಜಾತಿ ಹೆಸರಲ್ಲಿ ನಿಂದಿಸುವುದು ಶಿಕ್ಷಾರ್ಹ ಅಪರಾಧ ಆಗಿದ್ದರೂ ಅವರನ್ನು ಜಾತಿ ಹೆಸರಲ್ಲಿ ಅವಮಾನಿಸುವುದು ಅವ್ಯಾಹತವಾಗಿ ನಡೆಯುತ್ತಲೇ ಇದೆ. 'ಹರಿಜನ' ಎಂಬ ಪದವನ್ನು ಸ್ವತ: ಗಾಂಧೀಜೀಯವರೇ ಹುಟ್ಟುಹಾಕಿರಬಹುದು. ಆದರೆ ಅದು ದಲಿತರನ್ನು ನಿಕೃಷ್ಟವಾಗಿ ಕಾಣುವ ಭಾವವನ್ನು ಪಡೆದುಕೊಂಡಿದ್ದು ಅದರ ಬಳಕೆಯನ್ನು ನಿಲ್ಲಿಸುವುದು ಅಗತ್ಯವಿದೆ. ಇಂತಹ ಪದಗಳ ಬಳಕೆಯಿಂದ ನಮ್ಮ ವಿದ್ಯಾವಂತ ದಲಿತ ಬಂಧುಗಳು ಹಿಂಸೆ ಅನುಭವಿಸುತ್ತಿರುತ್ತಾರೆ. ಆದರೆ ಇನ್ನು ಕೆಲವರು ಸರ್ಕಾರದಿಂದ ದೊರೆಯುವ ಕೆಲವು ಸೌಲಭ್ಯಗಳಿಂದ ವಂಚಿತರಾಗುವ ಭೀತಿಯಿಂದ ಅಂತಹ ಜಾತಿವಾಚಕ ಪದಗಳನ್ನು ತಮ್ಮ ಹೆಸರುಗಳ ಕೊನೆಯಲ್ಲಿ ಜೋಡಿಸಿಕೊಂಡು ಅವಮಾನವನ್ನು ಸಹಿಸಿಕೊಂಡು ಹೋಗುತ್ತಿದ್ದಾರೆ.

ಜಾತಿ ಹೆಸರಲ್ಲಿ ನಿರ್ಧಿಷ್ಟ ಸಮುದಾಯದವರನ್ನು ಅಥವ ಇತರರನ್ನು ಅವಮಾನಿಸುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಮಾತ್ರವಲ್ಲ ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಕಾನೂನು ಮೂಲಕ ಇಂತಹ ಪ್ರವೃತ್ತಿಗಳನ್ನು ತಡೆಗಟ್ಟಲು ಪ್ರಯತ್ನ ಪಡುವ ಜತೆಯಲ್ಲಿ ನಾಗರಿಕ ಪ್ರಜ್ಞೆಯನ್ನು ಎತ್ತರಿಸುವ ಕೆಲಸವನ್ನು ಸರ್ಕಾರ ಹಾಗೂ ಜನ ಸಂಘಟನೆಗಳು ಮಾಡಬೇಕಾಗಿದೆ. ಚಿಕ್ಕ ಮಕ್ಕಳ ಎದುರು ಅವರ ಪೋಷಕರು ಮತ್ತು ಅವರ ಶಿಕ್ಷಕರು ಇಂತಹ ಪದಪ್ರಯೋಗ ಮಾಡುವುದನ್ನು ಪ್ರಜ್ಞಾಪೂರ್ವಕವಾಗಿ ನಿಲ್ಲಿಸಬೇಕು.

ಬೆಳಗಾವಿ ಅಧಿವೇಶನ : ಕಾಲಹರಣದ ಕಲಾಪವಾದೀತೇ?

'ಪ್ರತಿ ನಿಮಿಷವೂ ವ್ಯರ್ಥವಾಗಬಾರದು, ಅದರ ಸದ್ಬಳಕೆಯಾಗಲಿ' ಎಂದು ವಿಧಾನ ಸಭೆಯ ಸಭಾಧ್ಯಕ್ಷ ಕಾಗೋಡು ತಿಮ್ಮಪ್ಪನವರು ಸದನದ ಆರಂಭಕ್ಕೆ ಮೊದಲು ಹೇಳಿದ್ದರು. ಹಾಗೆ ಹೇಳಲು ಅವರಿಗೆ ಕಾರಣಗಳಿದ್ದವು. ಈ ಬಾರಿಯೂ ಹಿಂದಿನಂತೆ ಸದನ ಗದ್ದಲ–ಗೋಜುಗಳಿಂದ ತುಂಬಿ ಕಾಲಹರಣವೇ ಕಲಾಪ ಎನ್ನುವಂತಾಗುವ ಸೂಚನೆ ದೊರೆತಿತ್ತು. ಚಳಿಗಾಲದಲ್ಲಿ ಬೆಳಗಾವಿಯಲ್ಲಿ ಸದನದ ಕಲಾಪಗಳು ನಡೆಯಬೇಕು ಎನ್ನುವಾಗ ಉತ್ತರ ಕರ್ನಾಟಕದ ಜನತೆಯ ಪ್ರಮುಖ ಪ್ರಶ್ನೆಗಳಿಗೊತ್ತು ಸಿಗಬೇಕು ಮತ್ತು ಪರಿಹಾರ ಕೊಡುವ ಅಧಿವೇಶನವನ್ನಾಗಿಯೇ ನಡೆಸುವುದಾಗಿ ಬಿಂಬಿಸಲಾಗಿತ್ತು. ಆದರೆ ಈಗ ಕಳೆದ ನಾಲ್ಕು ದಿನಗಳ ಕಲಾಪಗಳನ್ನು ನೋಡಿದರೆ ಜನರ ಬದುಕಿಗಿಂತ ತಮ್ಮ ರಾಜಕೀಯ ಮೇಲಾಟಗಳೇ ಪ್ರಧಾನ ಎಂಬುದಕ್ಕೆ ಆ ಎಲ್ಲರೂ ಸ್ಪರ್ಧೆಗಿಳಿದಿರುವುದು ಕಾಣುತ್ತದೆ. ಇಲ್ಲಿ ಈ ಭಾಗದಲ್ಲಿ ಸಿಗುವ ಮಾಧ್ಯಮ ಪ್ರಚಾರವೇ ಈ ಹೈಪರ್ ಚಟುವಟಿಕೆಗಳ ಒಂದು ಆಕರ್ಷಣೆಯ ಕೇಂದ್ರ ಬಿಂದೂ ಕೂಡ. ಹೀಗಾಗಿ ಜನರ ಕಣ್ಣಿಗೆ ಮಣ್ಣು ತೂರುವ ವರಸೆ!



ಬೆಳಗಾವಿಯಲ್ಲಿ ಅಧಿವೇಶನ ಸೇರುವ ಇಂಗಿತ ಪ್ರಕಟವಾದ ಕೂಡಲೇ ಆಡಳಿತ ಪಕ್ಷಕ್ಕೆ ಹೇಗೆಲ್ಲಾ ಮುಜುಗರ, ಅಡ್ಡಿ ಒಡ್ಡಬಹುದೆಂದು ಅಧಿಕೃತ ವಿರೋಧ ಪಕ್ಷವಾದ ಬಿ.ಜೆ.ಪಿ. ತನ್ನ ಯೋಜನೆಗಳನ್ನು ಹೊರಹಾಕ ತೊಡಗಿತು. ಬಿಜೆಪಿಗೆ ಜನರ ಪ್ರಶ್ನೆಗಳಿಗಿಂತ ಆಡಳಿತ ಪಕ್ಷವನ್ನು ಮುಜುಗರಕ್ಕೆ ಈಡು ಮಾಡುವುದೇ ಪ್ರಧಾನ. ಅದಕ್ಕೆ ಸರಿ ಹೊಂದುವ ವಿಷಯಗಳನ್ನು ಹೊಸೆಯಿತೇ ಹೊರತು ಜನರ ಪ್ರಶ್ನೆಗಳೆಂದು ಕೈಗೆತ್ತಿಕೊಂಡ ಕಬ್ಬು ಬೆಳೆಗಾರರ ಪ್ರಶ್ನೆಯೂ ಕೂಡ ನಿಜ ಕಾಳಜಿಯಿಂದಲ್ಲ.

ಹಾಗೆಯೇ ಕಾಂಗ್ರೆಸ್ ಪಕ್ಷವೂ ಸಹ ಸದನದ ಕಲಾಪಗಳನ್ನು ಅರ್ಥಪೂರ್ಣವಾಗಿಸಲು ಗಂಭೀರ ಸಿದ್ಧತೆಗಳನ್ನು ಮಾಡಿಕೊಳ್ಳಲಿಲ್ಲ. ಪ್ರಸ್ತಾಪಿಸುವ ಪ್ರಶ್ನೆಗಳನ್ನು ಗಂಭೀರವಾಗಿ ಜನರ ಮುಂದೆ ಇಡಲಿಲ್ಲ. ಆಡಳಿತ ಮತ್ತು ವಿರೋಧ ಪಕ್ಷಗಳ ವೈಖರಿ ಗಮನಿಸಿದರೆ ಸದನದ ಕಲಾಪಗಳನ್ನು ಹೇಗೋ ಸಾಗಿಸುವ ಇರಾದೆ ಇದ್ದಂತಿತ್ತು. ಈ ನಾಲ್ಕು ದಿನಗಳಲ್ಲಿ ಕಬ್ಬು ಬೆಳೆಗಾರರ ಪ್ರಶ್ನೆ ಮೇಲೆ ಸದನದ ಒಳಗೂ, ಹೊರಗೂ ಬಿಜೆಪಿ ಗದ್ದಲ ಎಬ್ಬಿಸಿದೆ. ಪ್ರಿಯಾಂಕ ಗಾಂಧಿಯವರ ಭಾವಚಿತ್ರವನ್ನು ಅಸಭ್ಯವಾಗಿ ವೀಕ್ಷಿಸಿದ ಬಿಜೆಪಿ ಶಾಸಕ ಹೀನ ವರ್ತನೆಗೆ ಇನ್ನೆರಡು ದಿನಗಳು ಬಲಿಯಾಗಿವೆ. ಹೀಗೆಯೇ ಹತ್ತು ದಿನಗಳ ಕಲಾಪಗಳು ಕಿರುಚಾಟಗಳ ವೀರಾವೇಶದಲ್ಲಿ ಜಾರಿದರೂ ಆಶ್ಚರ್ಯವಿಲ್ಲ.

ನಿಜಕ್ಕೂ ಸರಕಾರ ಪ್ರಾಮಾಣಿಕವಾಗಿ ಕೈಗೆತ್ತಿಗೊಳ್ಳಬೇಕಾದ ಹಲವು ಅಭಿವೃದ್ಧಿಯ ಪ್ರಶ್ನೆಗಳು ಉತ್ತರ ಕರ್ನಾಟಕದಲ್ಲಿವೆ. ಕಬ್ಬು ಬೆಳೆಗಾರರ ಪ್ರಶ್ನೆಯ ಜೊತೆ, ಭತ್ತ, ತೊಗರಿ, ಶೇಂಗಾ, ಸೂರ್ಯಕಾಂತಿ ಮುಂತಾದ ಫಸಲಿಗೆ ಬೆಂಬಲಿತ ಬೆಲೆ ನಿಗದಿಯಾಗಬೇಕಿದೆ. ಅತಿವೃಷ್ಟಿ–ಬರದ ಬವಣೆಗೆ ಸಿಲುಕಿದ ತಾಲೂಕುಗಳು ಇಲ್ಲಿವೆ. ಕೃಷ್ಣಾ ಐ ತೀರ್ಪಿನಲ್ಲಿ ಲಭ್ಯವಾಗುವ ನೀರಿನ ಬಳಕೆ, ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಕ್ರಮಗಳೂ ಅಗತ್ಯವಾಗಿವೆ. ಮುಖ್ಯವಾಗಿ ಬಕರ್ ಹುಕುಂ ಸೇರಿ ಅರಣ್ಯ ಭೂಮಿ ಹಂಚಿಕೆ, ಪಟ್ಟಾ ನೀಡಿಕೆ ಜ್ವಲಂತ ವಿಷಯವಾಗಿದೆ. ಸರಕಾರ ಹೊಸ ಕೈಗಾರಿಕೆಯ ನೀತಿಯನ್ನು ಪ್ರಕಟಿಸಿದೆ, ಆದರೆ ಈ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸುವ ಉದ್ದಿಮೆಗಳ ಸ್ಥಾಪನೆಯ ರೂಪು ರೇಷೆ ಏನು? 371 ಜೆ ವಿಧಿಯ ಅನ್ವಯದ ಜಾರಿ ಹೇಗೆ? ವಿದ್ಯುತ್ ಉತ್ಪಾದನೆಯ ಪ್ರಶ್ನೆ, ರಸ್ತೆ, ಕುಡಿಯುವ ನೀರು, ಮುಂತಾದ ಮೂಲ ಸೌಕರ್ಯಗಳು, ಮುಖ್ಯವಾಗಿ ರೇಷನ್, ಗ್ರಾಮೀಣ ಉದ್ಯೋಗ ಖಾತ್ರಿ, ವಸತಿ, ಶಿಕ್ಷಣ ಇತ್ಯಾದಿಗಳು ನಿರ್ಲಕ್ಷಿತವಾಗಿವೆ. ಕಾರ್ಮಿಕರ–ಅಸಂಘಟಿತರ ಕಾರ್ಮಿಕರ ಪ್ರಶ್ನೆಗಳು ಮೂಲೆಗೊತ್ತಲ್ಪಟ್ಟಿವೆ. ರಾಜ್ಯದಲ್ಲಿಯೂ ದಲಿತರು, ದುರ್ಬಲರು, ಮಹಿಳೆಯರ ಮೇಲಿನ ದೌರ್ಜನ್ಯ , ಕೋಮು ದ್ವೇಷ ಹೆಚ್ಚಿಸುವ ಧಾಳಿಗಳು ನಡೆದಿವೆ. ಇವೆಲ್ಲಾ ಇತ್ಯರ್ಥ ಕಾಣಬೇಕಾದ ಕೆಲವು ಪ್ರಶ್ನೆಗಳು.

ವಿರೋಧ ಪಕ್ಷವಾಗಿರುವ ಬಿಜೆಪಿಗೆ ಇವು ಗಂಭೀರ ಪ್ರಶ್ನೆಗಳೇನಲ್ಲ. ಅದು ಈ ಮೊದಲು 'ಕಳಂಕಿತ ಸಚಿವರ' ರಾಜೀನಾಮೆ, ಸರಕಾರದ ವೈಫಲ್ಯಗಳ ವಿರುದ್ಧ 50,000 ಜನರೊಂದಿಗೆ ಮುತ್ತಿಗೆ ಹಾಕುವುದಾಗಿ ತಿಳಿಸಿತ್ತು. ಆದರೆ ಅಷ್ಟು ಜನರನ್ನೂ ಅಣಿನೆರಸಲಾಗಲಿಲ್ಲ. ಮೊದಲ ದಿನವೇ ಸರಕಾರದ ವಿರುದ್ಧ ಕೋಲಾಹಲ ಸೃಷ್ಟಿಸುವುದಾಗಿ ಘೋಷಿಸಿತ್ತು. ಆಧರೆ ಅವರ ಶಾಸಕರೇ ಸರಿಯಾಗಿ ಕಲಾಪಕ್ಕೆ ಹಾಜರಾಗಲಿಲ್ಲ. ಸದನದ ಕಲಾಪಗಳು ನಡೆದಿರುವಾಗಲೇ ಅಲ್ಲಿ ಹಾಜರಾಗಿದ್ದ ಶಾಸಕ ಪ್ರಭು ಚೌಹಾಣ್ ಪ್ರಿಯಾಂಕರವರ ಭಾವಚಿತ್ರವನ್ನು ಅಸಭ್ಯವಾಗಿ ನೋಡುತ್ತಾ ತಮ್ಮ ಹೇಯ 'ಸಂಸ್ಕೃತಿ'ಯನ್ನು ತೋರಿಸಿದ. ಈ ಹಿಂದೆ–ಯೂ ಬಿಜೆಪಿಯ ಸಚಿವರೇ ಅಶ್ಲೀಲ ಚಿತ್ರಗಳನ್ನು ನೋಡಿದ್ದರು. ಆದರೆ ಇದು ತಪ್ಪು ಎನ್ನುತ್ತಲೇ ಅದನ್ನು ಸಮರ್ಥಿಸಿದ ಬಿಜೆಪಿ ನಾಯಕರ ವರ್ತನೆ ಹೇಯಕರ, ಖಂಡನೀಯ. ಸದನದ ಮಹತ್ವ, ಗಂಭೀರತೆ ಹಾಳಾಗುತ್ತಿರುವುದು ಪ್ರಜಾಪ್ರಭುತ್ವಕ್ಕೆ ಒದಗಿದ ದುರಂತದ ಸಂದರ್ಭ.

ಈ ಕಲಾಪಗಳು ನಡೆಯುವಾಗಲೂ ಆಡಳಿತ ಪಕ್ಷವಾದ ಕಾಂಗ್ರೆಸ್‌ನಲ್ಲಿದ್ದ ಒಳಜಗಳ ಬಯಲಿಗೆ ಬಂದಿದ್ದು ಮತ್ತೊಂದು ವಿಶೇಷ. ಅಧಿವೇಶನ ಮುಗಿದ ಬಳಿಕ ಕೆಲವು ಸಚಿವರನ್ನು ತೆಗೆಯಲಾಗುವುದು ಎಂಬ ಸುದ್ದಿ ಪ್ರಾಧಾನ್ಯತೆಯನ್ನು ಪಡೆಯಿತು. ಅದರಲ್ಲಿ ವಿಶೇಷವಾಗಿ ಮಂಡಳಿ, ನಿಗಮಗಳಿಗೆ ತನ್ನವರನ್ನೆಲ್ಲಾ ನೇಮಿಸಲಿಲ್ಲವೆಂದು ಖ್ಯಾತೆ ತೆಗೆದಿರುವ ಸಚಿವ ಅಂಬರೀಶ್ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿದ್ದು ದೊಡ್ಡ ಸುದ್ದಿಯಾಗಿ ಬಿಜೆಪಿ ಬಾಯಿಗೆ ರಸಗವಳವಾಗಿ ಚೌಹಾಣ್ ಪ್ರಕರಣದಲ್ಲಿ ಮಸಿ ಬಳಿದುಕೊಂಡಿದ್ದ ಮುಖವನ್ನು ಒರೆಸಿಕೊಳ್ಳಲು ಅವಕಾಶ ಕಲ್ಪಿಸಿತು.

ಇನ್ನು ವಿರೋಧ ಪಕ್ಷದ ಸ್ಥಾನ ಕಳೆದುಕೊಂಡು, ಆಂತರಿಕವಾಗಿ ಶಾಸಕರ ಬಂಡಾಯವನ್ನು ಎದುರಿಸುತ್ತಿರುವ ಜೆ.ಡಿ.ಎಸ್ ಈ ಕಲಾಪಗಳಲ್ಲಿ ಅಸ್ತಿತ್ವಕ್ಕಾಗಿ ಹೆಣಗುವ ಸ್ಥಿತಿಯಲ್ಲಿದೆ. ನಾಯಕ ಕುಮಾರಸ್ವಾಮಿಯವರೇನೋ ಹಲವು ವಿಷಯಗಳನ್ನು ಎತ್ತಿದ್ದಾರೆ, ಆದರೆ ಅವನ್ನೆಲ್ಲಾ ಪರಿಣಾಮಕಾರಿಯಾಗಿ ಮಂಡಿಸಲು, ಛಾಪು ಮೂಡಿಸಲು ಸಾಧ್ಯವೇ, ಅದಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಗಳು ಅವಕಾಶ ನೀಡುವವೇ ನೋಡಬೇಕಷ್ಟೇ.


ಈ ಹಿಂದಿನಿಂದಲೂ ಗಮನಿಸಿದಂತೆ ಬೆಳಗಾವಿಯಲ್ಲಿ ಇದೂ ಸೇರಿ ನಾಲ್ಕನೆಯ ಅಧಿವೇಶನ. ಹಿಂದಿನ ಅಧಿವೇಶನಗಳಲ್ಲಿ ಈ ಭಾಗದ ಬಗ್ಗೆ ಹಲವು ಪ್ರಕಟನೆ, ನಿರ್ಧಾರಗಳನ್ನು ಮಾಡಿಯಾಗಿದೆ, ಮರೆತೂ ಆಗಿದೆ. ಹೀಗಾದರೆ ಅಧಿವೇಶನ ನಡೆಸುವುದಾದರಲ್ಲಿ ಯಾವ ಸಾರ್ಥಕತೆ ಇದೆ? ಕೇವಲ ಹೇಳಿಕೊಳ್ಳಲೋ? ಆನರ ತೆರಿಗೆಯ ಹಣ, ಸಮಯ ಹಾಳು ಮಾಡುವ ಇಂತಹ ಜಾತ್ರೆಗಳಿಂದ ಜನರಿಗೇನು ಪ್ರಯೋಜನ?

ಈ ಹೊತ್ತಿನಲ್ಲಿಯೂ ಉಳಿದ ದಿನಗಳ ಕಲಾಪಗಳು ಅರ್ಥಪೂರ್ಣವಾಗಿ ನಡೆಯಲಿ, ಜನರ ಸಂಕಷ್ಟಗಳಿಗೆ ಪ್ರಜಾಪ್ರಭುತ್ವದ ವೇದಿಕೆ ಒಂದಿಷ್ಟು ಪರಿಹಾರಗಳನ್ನು ನೀಡಲಿ ಎಂಬ ನಿರೀಕ್ಷೆ ಜನರದ್ದು.

‘ಮೂಲ ಸೌಕರ್ಯಗಳ ಕೊರತೆ ನಿವಾರಿಸಿ’ ಬಳ್ಳಾರಿ ನಗರ 7ನೇ ಸಮ್ಮೇಳನದ ಆಗ್ರಹ



ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಬಳ್ಳಾರಿ ನಗರದ 7ನೇ ಸಮ್ಮೇಳನವು ಡಿಸೆಂಬರ್ 07, 2014ರಂದು ಬಳ್ಳಾರಿ ನಗರದ ಗಾಂಧಿ ಭವನದಲ್ಲಿ ನಡೆಯಿತು. ಸಮ್ಮೇಳನದ ಪ್ರತಿನಿಧಿಗಳನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸತ್ಯಬಾಬುರವರು ಮಾತನಾಡುತ್ತಾ ಸಿಪಿಐ(ಎಂ) ಪಕ್ಷ ಕಳೆದ 30 ವರ್ಷಗಳಿಂದ ಬಳ್ಳಾರಿ ನಗರದಲ್ಲಿ ಜನಪರ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಅಸಂಘಟಿತ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ಆಟೋ ಚಾಲಕರು, ಮಹಿಳೆಯರು, ವಿದ್ಯಾರ್ಥಿ, ಯುವಜನರ ಪರವಾಗಿ ಹೋರಾಟ ನಡೆಸುತ್ತಿದೆ. ಬಳ್ಳಾರಿ ನಗರದ ವಿವಿಧ ಪ್ರದೇಶದಲ್ಲಿ ಜನರು ಮೂಲ ಸೌಕರ್ಯಗಳಿಲ್ಲದೇ ಪರದಾಡುತ್ತಿದ್ದಾರೆ. ಕುಡಿಯುವ ನೀರಿನ ಸಮಸ್ಯೆ, ಕಸ ವಿಲೇವಾರಿ ಸಮಸ್ಯೆ, ತೆರೆದ ಚರಂಡಿ ಸ್ವಚ್ಛಗೊಳಿಸದಿರುವ ಸಮಸ್ಯೆಗಳಿಂದಾಗಿ ಜನರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ವಿವಿಧ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಈ ಕುರಿತು ಬಳ್ಳಾರಿ ಮಹಾ ನಗರ ಪಾಲಿಕೆ ನಿರ್ಲಕ್ಷ್ಯ ವಹಿಸಿದೆ. ಅದೇ ರೀತಿ ಕೇಂದ್ರ ರಾಜ್ಯ ಸರ್ಕಾರಗಳ ಜನವಿರೋಧಿ, ಕಾರ್ಮಿಕ, ಮಹಿಳಾ ವಿರೋಧಿ ನೀತಿಗಳ ವಿರುದ್ಧ ಪ್ರಬಲ ಹೋರಾಟಗಳನ್ನು ಸಂಘಟಿಸಲು ಪಕ್ಷವನ್ನು ಸಜ್ಜುಗೊಳಿಸಬೇಕಾಗಿದೆಯೆಂದು ಕರೆ ನೀಡಿದರು.



ನೂತನ ಕಾರ್ಯದರ್ಶಿ ಹುಳ್ಳಿ ಉಮೇಶ್

ನಂತರ ಜಿಲ್ಲಾ ಸಮಿತಿ ಸದಸ್ಯರಾದ ಹುಳ್ಳಿ ಉಮೇಶ್ ಮಾತನಾಡುತ್ತಾ ಬಳ್ಳಾರಿಯಲ್ಲಿ ಶಿಕ್ಷಣದ ವ್ಯಾಪಾರೀಕರಣ ತೀವ್ರಗೊಳ್ಳುತ್ತಿದೆ. ಮಕ್ಕಳು, ಮಹಿಳೆಯರು, ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ. ಇಂತಹ ದೌರ್ಜನ್ಯಗಳು ಹಾಗೂ ಜನ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಿಪಿಐ(ಎಂ) ಪಕ್ಷವನ್ನು ವಿಸ್ತರಿಸಬೇಕಿದೆ ಎಂದರು.

ಸಮ್ಮೇಳನದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಿಪಿಐ(ಎಂ) ಪಕ್ಷ ನಡೆಸಿದ ಹೋರಾಟ ಮತ್ತು ರಾಜಕೀಯ ಮಧ್ಯ ಪ್ರವೇಶದ ಕುರಿತು ಸಿದ್ಧಪಡಿಸಲಾದ ಕರಡು ವರದಿಯನ್ನು ಮಂಡಿಸಲಾಯಿತು. ವರದಿ ಮೇಲೆ ಭಾಗವಹಿಸಿದ್ದ ಪ್ರತಿನಿಧಿಗಳು ಚರ್ಚಿಸಿ ವರದಿಯನ್ನು ಅಂತಿಮಗೊಳಿಸಲಾಯಿತು. ಮುಂದಿನ ಮೂರು ವರ್ಷಗಳಲ್ಲಿ ಪಕ್ಷ ಹೇಗೆ ಕಾರ್ಯನಿರ್ವಹಿಸಬೇಕೆಂದು ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು.

ಸಮ್ಮೇಳನವು 7 ಪ್ರಮುಖ ನಿರ್ಣಯಗಳನ್ನು ಅಂಗೀಕರಿಸಿದೆ

ಬಳ್ಳಾರಿ ನಗರದಲ್ಲಿರುವ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ, ನಗರದಲ್ಲಿ ಕಸ ವಿಲೇವಾರಿ ಹಾಗೂ ಚರಂಡಿ ಸ್ವಚ್ಛತೆ ಮಾಡಲು ಮಹಾನಗರ ಪಾಲಿಕೆಯನ್ನು ಆಗ್ರಹಿಸಿ, ಖಾಸಗಿ ಶಿಕ್ಷಣ ಸಂಸ್ಥೆಗಳ ಡೊನೇಷನ್ ಹಾವಳಿ ವಿರೋಧಿಸಿ, ತಾಲೂಕಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು, ವಿದ್ಯಾರ್ಥಿನಿಯರು, ಮಹಿಳೆಯರು, ದಲಿತರ ಮೇಲಿನ ದೌರ್ಜನ್ಯ ತಟೆಗಟ್ಟಲು, ರೇಷನ್ ಕಾರ್ಡ್ ಕಡಿತ ವಿರೋಧಿಸಿ ಹಾಗೂ ರೇಷನ್ ವ್ಯವಸ್ಥೆಯ ಸಮರ್ಪಕ ಜಾರಿಗಾಗಿ, ಬೆಲೆ ಏರಿಕೆ ನಿಯಂತ್ರಣಕ್ಕಾಗಿ ಆಗ್ರಹಿಸಿ ಹೋರಾಟಗಳನ್ನು ರೂಪಿಸುವುದು.

ನಂತರ ಸಮ್ಮೇಳನವು ಸರ್ವಾನುಮತದಿಂದ ಹುಳ್ಳಿ ಉಮೇಶ್, ಚಂದ್ರಕುಮಾರಿ, ಕುಮಾರ್.ಎನ್, ಸುಭಾನ್, ದೊಡ್ಡ ಬಸವರಾಜ್, ಸೇರಿದಂತೆ 7 ಜನರ ನೂತನ ಸಮಿತಿಯನ್ನು ಆಯ್ಕೆ ಮಾಡಿತು. ಆಯ್ಕೆಯಾದ ಸಮಿತಿಯು ಹುಳ್ಳಿ ಉಮೇಶ್‌ರವರನ್ನು ನಗರ ಸಮಿತಿ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಿದೆ. •

ಮಳವಳ್ಳಿಯ ಬಾವಲಿ-ಕೊರಟಗೆರೆ ರಾಜ್ಯ ಹೆದ್ದಾರಿ 33ನ್ನು ವಿಸ್ತರಣೆ ಭೂಮಿ ವಶ ಅವೈಜ್ಞಾನಿಕ ಭೂಬೆಲೆ ನಿಗದಿ–ರೈತರ ಒಪ್ಪಿಗೆ ಇಲ್ಲದೆ ಭೂಸ್ವಾಧೀನಕ್ಕೆ ಪ್ರತಿರೋಧ

ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್)ಗಳ ಹೆಸರಿನಲ್ಲಿ ಉದ್ಯಮಪತಿಗಳಿಗೆ ಧಾರಾಳವಾಗಿ ಭೂಮಿ ನೀಡುವುದು, ಗೃಹ ಮಂಡಳಿಯವರು ನಿವೇಶನ ವಸತಿಗಾಗಿ ಭೂಸ್ವಾಧೀನ, ರಸ್ತೆ ನಿರ್ಮಾಣ ಮತ್ತು ಅಗಲೀಕರಣಕ್ಕಾಗಿ ಹಾಗೂ ಗಣಿಕಾರಿ–ಕೆ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡು ರೈತರನ್ನು ಒಕ್ಕಲೆಬ್ಬಿಸುವುದು, ಅತಿ ಕಡಿಮೆ ಪರಿಹಾರ ನೀಡಿ ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಟೌನ್‌ಶಿಪ್‌ಗಳು, ರೆಸಾರ್ಟ್‌ಗಳು, ರಿಯಲ್ ಎಸ್ಟೇಟ್‌ಗಾಗಿ ಮತ್ತು ವಾಣಿಜ್ಯ ಉದ್ದೇಶಕ್ಕೆ ನಿರಂತರ ಭೂಸ್ವಾಧೀನ ಪ್ರಕ್ರಿಯೆಗಳು ದೇಶದಲ್ಲಿ ನಡೆಯುತ್ತಿವೆ. ಈ ನೀತಿಗಳ ವಿರುದ್ಧ ಅಲ್ಲಲ್ಲಿ ರೈತರ ಹೋರಾಟಗಳು ನಡೆದು ಪೋಸ್ಕೊ ಹಾಗೂ ಮುಂತಾದ ಕಂಪನಿಗಳು ಹಾಗೂ ಸರ್ಕಾರಗಳನ್ನು ಭೂಸ್ವಾಧೀನದಿಂದ ಹಿಮ್ಮೆಟ್ಟಿಸಲು ಸಾಧ್ಯವಾಗಿದೆ. ಕೆಲವು ಕಡೆ ನ್ಯಾಯಯುತ ಪರಿಹಾರ ಪಡೆಯಲು ಸಾಧ್ಯವಾಗಿರುವ ಉದಾಹರಣೆಗಳಿವೆ.

ಕೆಶಿಪ್ ಹೆಸರಿನಲ್ಲಿ...

ರಾಜ್ಯ ಸರ್ಕಾರ ‘ಕೆಶಿಪ್’ ಹೆಸರಿನಲ್ಲಿ ತುಮಕೂರು ಜಿಲ್ಲೆ ಕೊರಟಗೆರೆಯಿಂದ ಮಂಡ್ಯ ಜಿಲ್ಲೆಯ ಮಳವಳ್ಳಿಯ ತನಕ ಬಾವಲಿ–ಕೊರಟಗೆ–ರೆ ರಾಜ್ಯ ಹೆದ್ದಾರಿ 33ನ್ನು ವಿಸ್ತರಿಸಲು ಸುಮಾರು 500 ಕೋಟಿ ವೆಚ್ಚದಲ್ಲಿ ರಾಜ್ಯ ಹೆದ್ದಾರಿಯ ರಸ್ತೆಯನ್ನು ಅಗಲೀಕರಣ ಮಾಡಲು ಹೊರಟಿದೆ. ಈ ಹೆದ್ದಾರಿಗೆ ಬಸ್‌ಸ್ಟಾಪ್‌ಗಳ ನಿರ್ಮಾಣ, ರಸ್ತೆಯ ತಿರುವುಗಳನ್ನು ನೇರ ರಸ್ತೆ ಮಾಡಲು ಹಾಗೂ ಅಗಲೀಕರಣ ಮಾಡಿ 80 ಕಿ.ಮೀ. ವೇಗದ ಪ್ರಯಾಣಕ್ಕೆ ಅನುಗುಣವಾಗಿ ರಸ್ತೆಯ ಗುಣಮಟ್ಟ ಮತ್ತು ಸುರಕ್ಷತೆ ಎಂಬ ಉದ್ದೇಶಕ್ಕಾಗಿ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಹೊರಟಿದೆ. ಮದ್ದೂರು ತಾಲ್ಲೂಕು ಗಡಿಯಾದ ನಿಡಸಾಲೆಯಿಂದ ಮಳವಳ್ಳಿಯ ತನಕ 200 ಮಂದಿ ರೈತರು ಅರ್ಧ ಗುಂಟೆಯಿಂದ ಅರ್ಧ ಎಕರೆ–ಯ ತನಕ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಮಂಡ್ಯ ಜಿಲ್ಲೆ ಉತ್ತರ ಕರ್ನಾಟಕದ ಹಾಗೆ ದೊಡ್ಡ ದೊಡ್ಡ ಭೂಮಾಲೀಕರ ಕೈಯಲ್ಲಿ ನೂರಾರು, ಸಾವಿರಾರು ಎಕರೆ ಭೂಮಿಯನ್ನು ಹೊಂದಿರುವ ಜಿಲ್ಲೆಯಲ್ಲ, ಹೈದರಾಲಿ, ಟಿಪ್ಪುಸುಲ್ತಾನ್ ಕಾಲದಲ್ಲೇ ಅವರು ಸ್ಥಳೀಯ ಪಾಳೆಯಗಾರರನ್ನು ಮಟ್ಟ ಹಾಕಿದ ದೆಸೆಯಿಂದ ಜಿಲ್ಲೆಯಲ್ಲಿ ಉಳುಮೆ ಮಾಡುವ ರೈತರು ಭೂಮಿಯ ಮೇಲೆ ಹಕ್ಕು ಪಡೆದುಕೊಂಡು ತುಂಡು ಹಿಡುವಳಿದಾರರೆ ಹೆಚ್ಚಾಗಿದ್ದಾರೆ. ಅರ್ಧ ಎಕರೆಯಿಂದ 2 ಎಕರೆ ಭೂಮಿಯನ್ನು ಹೊಂದಿರುವವರ ಸಂಖ್ಯೆ ಶೇಕಡ 70% ರಷ್ಟಿದ್ದಾರೆ.

ಅತ್ಯಲ್ಪ ಪರಿಹಾರ

ಭೂಸ್ವಾಧೀನ ಪಡಿಸಿಕೊಂಡ ಭೂಮಿಗೆ ರಾಜ್ಯ ಸರ್ಕಾರ ಅವೈಜ್ಞಾನಿಕ ಬೆಲೆಯನ್ನು ನಿಗದಿಮಾಡಿ ಅಲ್ಪ ಪರಿಹಾರ ಘೋಷಿಸಿದೆ. ಈ ಪರಿಹಾರ ನಿಗದಿಗೆ ಆಯ್ಕೆಯ ಮಾನದಂಡವೇನೆಂದರೆ ಉಪನೋಂದಣಾಧಿಕಾರಿ ಕಛೇರಿಯ ಮಾರ್ಗಸೂಚಿ ಬೆಲೆ. ಅಂದರೆ ನೋಂದಣಿಗಾಗಿ ನಿಗದಿಪಡಿಸಿರುವ ನೋಂದಣಿ ಶುಲ್ಕದ 3ವರ್ಷಗಳ ಸರಾಸರಿ ನೋಡಿ ನಿಗದಿ ಮಾಡಿದ್ದಾರೆ. ಆದರೆ ಒಂದೊಂದು ಎಲ್ಲೆಗೆ ಒಂದೊಂದು ರೀತಿಯ ಬೆಲೆ ಇದೆ. ಎಲ್ಲೆಯ ಅಂತರ ಒಂದು ಅಡಿ ವ್ಯತ್ಯಾಸಕ್ಕೂ ಬೇರೆ ಬೇರೆ ಬೆಲೆ ಇದೆ. ಆದರೆ ಮಾರುಕಟ್ಟೆಯ ಬೆಲೆ ಅಜಗಜಾಂತರ ವ್ಯತ್ಯಾಸವಿದೆ. ಮಳವಳ್ಳಿ ಟೌನ್ ಪಕ್ಕದಲ್ಲಿ 1 ಗುಂಟೆ ನಿವೇಶನಕ್ಕೆ ಯೋಗ್ಯವಾದ ಜಮೀನು 3 ರಿಂದ 5 ಲಕ್ಷವಿದೆ. ಆದರೆ ಪರಿಹಾರ ಘೋಷಿಸಿರುವುದು ಕೇವಲ 69,000/- ಮಾತ್ರ. ಮದ್ದೂರು ಟೌನ್ ಪಕ್ಕದ ಗೊರವನಹಳ್ಳಿ ಎಲ್ಲೆಗೆ 1 ಗುಂಟೆಗೆ 3,66,000/– ಪಕ್ಕದ ಒಂದು ಅಡಿ ಅಂತರದ ಬೇರೊಂದು ಎಲ್ಲೆಗೆ ಕೇವಲ 61,000/– ಬೆಲೆ ನಿಗದಿ ಮಾಡಿದ್ದಾರೆ. ಇದು ಎಂತಹ ಅವೈಜ್ಞಾನಿಕ ನೀತಿಯೆಂದು ಯಾರಿಗಾದರೂ ಅರ್ಥವಾಗುತ್ತದೆ. ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಕನಿಷ್ಠ ಮಾರುಕಟ್ಟೆ ಬೆಲೆಯ ಮೂರು ಪಟ್ಟು ಪರಿಹಾರ ಕೊಡಬೇಕೆಂಬ ನಿಯಮವಿದೆ. ಅದರಂತೆ 1 ಗುಂಟೆಗೆ 9 ರಿಂದ 15 ಲಕ್ಷ ಪರಿಹಾರ ಸಿಗಬೇಕು. ಸದರಿ ಭೂ ಬೆಲೆಯು ಅನ್ಯಾಯದಿಂದ ಅಸಮಾನತೆಯಿಂದ ಕೂಡಿದೆ. ಅಧಿಕಾರಿಗಳು ರೈತರಿಗೆ ಒಪ್ಪಿಗೆಯಾಗುವ ದರವನ್ನೇ ನೀಡುತ್ತೇವೆ. ನಿಮ್ಮ ಸಹಮತದೊಂದಿಗೆ ಕೆಲಸ ಮಾಡುತ್ತೇವೆ ಎಂದು ಹೇಳಿ ಎನ್.ಜಿ.ಒ.ಗಳ ಮೂಲಕ ದಾಖಲಾತಿಗಳನ್ನು ಸಂಗ್ರಹಿಸಿದರು. ಎನ್.ಜಿ.ಒ.ಗಳು ರೈತರನ್ನು ಬೆದರಿಸಿ ದಾಖಲೆಗಳನ್ನು ಪಡೆದು ಖಾಲಿ ಪತ್ರಕ್ಕೆ ಸಹಿ ಮಾಡಿಸಿಕೊಂಡಿದ್ದಾರೆ.

‘ಕೊಟ್ಟಷ್ಟು ಪಡೆಯಿರಿ, ಇಲ್ಲಾವಾದರೆ ಅದೂ ಸಿಗುವುದಿಲ್ಲ.’

‘ಸರ್ಕಾರ ಕೊಡುವ ಪರಿಹಾರವನ್ನು ಪಡೆದುಕೊಳ್ಳಿ, ಇಲ್ಲವಾದರೆ ನಿಮಗೆ ಆ ಹಣವೂ ಸಿಗುವುದಿಲ್ಲ. ಈ ಪರಿಹಾರದ ಹಣವನ್ನು ಕೋರ್ಟಿಗೆ ಜಮಾ ಮಾಡುತ್ತೇವೆ. ಆಗ ನೀವು ವಕೀಲರ ಮುಖಾಂತರ ಹಣ ಪಡೆಯಬೇಕು. ಹತ್ತಾರು ವರ್ಷಗಳ ಸಮಯ ಬೇಕಾಗಬಹುದು.’ ಎಂದು ಭಯ ಹುಟ್ಟಿಸಿದ್ದಾರೆ. ಬೆಲೆ ನಿರ್ಧಾರಣಾ ಸಮಿತಿ ಸಭೆ ಕರೆದು ‘ನಾವು ಕೊಟ್ಟಷ್ಟು ಪಡೆಯಿರಿ, ಇಲ್ಲಾವಾದರೆ ಅದೂ ಸಿಗುವುದಿಲ್ಲ.’ ಎಂದು ಮತ್ತೊಮ್ಮೆ ಬೆದರಿಸಿದ್ದಾರೆ. ಆದರೆ ಕಾನೂನಿನ ಪ್ರಕಾರ 80% ರಷ್ಟು ರೈತರ ಒಪ್ಪಿಗೆ ಇದ್ದರೆ ಮಾತ್ರ ಭೂಸ್ವಾಧೀನ ಮಾಡಿಕೊಳ್ಳಬಹುದು. ಇಲ್ಲಿ ಈ ನಿಯಮವನ್ನು ಗಾಳಿಗೆ ತೂರಿದ್ದಾರೆ. ರೈತರಿಗೆ ಇವರ ನಯವಂಚಕತನ ಅರ್ಥವಾಗಿ ರೈತರ ಒಗ್ಗಟ್ಟು ಮಾಡಲು ಕರ್ನಾಟಕ ಪ್ರಾಂತ ರೈತ ಸಂಘ ಯತ್ನಿಸಿದೆ.

ಮದ್ದೂರಿನಲ್ಲಿ ಕೆಶಿಪ್ ರಸ್ತೆ ಭೂಸಂತ್ರಸ್ತರ ಸಮಾವೇಶ

ಕೆಶಿಪ್‌ನವರ ಮೋಸ ವಂಚನೆಯನ್ನು ರೈತರಿಗೆ ತಿಳಿಸಿ ಮದ್ದೂರು ಪಟ್ಟಣದಲ್ಲಿ ಕೆಶಿಪ್ ರಸ್ತೆ ಭೂಸಂತ್ರಸ್ತರ ಸಮಾವೇಶ ನಡೆಸಲಾಯಿತು. ಈ ಸಮಾವೇಶಕ್ಕೆ ಕೆ.ಪಿ.ಆರ್.ಎಸ್. ರಾಜ್ಯ ಉಪಾಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ ಆಗಮಿಸಿ ಇದರ ಸಾಧಕ ಬಾಧಕಗಳನ್ನು ವಿವರಿಸಿದರು. ಈ ಸಮಾವೇಶದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಟಿ. ಯಶವಂತ್, ಎನ್.ಎಲ್. ಭರತ್‌ರಾಜ್, ಧನಂಜಯ, ಶಿವಣ್ಣ, ಡಿ.ಕೆ. ಕೃಷ್ಣ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕೆಶಿಪ್ ರಸ್ತೆ ಭೂಸಂತ್ರಸ್ತರ ಹೋರಾಟ ಸಮಿತಿ ರಚಿಸಲಾಯಿತು. ಅಧ್ಯಕ್ಷರಾಗಿ ಡಿ.ಕೆ. ಕೃಷ್ಣ ಡಿ.ಎ.ಕೆರೆ, ಉಪಾಧ್ಯಕ್ಷರಾಗಿ ರಾಮಕೃಷ್ಣ ಹನುಮಂತಪುರ, ಎನ್. ಹೆಚ್. ರಾಮಲಿಂಗಯ್ಯ ಉಪ್ಪಿನಕೆರೆ, ಕಾರ್ಯದರ್ಶಿಯಾಗಿ ➡

ಸಿ.ಪಿ.ಐ(ಎಂ) ಕುಂದಾಪುರ ತಾಲೂಕು 21 ನೇ ಸಮ್ಮೇಳನ

“ಮೋದಿ ಸರ್ಕಾರ ಕಾರ್ಮಿಕ ವರ್ಗದ ವಿರೋಧಿ” –ಎಸ್. ವರಲಕ್ಷ್ಮಿ

ಮೋದಿ ಸರ್ಕಾರವು ಕಾರ್ಮಿಕ ವರ್ಗದ ವಿರೋಧಿ ಯಾಗಿದ್ದು, ಕಾರ್ಮಿಕರ ಕಾಯ್ದೆಗಳನ್ನು ಮಾಲಿಕರ ಪರವಾಗಿ ತಿದ್ದುಪಡಿ ಮಾಡಲು ಹೊರಟಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಎಸ್. ವರಲಕ್ಷ್ಮಿ ಹೇಳಿದರು.

ಕುಂದಾಪುರ ತಾಲೂಕು ಹೆಮ್ಮಾಡಿ ಗ್ರಾಮ–ಕಾಮ್ರೇಡ್ ಮುಕುಂದನ್ ನಗರದ, ಕಾಮ್ರೇಡ್ ದೋಗು ಸುವರ್ಣ ವೇದಿಕೆಯಲ್ಲಿ ಡಿಸೆಂಬರ್ 7 ಮತ್ತು 8, 2014 ರಂದು ಜರಗಿದ ಸಿ.ಪಿ.ಐ.(ಎಂ) ತಾಲೂಕು 21 ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ದೇಶದಲ್ಲಿ ಹೆಚ್ಚುತ್ತಿರುವ ಅಸಮಾನತೆ ಬಂಡವಾಳಶಾಹಿಗಳ ಅಟ್ಟಹಾಸ ಕೋಮುವಾದಿಗಳ ಆಕ್ರಮಣವನ್ನು ಸಮರ್ಥವಾಗಿ ಎದುರಿಸಲು ದುಡಿಯುವ ವರ್ಗಗಳ ಜನರನ್ನು ಅಣಿನೆರಸಬೇಕೆಂದು ಅವರು ಕರೆ ನೀಡಿದರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಹಿರಿಯ ಮುಖಂಡ, ಯು. ದಾಸ ಭಂಡಾರಿ ಧ್ವಜಾರೋಹಣ ನೆರವೇರಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪಿ. ವಿಶ್ವನಾಥ. ರೈ, ಬಾಲಕೃಷ್ಣ ಶೆಟ್ಟಿ, ಮಹಾಬಲ ವಡೇರ ಹೊಬಳಿ, ಮುಖಂಡರಾದ ಎಚ್. ನರಸಿಂಹ, ವೆಂಕಟೇಶ ಕೋಣಿ, ತಾಲೂಕು ಸಮಿತಿ ಸದಸ್ಯರಾದ ಸುರೇಶ ಕಲ್ಲಾಗರ, ಸುಬ್ರಹ್ಮಣ್ಯ ಆಚಾರ್ ಮೊದಲಾದವರು ವೇದಿಕೆಯಲ್ಲಿ ಇದ್ದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ರಾಜೀವ ಪಡುಕೋಣೆ ವಹಿಸಿದ್ದರು.

ಆನಗಳ್ಳಿ ಸೇತುವೆ ನಿರ್ಮಾಣ ಒತ್ತಾಯಿಸಿ, ಕುಡಿಯು ನೀರಿನದರ ಏರಿಕೆ ವಿರೋಧಿಸಿ, ಉದ್ಯೋಗ ಖಾತರಿ ಯೋಜನೆ ಸಮರ್ಪಕ ಜಾರಿ ಒತ್ತಾಯಿಸಿ, ಮಕ್ಕಳು ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ನಿಯಂತ್ರಿಸಿ, ದೌರ್ಜನ್ಯ ಮುಕ್ತ ಬದುಕನ್ನು ಖಾತ್ರಿಗೊಳಿಸಲು ಒತ್ತಾಯಿಸಿ ಸಮ್ಮೇಳನದಲ್ಲಿ ಒಕ್ಕೊರಲಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.



ಕಾರ್ಮಿಕ, ಕೃಷಿಕೂಲಿಕಾರರ ಬೃಹತ್ ಮೆರವಣಿಗೆ – ಸಾರ್ವಜನಿಕ ಸಭೆ

ಸಮ್ಮೇಳನದ 2ನೇ ದಿನದ ಅಂಗವಾಗಿ ಹೆಮ್ಮಾಡಿ ಪೇಟೆಯ ಪ್ರಮುಖ ಬೀದಿಯಲ್ಲಿ ಕಾರ್ಮಿಕರು, ಕೃಷಿ ಕೂಲಿಕಾರರು ನಡೆಸಿದ ವರ್ಣರಂಜಿತ ಆಕರ್ಷಕ ಬೃಹತ್ ಮೆರವಣಿಗೆ ಹಾಗೂ ಬೈಕ್ ರ್‍ಯಾಲಿ ಪೇಟೆಯಲ್ಲಿ ಹೊರಟಾಗ ನಾಗರಿಕರ ಗಮನ ಸೆಳೆಯಿತು. ಬಳಿಕ ಜರಗಿದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದ ಸ್ವಾಮಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ – ಕೇಂದ್ರದ ಮೋದಿ ಸರಕಾರ ಕಾರ್ಪೊರೇಟ್ ವಿದೇಶಿ ಕಂಪನಿಗೆ ಕೆಂಪುಹಾಸಿನ ಸ್ವಾಗತ ನೀಡಿ, ಭೂಮಿ, ವಿದ್ಯುತ್, ನೀರು, ತೆರಿಗೆ ವಿನಾಯ್ತಿ ನೀಡುವುದರ ಮೂಲಕ ದೇಶ ಮಾರಾಟ ಮಾಡಲು ಹೊರಟಿದೆ. ಕಾಂಗ್ರೆಸ್ ಸರಕಾರದ ಖಾಸಗೀಕರಣ, ಜಾಗತೀಕರಣ, ಉದಾರೀಕರಣ ನೀತಿಯನ್ನು ಇನ್ನೂ ತೀವ್ರ ರೀತಿಯಲ್ಲಿ ಮೋದಿ ಮುನ್ನಡೆಸುತ್ತಿದ್ದಾರೆ. ದೇಶದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇದುವರೆಗೆ ಸುಮಾರು 20,000 ಕೋಟಿ ಮಾನದ ದಿನ ಕೆಲಸ ಸಿಕ್ಕಿದೆ. ಈಗ ಇದನ್ನು ಮುಚ್ಚುವ ಯೋಜನೆ. ರಾಜಸ್ಥಾನ ರಾಜ್ಯ ಮುಖ್ಯ ಮಂತ್ರಿ ವಿಜಯ ರಾಜೇ ಸಿಂಧ್ಯಾ ರೇಗಾ ಹಿಂದಿನಂತೆ ಕೂಲಿಗಾಗಿ ಕಾಳು ಯೋಜನೆಯಾಗಿಯೇ ಇರಲಿ. ಉದ್ಯೋಗ ಖಾತರಿ ಯೋಜನೆ ಕಾಯಿದೆಯಾಗಿ ಇರಬೇಕಿಲ್ಲ ಎಂದು ಕೇಂದ್ರಕ್ಕೆ ಪತ್ರ ಬರೆದ ಭಾಗವಾಗಿ ಮೋದಿ ಸರಕಾರ ಇದೀಗ ರೇಗಾ ಬಂದ್ ಮಾಡುವ ಯೋಜನೆ– ಇದು ಕೂಲಿಕಾರರ ಮೇಲಿನ ದಾಳಿ ಎಂಬುದಾಗಿ ನಿತ್ಯಾನಂದ ಸ್ವಾಮಿ ಆಕ್ರೋಶ ವ್ಯಕ್ತ ಪಡಿಸಿದರು. ಅವರು ಮುಂದುವರಿದು 2014–2015ರ ಸಾಲಿಗೆ ನಮ್ಮ ರಾಜ್ಯಕ್ಕೆ ರೂ. 3150 ಕೋಟಿ ಇದ್ದ ರೇಗಾ ಅನುದಾನ ಈಗ ರೂ.


ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ. ಶಂಕರ್ ಮಾತನಾಡುತ್ತಿರುವುದು

ಶ್ರೀಕಾಂತ ಹೆಮ್ಮಾಡಿ, ವೆಂಕಟೇಶ ಹೆಮ್ಮಾಡಿ ಉಪಸ್ಥಿತರಿದ್ದರು.

ಪಕ್ಷದ ಕುಂದಾಪುರ ತಾಲೂಕು ಸಮ್ಮೇಳನದಲ್ಲಿ ಕುಂದಾಪುರ ಮತ್ತು ಬೈಂದೂರು ಎರಡು ಪ್ರತ್ಯೇಕ ವಲಯ ಸಮಿತಿಗಳನ್ನು ಆಯ್ಕೆ ಮಾಡಲಾಗಿದೆ. ಕುಂದಾಪುರ ವಲಯ ಸಮಿತಿಗೆ ಎಚ್. ನರಸಿಂಹ (ಕಾರ್ಯದರ್ಶಿ) ಯು. ದಾಸಭಂಡಾರಿ, ಮಹಾಬಲ ವಡೇರ ಹೊಬಳಿ, ವಿ. ನರಸಿಂಹ, ಜಯಂತ, ಕರಿಯ ದೇವಾಡಿಗ, ಬಲ್ಕೀಸ್, ರಾಜೇಶ ವಡೇರಹೊಬಳಿ (ಸದಸ್ಯರು), ಬೈಂದೂರು ವಲಯ ಸಮಿತಿಗೆ ಸುರೇಶ ಕಲ್ಲಾಗರ (ಕಾರ್ಯದರ್ಶಿ), ರಾಜೀವ ಪಡುಕೋಣೆ, ವೆಂಕಟೇಶ್ ಕೋಣಿ,



ಸುಬ್ರಹ್ಮಣ್ಯ ಆಚಾರ್, ಲಕ್ಷಣ ಮೂವತ್ತು ಮುಡಿ, ಜಿ.ಡಿ. ಪಂಜು ಅಣ್ಣಪ್ಪ ಕಾರುಗಾರ (ಸದಸ್ಯರು) ಸರ್ವಾನು ಮತದಿಂದ ಆಯ್ಕೆಯಾದರು.

ಕುಂದಾಪುರ ವಲಯ ಸಮಿತಿ ಕಾರ್ಯದರ್ಶಿ ಎಚ್. ನರಸಿಂಹ ಸ್ವಾಗತಿಸಿದರು, ಬೈಂದೂರು ವಲಯ ಸಮಿತಿ ಕಾರ್ಯದರ್ಶಿ ಸುರೇಶ ಕಲ್ಲಾಗರ ವಂದಿಸಿದರು. ವೆಂಕಟೇಶ ಕೋಣಿ – ಕಾರ್ಯಕ್ರಮ ನಿರೂಪಿಸಿದರು

ವರದಿ : ವೆಂಕಟೇಶ್ ಕೋಣಿ

ಗುತ್ತಿಗೆ ಆಧಾರ – ವಿದೇಶಿ ಕಂಪನಿ

ಈಸ್ಟ್ ಇಂಡಿಯಾ ಕಂಪನಿ – ಮಾಡಿದ್ದು ಬರೇ ವ್ಯಾಪಾರ
ಸ್ಥಾಪಿತ ದೇಶದಲ್ಲೇ ತನ್ನ ಅದಿಪತ್ಯದ ಸರಕಾರ
ವಿದೇಶಿ ಬಂಡವಾಳಕ್ಕೆ ಮೋದಿ ಸರಕಾರದ ಬರಪೂರ ಸಹಕಾರ
ಇದೀಗ ವಿದೇಶಿ ಕಂಪನಿಗೆ – ನೀರು, ವಿದ್ಯುತ್, ಭೂಮಿ ಹೇರಳ – ಇಲ್ಲ ಕರ
ಇಡೀ ದೇಶ ದುಸ್ಥಿತಿಗೆ ಬಂದೊದಗಲಿದೆ – ಅದೇ ಗುತ್ತಿಗೆ ಆಧಾರ
ನಮ್ಮ ಕಾರ್ಮಿಕ ಆಗುವನೇ – ಉದ್ಧಾರ?

– ವೆಂಕಟೇಶ್ ಕೋಣಿ

➡ ಟಿ. ಯಶವಂತ್, ಸಹಕಾರ್ಯದರ್ಶಿಯಾಗಿ ಎನ್.ಎಲ್. ಭರತ್‌ರಾಜ್, ಹೆಮ್ಮನಹಳ್ಳಿ ಶ್ರೀನಿವಾಸ್ ಹಾಗೂ 15 ಮಂದಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಈ ಸಮಾವೇಶದ ನಿರ್ಣಯದಂತೆ ಮದ್ದೂರು ಕಾರ್ಯಪಾಲಕ ಅಭಿಯಂತರರ ಕಛೇರಿ ಮುಂದೆ ಹೋರಾಟ ಮಾಡಲು ತೀರ್ಮಾನಿಸಿ ಅದರಂತೆ ಹೋರಾಟವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರವಾಸಿ ಮಂದಿರದಿಂದ ಮೆರವಣಿಗೆ ಹೊರಟು ಕೆಶಿಪ್ ಕಾರ್ಯಪಾಲಕ ಅಭಿಯಂತರರ ಕಛೇರಿ ಮುಂದೆ ಕರ್ನಾಟಕ ಪ್ರಾಂತ ರೈತ ಸಂಘ ಕೆಶಿಪ್ ಭೂ ಸಂತ್ರಸ್ತರ ಹೋರಾಟ ಸಮಿತಿ ನೇತೃತ್ವದಲ್ಲಿ ಧರಣಿ ನಡೆಸಲಾಯಿತು. ಈ ಧರಣಿಯನ್ನುದ್ದೇಶಿಸಿ ಕೆ.ಪಿ.ಆರ್.ಎಸ್. ಜಿಲ್ಲಾ ಮುಖಂಡ ಟಿ. ಯಶವಂತ್ ಮಾತನಾಡಿ ಭೂಮಿ ಕಳೆದುಕೊಂಡ ರೈತರಿಗೆ ನ್ಯಾಯಯುತ ಬೆಲೆ ಕೊಡಬೇಕು. ವಂಚಿಸಿ ಪಡೆದಿರುವ ಭೂದಾಖಲೆಗಳು ಹಾಗೂ ಖಾಲಿ ಪತ್ರಗಳನ್ನು ವಾಪಸ್ಸು ನೀಡಬೇಕು. ಎನ್.ಜಿ.ಒ. ದವರು ರೈತರ ಮನೆ ಬಾಗಿಲಿಗೆ ಬರಬಾರದು, 80% ರಷ್ಟು ರೈತರ ಒಪ್ಪಿಗೆ ಇಲ್ಲದೆ ಭೂ ಸ್ವಾಧೀನ ಪಡಿಸಿಕೊಳ್ಳಬಾರದು. ಸಮಸ್ಯೆ ಇತ್ಯರ್ಥವಾಗುವ ತನಕ ಕಾಮಗಾರಿ ಪ್ರಾರಂಭ ಮಾಡಬಾರದು. ಕೆಶಿಪ್ ಎಂ.ಡಿ. ಮತ್ತು ಲೋಕೋಪಯೋಗಿ ಸಚಿವರು ಹಾಗು ಕಂದಾಯ ಸಚಿವರು ಮತ್ತು ಕೆ.ಪಿ.ಆರ್. ಎಸ್. ಮುಖಂಡರು ಕೆಶಿಪ್ ರಸ್ತೆ ಭೂಸಂತ್ರಸ್ತರ ಹೋರಾಟ ಸಮಿತಿಯವರ ಜೊತೆ ಬೆಲೆಗಾಗಿ ಮಾತುಕತೆ ನಡೆಯಬೇಕೆಂದು ಒತ್ತಾಯಿಸಿದರು. ಈ ಧರಣಿಯನ್ನು ಉದ್ದೇಶಿಸಿ ಎನ್.ಎಲ್. ಭರತ್‌ರಾಜ್ ಮಾತನಾಡಿದರು. ಹೋರಾಟದಲ್ಲಿ ಡಿ.ಕೆ. ಕೃಷ್ಣ, ರಾಮಲಿಂಗಯ್ಯ, ಶಿವಲಿಂಗಯ್ಯ, ಜೋಗಿಗೌಡ, ಶಿವಣ್ಣ, ಶ್ರೀನಿವಾಸ್, ನಾಗರಾಜ್ ಮುಂತಾದವರು ಭಾಗವಹಿಸಿದ್ದರು.

ಕೆಶಿಪ್ ಮುಖ್ಯ ಕಾರ್ಯಪಾಲಕ ಅಭಿಯಂತರ ಜೊತೆ ಮಾತುಕತೆ

ಚಳುವಳಿಗಾರರ ಆಗ್ರಹದ ಮೇರೆಗೆ ನವೆಂಬರ್ 28, 2014 ರಂದು ಬೆಂಗಳೂರಿನ ಕೆಶಿಪ್ ಕಛೇರಿಯಲ್ಲಿ ಮುಖ್ಯ ಕಾರ್ಯಪಾಲಕ ಅಭಿಯಂತರರಾದ ರಮೇಶ್, ಭೂಸ್ವಾಧೀನ ಎ.ಸಿ.ಯವರು ಕೆಶಿಪ್ ಇಂಜಿನಿಯರ್ ಶಿವಕುಮಾರ್‌ರವರೊಂದಿಗೆ ಮೊದಲನೇ ಹಂತದ ಮಾತುಕತೆ ನಡೆಯಿತು. ಈ ಮಾತುಕತೆಯಲ್ಲಿ ಕೆ.ಪಿ.ಆರ್.ಎಸ್. ರಾಜ್ಯ ಮುಖಂಡರಾದ ಜಿ.ಸಿ. ಬಯ್ಯಾರೆಡ್ಡಿ, ಎನ್. ಎಲ್. ಭರತ್‌ರಾಜ್, ಡಿ.ಕೆ. ಕೃಷ್ಣ, ಶಿವಲಿಂಗಯ್ಯ, ನಂಜುಂಡಯ್ಯ ಮುಂತಾದವರು ಭಾಗವಹಿಸಿ ಮಾತುಕತೆ ನಡೆಸಿದರು. ಮುಂದೆ ಸಚಿವರು ಎಂ.ಡಿ.ಯವರು ಒಳಗೊಂಡಂತೆ ಇನ್ನೊಂದು ಸುತ್ತಿನ ಮಾತುಕತೆಗೆ ದಿನಾಂಕ ನಿಗದಿಗೊಳಿಸಿ ನಿಮ್ಮ ಸಮಸ್ಯೆಗೆ ಸರಿಯಾದ ಪರಿಹಾರ ನೀಡುವವು ಎಂಬ ಭರವಸೆ ನೀಡಿದರು.

– ಎನ್.ಎಲ್. ಭರತ್‌ರಾಜ್

ರಸ್ತೆ ದುರಸ್ತಿಗೆ ಆಗ್ರಹಿಸಿ ವಿಟ್ಲದಲ್ಲಿ ಆಟೋ ಚಾಲಕರಿಂದ ರಸ್ತೆ ತಡೆ

ಕಡಲತಡಿ

ವರದಿ : ವಾ. ಉಚ್ಚಿಲ್

ಪುತ್ತೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಂಗಳಪದವು, ಅನಂತಾಡಿ, ಕೊಡಾಜೆ ಹಾಗೂ ನೆಲ್ಲಿಗುಡ್ಡೆಗಳಿಗೆ ವಿಟ್ಲ ಪೇಟೆಯಿಂದ ಸಂಪರ್ಕ ಹೊಂದುವ ರಸ್ತೆಗಳ ನಾದುರಸ್ತಿಯನ್ನು ಪ್ರತಿಭಟಿಸಿ ಹಾಗೂ ದುರಸ್ತಿಗೆ ಆಗ್ರಹಿಸಿ ಫೆಡರೇಶನ್ ಆಫ್ ಕರ್ನಾಟಕ ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ (ಸಿಐಟಿಯು) ಘಟಕದ ವತಿಯಿಂದ ಕಲ್ಲಡ್ಕದಿಂದ ಕಾಂಞಂಗಾಡನ್ನು ಸಂಪರ್ಕಿಸುವ ರಸ್ತೆಯಲ್ಲಿ ಮಂಗಳಪದವು ಎಂಬಲ್ಲಿ ಡಿಸೆಂಬರ್ 3 ರಂದು ವಾಹನ ಸಂಚಾರವನ್ನು ತಡೆದು ಪ್ರತಿಭಟನೆ ನಡೆಸಲಾಯಿತು.

ಸಿಐಟಿಯು ರಾಜ್ಯ ಉಪಾಧ್ಯಕ್ಷ ಬಿ.ಎಂ.ಭಟ್, ಸಿಐಟಿಯು ಬಂಟ್ವಾಳ ತಾಲೂಕು ಕಾರ್ಯದರ್ಶಿ ರಾಮಣ್ಣ ವಿಟ್ಲ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಬಂಟ್ವಾಳ ಪಂಚಾಯತ್ ರಾಜ್ ಇಂಜಿನಿಯರ್, ವಿಟ್ಲ ಠಾಣೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಸ್ಥಳಕ್ಕೆ ಭೇಟಿ ಇತ್ತು ಮಾತುಕತೆ ನಡೆಸಿದ ಮೇಲೆ ದುರಸ್ತಿ ಬಗ್ಗೆ ಇಲಾಖೆಯಿಂದ ಭರವಸೆ ದೊರೆತ ಹಿನ್ನೆಲೆಯಲ್ಲಿ ಬಳಿಕ ರಸ್ತೆತಡೆ ಪ್ರತಿಭಟನೆಯನ್ನು ಹಿಂದೆಗೆಯಲಾಯಿತು. ಸಿಐಟಿಯು ವಿಟ್ಲ ವಲಯ ಅಧ್ಯಕ್ಷ ಬಾಲಕೃಷ್ಣ, ಕಾರ್ಯದರ್ಶಿ ರಝಾಕ್, ಮಂಗಳಪದವು ಆಟೋ ಚಾಲಕ ಯೂನಿಯನ್ ಅಧ್ಯಕ್ಷ ಬಶೀರ್, ಕಾರ್ಯದರ್ಶಿ ರಾಜೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಾರ್ಮಿಕ ಸಂಘಗಳ ಜಂಟಿ ಸಮಿತಿಯಿಂದ ರಾಷ್ಟ್ರೀಯ ಪ್ರತಿಭಟನಾ ದಿನ :

ಮಂಗಳೂರು : ಕಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸಲು ರಾಜಸ್ಥಾನ ಸರ್ಕಾರ ಮಾಡಿರುವ ಕಾರ್ಮಿಕ ವಿರೋಧಿ ಕ್ರಮಗಳನ್ನು ಕೈಬಿಡಬೇಕೆಂದು ಆಗ್ರಹಿಸಿ, ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ಮಾಲಕರ ಅನುಕೂಲಕ್ಕಾಗಿ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲು ಹೊರಟಿರುವುದರ ವಿರುದ್ಧ ಎಲ್ಲಾ ಕಾರ್ಖಾನೆ ಮತ್ತು ಉದ್ದಿಮೆಗಳಲ್ಲಿ ಗುತ್ತಿಗೆಕರಣ–ಹೊರಗುತ್ತಿಗೆ ಪಡೆದು ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಆಗ್ರಹಿಸಿ ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಡಿಸೆಂಬರ್ 5 ರಂದು ರಾಷ್ಟ್ರೀಯ ಪ್ರತಿಭಟನಾ ದಿನ ಆಚರಿಸುವಂತೆ ಕರೆ ನೀಡಿದ ಮೇರೆಗೆ ದ.ಕ.ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಆಶ್ರಯದಲ್ಲಿ ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ದಿನವನ್ನು ನಡೆಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಜಂಟಿ ಸಮಿತಿಯ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಇಂಟಕ್, ಬಿ.ಎಂ.ಎಸ್, ಎಚ್‌ಎಮ್‌ಎಸ್‌ಗಳ ಜೊತೆಗೆ ನೌಕರರ ಸಂಘಟನೆಗಳಾದ ಅಖಿಲ ಭಾರತ ವಿಮಾ ನೌಕರರ ಸಂಘ, ಬ್ಯಾಂಕ್ ನೌಕರ ಸಂಘಗಳು, ಮೆಸ್ಕಾಂ ಮತ್ತು ಬಿಎಸ್‌ಎನ್‌ಎಲ್ ನೌಕರ ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದವು. ಪ್ರತಿಭಟನಾ ಸಭೆಯ ಮೊದಲು ಮಂಗಳೂರು ಪುರಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಸಂಘಟನೆಗಳ ಸದಸ್ಯರು ಮೆರವಣಿಗೆ ನಡೆಸಿದರು.

ಪ್ರತಿಭಟನಾಕಾರರನ್ನುಶಿಸಿ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಬಿಎಂಎಸ್ ರಾಜ್ಯ ಉಪ ಕಾರ್ಯದರ್ಶಿ ಪುರುಷೋತ್ತಮ್ ಕೆ.ಎನ್, ಇಂಟಕ್‌ನ ಸದಾಶಿವ ಶೆಟ್ಟಿ, ಎಐಟಿಯುಸಿ ದ.ಕ.ಜಿಲ್ಲಾಧ್ಯಕ್ಷ ಎಚ್.ವಿ.ರಾವ್ ಮಾತನಾಡಿದರು. ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ವಿಮಾ ನೌಕರರ ಸಂಘದ ಎಚ್.ಕೆ.ರಾಘವೇಂದ್ರ ರಾವ್ ಮತ್ತಿತರ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಉಡುಪಿ :

ಕಾರ್ಮಿಕ ಸಂಘಟನೆಗಳ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ರಾಷ್ಟ್ರೀಯ ಪ್ರತಿಭಟನಾ ದಿನವನ್ನು ಉಡುಪಿಯ ಸರ್ವಿಸ್ ಬಸ್‌ಸ್ಟೇಂಡ್ ಬಳಿಯ ಮಹಾತ್ಮಾಗಾಂಧಿ ಪ್ರತಿಮೆಯ ಎದುರು ಸಾರ್ವಜನಿಕ ಸಭೆಯ ಮೂಲಕ ನಡೆಸಲಾಯಿತು.

ಉಡುಪಿ ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಕಾರ್ಯದರ್ಶಿ ಅದಮಾರು ಶ್ರೀಪತಿ ಆಚಾರ್ಯ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ವಿಶ್ವನಾಥ ರೈ, ಎಐಟಿಯುಸಿಯ ಕೆ.ವಿ.ಭಟ್, ಬಿಎಂಎಸ್‌ನ ಬಾಲಗಂಗಾಧರ ರಾವ್, ಉಡುಪಿ ಜೀವ ವಿಮಾ ನೌಕರರ ಸಂಘದ ಗುರುದತ್, ಬ್ಯಾಂಕ್ ನೌಕರರ ಸಂಘದ ಯು.ಶಿವರಾಯ, ಶಶಿಧರ ಗೊಲ್ಲ ಮತ್ತಿತರರು ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಸಾರ್ವಜನಿಕ ಸಭೆಗೂ ಮೊದಲು ಉಡುಪಿಯ ಅಜ್ಜರಕಾಡು ಎಲ್‌ಐಸಿ ಕಚೇರಿಯ ಬಳಿಯಿಂದ ಸರ್ವಿಸ್ ಬಸ್ ನಿಲ್ದಾಣದವರೆಗೆ ಕಾರ್ಮಿಕ ಹಾಗೂ ನೌಕರರ ಸಂಘಗಳ ಸದಸ್ಯರು ಮೆರವಣಿಗೆ ನಡೆಸಿದರು.

ದಲಿತ ಹಕ್ಕುಗಳಿಗಾಗಿ ಆಗ್ರಹಿಸಿ ಬೆಳ್ತಂಗಡಿಯಲ್ಲಿ 24 ಗಂಟೆಗಳ ಧರಣಿ :

ಎಲ್ಲ ದಲಿತ ಕುಟುಂಬಗಳಿಗೆ ಕನಿಷ್ಟ 5 ಎಕ್ರೆ ಕೃಷಿಯೋಗ್ಯ ಭೂಮಿ ನೀಡುವಂತೆ ಹಾಗೂ ಡಿ.ಸಿ.ಮನ್ನಾ ಭೂಮಿಯ ಅತಿಕ್ರಮಣ ತೆರವುಗೊಳಿಸಿ ಆ ಭೂಮಿಯನ್ನು ದಲಿತರಿಗೆ ಹಂಚಲು ಒತ್ತಾಯಿಸಿ ಬೆಳ್ತಂಗಡಿ ತಾಲೂಕು ದಲಿತ ಹಕ್ಕುಗಳ ಹೋರಾಟ ಸಮಿತಿ ಹಾಗೂ ತಾಲೂಕು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಡಿಸೆಂಬರ್ 5 ರಿಂದ 6 ರವರೆಗೆ 24 ಗಂಟೆಗಳ ಧರಣಿ ಸತ್ಯಾಗ್ರಹವನ್ನು ಬೆಳ್ತಂಗಡಿ ತಾಲೂಕು ಕಚೇರಿಯ ಎದುರು ನಡೆಸಲಾಯಿತು.

ಧರಣಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಬಿ.ಎಂ.ಭಟ್, ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಶಿವರಾಮು, ತಾಲೂಕು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಅಧ್ಯಕ್ಷ ವಸಂತ ನಡ, ಕಾರ್ಯದರ್ಶಿ ವಿಠಲ ಮಲೆಕುಡಿಯ, ತಾಲೂಕು ದಲಿತ ಹಕ್ಕುಗಳ ಹೋರಾಟ ಸಮಿತಿಯ ಅಧ್ಯಕ್ಷ ಶೇಖರ ಎಲ್, ಕಾರ್ಯದರ್ಶಿ ಈಶ್ವರಿ ಧರಣಿಯಲ್ಲಿ ಭಾಗವಹಿಸಿ ಮಾತನಾಡಿದರು. ●

ಕಾರ್ಕಳ: ನ್ಯಾಯಬದ್ಧ ವೇತನ ಹೆಚ್ಚಳಕ್ಕಾಗಿ
ಲೆಮಿನಾ ಫೌಂಡ್ರೀಸ್. ಲಿ. ನಿಟ್ಟೆ ಕಾರ್ಮಿಕರ ಸಾಮೂಹಿಕ ಧರಣಿ ಸತ್ಯಾಗ್ರಹ

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ನಿಟ್ಟೆ ಎಂಬಲ್ಲಿ 'ಲೆಮಿನಾ ಫೌಂಡ್ರೀಸ್. ಲಿ.' ಎಂಬುದು ಸುಮಾರು 256 ಕಾರ್ಮಿಕರು ಕೆಲಸ ಮಾಡುವ ಒಂದು ಕಾರ್ಖಾನೆ. ಇಲ್ಲಿ ವಾಹನಗಳ ಟೈರುಗಳಲ್ಲಿ ಬಳಸುವ ಅಂಟು ದ್ರವ–ಗಮ್ ತಯಾರಾಗುತ್ತದೆ. ದೇಶದ ವಿವಿಧ ಭಾಗಗಳಿಗೂ ಮತ್ತು ದೇಶದ ಹೊರಕ್ಕೂ ಈ ಗಮ್‌ನ್ನು ಕಳಿಸಲಾಗುತ್ತದೆ.

ಈ ಕಾರ್ಖಾನೆ ಆರಂಭವಾಗಿ ಸು. 45 ವರ್ಷಗಳಾಗಿವೆ. ಇಲ್ಲಿ ಕಳೆದ 35 ವರ್ಷಗಳಿಂದ ಕೆಲಸ ಮಾಡುವ ಕಾರ್ಮಿಕರ ಸಂಬಳ ಎಷ್ಟು ಗೊತ್ತೇ? 10,000 ಕೂಡ ದಾಟುವುದಿಲ್ಲ.!! ಈ ದುಬಾರಿ ದಿನಗಳಲ್ಲಿ ಈ ಸಂಬಳ ನೆಚ್ಚಿಕೊಂಡು ಕಾರ್ಮಿಕರು ಜೀವನ ನಡೆಸುವುದು ಹೇಗೆ? ಈ ಕಾರ್ಖಾನೆಯ ಮಾಲಿಕರು ಇಡೀ ಕರಾವಳಿಯ ಶ್ರೀಮಂತರಲ್ಲಿ ಒಬ್ಬರು. ಆದರೆ ಅವರ ಕಾರ್ಖಾನೆಯ ಕಾರ್ಮಿಕರು ಮಾತ್ರ ಅತಿ ಕಡಿಮೆ ಕೂಲಿಯಲ್ಲಿ ಬದುಕುವವರು.

ಕಾರ್ಮಿಕರು ತಮಗೆ ವೇತನ ಹೆಚ್ಚು ಬೇಕೆಂದು ಹೋರಾಟದ ಹಾದಿ ಹಿಡಿದಿದ್ದಾರೆ. ಡಿಸೆಂಬರ್ 21, 2014ರಿಂದ ಅನಿರ್ಧಿಷ್ಟಾವಧಿ ಮುಷ್ಕರ ನಡೆಸುತ್ತಿದ್ದಾರೆ. ಸಂಸ್ಥೆಯ ಗೇಟ್ ಮುಂದುಗಡೆ 24 ಗಂಟೆಗಳ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಕಾನೂನು ಪ್ರಕಾರ ಮಾಸಿಕ ವೇತನ ಏರಿಕೆಗಾಗಿ ಸಂಘದ ವತಿಯಿಂದ ಬೇಡಿಕೆ ಪಟ್ಟಿಯನ್ನು ಕಳುಹಿಸಲಾಗಿದ್ದು, 30–03–2014 ಮುಕ್ತಾಯಗೊಂಡಿದ್ದ ಒಪ್ಪಂದದ ನಂತರ ವೇತನ ಏರಿಕೆ ಬಗ್ಗೆ ಸಂಘ ಹಾಗೂ ಆಡಳಿತ ವರ್ಗ ಬರೀ ರೂ. 600 ವೇತನ ಏರಿಕೆ ಸಾಧ್ಯ, ಅದಕ್ಕಿಂತ ಹೆಚ್ಚು ಏರಿಕೆ ಮಾಡಲು ಸಾಧ್ಯವಿಲ್ಲವೆಂದು ಜಂಟಿ ಮಾತುಕತೆ ವಿಫಲಗೊಳಿಸಿತು. ಸಂಘವು ಮಾತುಕತೆ ಮುಂದುವರಿಕೆಗೆ ಪ್ರಯತ್ನ ನಡೆಸಿದ್ದು ಆಡಳಿತ ವರ್ಗ ಹಠಮಾರಿತನವನ್ನು ಪ್ರದರ್ಶಿಸಿತು. ತದ ನಂತರ ಕಾನೂನು ಪ್ರಕಾರ ಆಡಳಿತ ವರ್ಗಕ್ಕೆ ನೋಟೀಸು ನೀಡಿ ಕಾರ್ಮಿಕರು ಅನಿರ್ಧಿಷ್ಟಾವಧಿ ಮುಷ್ಕರ ಆರಂಭಿಸಿರುತ್ತಾರೆ. ಉಪ ಕಾರ್ಮಿಕ ಆಯುಕ್ತರು ಮಧ್ಯಪ್ರವೇಶಿಸಿ ಆಡಳಿತ ವರ್ಗ ಮತ್ತು ಸಂಘದ ಸಂಧಾನ ಸಭೆ ನಡೆಸಿದರು.



ಆಡಳಿತ ವರ್ಗದವರು ಈ ಸಭೆಯಲ್ಲಿ ಬರೀ ರೂ. 800 ಏರಿಕೆಗೆ ಬಂದಿದ್ದು, ಕಾರ್ಮಿಕರು ರೂ. 1,000 ಏರಿಕೆಯಾಗಬೇಕೆಂದು ಒತ್ತಾಯಿಸಿದರು. ಆಡಳಿತವರ್ಗ ತನ್ನ ಹಠಮಾರಿತನವನ್ನು ಮುಂದುವರಿಸಿತು. ಕಾರ್ಮಿಕರಿಗೆ ವೇತನ ಏರಿಕೆ ಮಾಡುವ ಬದಲಾಗಿ ಡಿಸೆಂಬರ್ 06, 2014ರಿಂದ ಕಾನೂನು ಬಾಹಿರವಾಗಿ 'ಲಾಕ್‌ಔಟ್' ಘೋಷಣೆ ಮಾಡಿರುತ್ತಾರೆ.

ರೂ. 1,000 ಮಾಸಿಕ ವೇತನ ಏರಿಕೆಗೆ ತಯಾರಿಲ್ಲದ ಆಡಳಿತ ವರ್ಗ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಅನ್ಯಾಯ ಮಾಡುತ್ತಿದ್ದು ರಾಜ್ಯ ಸರಕಾರದ ಮಧ್ಯಪ್ರವೇಶಕ್ಕೆ ಕೋರಿ 10–12–2014ರಂದು ಬೆಳಿಗ್ಗೆ 10:30ರಿಂದ ಸಂಜೆ ಗಂಟೆ 5ರ ತನಕ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳ ಕಛೇರಿ ಮಣಿಪಾಲ ರಜತಾದ್ರಿಯ ಮುಂದುಗಡೆ ಧರಣಿ ಸತ್ಯಾಗ್ರಹ ನಡೆಸಲಾಗಿದೆ.

ಆಡಳಿತ ವರ್ಗ ತನ್ನ ಹಠಮಾರಿತನ ಬಿಟ್ಟು ಕಾರ್ಮಿಕರ ವೇತನ ಏರಿಕೆ ಮಾಡಿ ಯಾವುದೇ ಷರತ್ತಿಲ್ಲದೆ ಕೆಲಸ ಆರಂಭಿಸಲು ಅವಕಾಶ ನೀಡಬೇಕು. ಕಾನೂನು ಬಾಹಿರ ಲಾಕ್‌ಔಟ್‌ನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಲಾಗಿದೆ. ಸಂಸ್ಥೆಯ ಗೇಟ್‌ನ ಎದುರು ಅನಿರ್ಧಿಷ್ಟಾವಧಿ ಮುಷ್ಕರ, ಧರಣಿ ಸತ್ಯಾಗ್ರಹ ಮುಂದುವರೆದಿದೆ. ಸರದಿ ಅನ್ನಸತ್ಯಾಗ್ರಹವನ್ನು ಕಾರ್ಮಿಕ ಮುಂದಾಳುಗಳಿಂದ ಆರಂಭಿಸಲಾಗುವುದು. ಮುಂದಕ್ಕೆ ರಸ್ತೆತಡೆ ಚಳುವಳಿ ನಡೆಸಲಾಗುವುದು. ತದನಂತರ ಬೈಕಂಪಾಡಿ ಲೆಮಿನಾ ಸಸ್ಪೆನ್ಸ್ ಮುಂದುಗಡೆ ಧರಣಿ ಸತ್ಯಾಗ್ರಹ ಹಾಗೂ ಆಡಳಿತ ವರ್ಗದ ಪ್ರಮುಖರ ಮನೆ ಮುಂದುಗಡೆ ಕಾರ್ಮಿಕರ ಕುಟುಂಬ ಸಹಿತ ಹೋರಾಟವನ್ನು ಮುಂದುವರಿಸುವ ಅನಿವಾರ್ಯತೆ ಇದೆ. ಕಾರ್ಕಳ ತಾಲೂಕಿನಾದ್ಯಂತ ಆಡಳಿತ ವರ್ಗದ ಕಾರ್ಮಿಕ ವರ್ಗದ ವಿರೋಧಿ ನೀತಿಗಳ ವಿರುದ್ಧ ಹಾಗೂ ಸಾರ್ವಜನಿಕರ ಸಹಕಾರ ಕೋರಿ ಮನೆ ಮನೆ ಜಾಥಾವನ್ನು ಹಮ್ಮಿಕೊಳ್ಳಲು ಸಂಘಟನೆ ತೀರ್ಮಾನಿಸಿದೆ. ಕಾರ್ಮಿಕ ಮುಖಂಡರಾದ ವಸಂತ ಆಚಾರಿ, ಬಾಲಕೃಷ್ಣ ಶೆಟ್ಟಿ, ಯಶವಂತ, ಉಮಾನಾಥ ದೇವಾಡಿಗ ಮುಂತಾದವರು ನೇತೃತ್ವ ವಹಿಸಿದ್ದಾರೆ.



ಒಂದೊಮ್ಮೆ ನಮ್ಮ ದೇಶದಲ್ಲಿ ಯೋಜನಾ ಪ್ರಕ್ರಿಯೆಯನ್ನು ಪ್ರೋತ್ಸಾಹಿದ ಆಳುವ ವರ್ಗಗಳೇ ಇಂದು ಅದನ್ನು ಕಳಚಿ ಹಾಕುವ ರಾಗಾಲಾಪನೆಯ ನೇತೃತ್ವವನ್ನು ವಹಿಸಿವೆ. ಇವರೆಡೂ ನಡೆದಿರುವುದು ನಿರ್ದಿಷ್ಟ ಚಾರಿತ್ರಿಕ ಸಂದರ್ಭಗಳಲ್ಲಿ, ಗರಿಷ್ಟ ಲಾಭ ಗಳಿಸುವ ಅವರ ಹಿತಾಸಕ್ತಿಗಳ ಈಡೇರಿಕೆಗಾಗಿ. ಇತ್ತ ಆರೆಸ್ಸೆಸ್/ಬಿಜೆಪಿಗೂ ತಮ್ಮ ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ' ಸ್ಥಾಪನೆಗ ಒಂದು ಏಕಘಟಕ ಅಂದರೆ ಕೇಂದ್ರೀಕೃತ ಪ್ರಭುತ್ವ ಬೇಕಾಗಿದೆ. 'ಸಹಕಾರಿ ಒಕ್ಕೂಟ ತತ್ವ'ದ ಆಡಂಬರದ ಮಾತುಗಳನ್ನಾಡುತ್ತಲೇ ಯೋಜನಾ ಆಯೋಗವನ್ನು ಕಳಚಿ ಹಾಕುವುದು ಇದರ ಒಂದು ಭಾಗ.



ಯೋಜನಾ ಆಯೋಗದ ವಿಯೋಜನೆ

ಸೀತಾರಾಮ್ ಯೆಚೂರಿ

ಡಿಸೆಂಬರ್ 7, 2014ರಂದು ಪ್ರಧಾನ ಮಂತ್ರಿಗಳು ಮುಖ್ಯಮಂತ್ರಿಗಳ ಒಂದುಸಭೆ ಕರೆದರು. ಅದರ ಮುಂದಿದ್ದ ಅಜೆಂಡಾ– "ಯೋಜನಾ ಆಯೋಗದ ಜಾಗದಲ್ಲಿ". ಈ ಮೂಲಕ ಅವರು ಭಾರತೀಯ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಯಾವುದೇ ಪೂರ್ವಸಮಾಲೋಚನೆಗಳನ್ನು ನಡೆಸದೆ ಯೋಜನಾ ಆಯೋಗವನ್ನು ಕಳಚಿ ಹಾಕುವ ತನ್ನ ನಿರ್ಣಯದ ಜಾರಿಗೆ ಮುಂದಾಗಿದ್ದಾರೆ.

ಈ ಸಭೆಯಲ್ಲಿ, ಯೋಜನಾ ಆಯೋಗವನ್ನು ಸ್ಥಾಪಿಸಬೇಕೆಂಬ ದಿನಾಂಕ ಮಾರ್ಚ್ 15, 1950ರ ಸಂಪುಟ ನಿರ್ಣಯವನ್ನು ಆಗಸ್ಟ್ 13, 2014ರಂದು ಕೇಂದ್ರ ಸಂಪುಟ ರದ್ದು ಮಾಡಿದೆ ಎಂದು ದೇಶಕ್ಕೆ ತಿಳಿಸಲಾಯಿತು. "ಯೋಜನಾ ಆಯೋಗದ ಸ್ಥಾನದಲ್ಲಿ ರಚಿಸುವ ಹೊಸ ಸಂಸ್ಥೆಯ ರೂಪುರೇಷೆಗಳನ್ನು ಅಂತಿಮಗೊಳಿಸಲು ಪ್ರಧಾನ ಮಂತ್ರಿಗಳಿಗೆ ಅಧಿಕಾರ ನೀಡಲಾಗಿದೆ" ಎಂದೂ ನಮಗೆ ತಿಳಿಸಲಾಗಿದೆ.

ಜನವರಿ 26, 1950ರಂದು ಭಾರತ ಒಂದು ಗಣರಾಜ್ಯ ಎಂದು ಸಾರುವ ನಮ್ಮ ಸಂವಿಧಾನವನ್ನು ಅಂಗೀಕರಿಸಿದ ಕೆಲವು ದಿನಗಳಲ್ಲೇ ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು. 1950ರ ಸಂಪುಟ ನಿರ್ಣಯ ಅದರ ಕೆಲಸವನ್ನು ಈ ಮುಂದಿನಂತೆ ನಿರೂಪಿಸಿತ್ತು:

"ಭಾರತದ ಸಂವಿಧಾನ ಭಾರತದ ನಾಗರಿಕರಿಗೆ ನಿರ್ದಿಷ್ಟ ಮೂಲಭೂತ ಹಕ್ಕುಗಳನ್ನು ಖಾತ್ರಿ ಪಡಿಸಿದೆ ಮತ್ತು ಕೆಲವು ನಿರ್ದೇಶಕ ಸೂತ್ರಗಳನ್ನು ಉಚ್ಚರಿಸಿದೆ, ನಿರ್ದಿಷ್ಟವಾಗಿ, ಪ್ರಭುತ್ವ ಜನತೆಯ ಕಲ್ಯಾಣಕ್ಕೆ ಒತ್ತಾಸೆ ಕೊಡಲು ಶ್ರಮಿಸುತ್ತದೆ, ಅದಕ್ಕಾಗಿ ನ್ಯಾಯ, ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯ ರಾಷ್ಟ್ರೀಯ ಜೀವನದ ಎಲ್ಲ ಸಂಸ್ಥೆಗಳನ್ನು ಆವರಿಸಿರುವ ಒಂದು ಸಾಮಾಜಿಕ ವ್ಯವಸ್ಥೆಯನ್ನು ಪಡೆಯಲಾಗುವುದು ಮತ್ತು ಎಷ್ಟು ಸಾಧ್ಯವೋ ಅಷ್ಟು ಪರಿಣಾಮಕಾರಿಯಾಗಿ ರಕ್ಷಿಸಲಾಗುವುದು, ಹಾಗೂ ತನ್ನ ಧೋರಣೆಯನ್ನು (ಅ) ನಾಗರಿಕರು, ಪುರುಷರು ಮತ್ತು ಮಹಿಳೆಯರು ಸಮಾನವಾಗಿ ಸಾಕಷ್ಟು ಪ್ರಮಾಣದ ಜೀವನಾಧಾರಗಳ ಹಕ್ಕನ್ನು ಹೊಂದುವಂತೆ, (ಆ) ಸಮುದಾಯದ ಭೌತಿಕ ಸಂಪನ್ಮೂಲಗಳ ಒಡೆತನ ಮತ್ತು ಹತೋಟಿಯನ್ನು ಎಲ್ಲರ ಸಾಮಾನ್ಯ ಒಳಿತನ್ನು ಈಡೇರಿಸುವ ರೀತಿಯಲ್ಲಿ ಹಂಚುವಂತೆ, (ಇ) ಆರ್ಥಿಕ ವ್ಯವಸ್ಥೆಯ ಕಾರ್ಯಾಚರಣೆಯ ಫಲಿತಾಂಶವಾಗಿ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೆಲವೇ ಕೈಗಳಲ್ಲಿ ಕೇಂದ್ರಿತವಾಗಿ ಎಲ್ಲರಿಗೂ ಕೆಡುಕಾಗದಂತೆ ನಿರ್ದೇಶಿಸುತ್ತದೆ ಎಂದಿದೆ."

ನಿರ್ಣಾಯಕ ಕೊಂಡಿ

ಇದು ಸಂವಿಧಾನ ಸಭೆ ನಮ್ಮ ಸಂವಿಧಾನದ ಕರಡನ್ನು ತಯಾರಿಸುವಲ್ಲಿ ಮತ್ತು ಆಮೂಲಕ ನಮ್ಮ ಗಣತಂತ್ರವನ್ನು ರೂಪಿಸುವಲ್ಲಿ ಮಾಡಿದ ಯುಗಾಂತರಕಾರಿ ಪ್ರಯತ್ನಗಳ ಫಲ. ಒಂದು ಹೊಸ ರಾಷ್ಟ್ರವನ್ನು ಕಟ್ಟುವಲ್ಲಿ ಯೋಜನಾ ಆಯೋಗ ಒಂದು ನಿರ್ಣಾಯಕ ಕೊಂಡಿಯಾಗಿತ್ತು.

ಸಂವಿಧಾನದ ಮೊದಲ ಕಲಮು ಈ ರಾಷ್ಟ್ರವನ್ನು ಹೀಗೆ ನಿರೂಪಿಸಿದೆ: "ಇಂಡಿಯಾ, ಅಂದರೆ ಭಾರತ, ರಾಜ್ಯಗಳ ಒಂದು ಸಂಘವಾಗಿದೆ". ಬ್ರಿಟಿಶ್ ಭಾರತ ಮತ್ತು 666ಕ್ಕೂ ಹೆಚ್ಚು ರಾಜರುಗಳ ಸಂಸ್ಥಾನಗಳನ್ನು ಬೆಸೆದುರಾಷ್ಟ್ರವಾಗಿ ಸಮಗ್ರೀಕರಿಸಲು ಒಂದು ಕಣ್ಣೋಟ ಮಾತ್ರವೇ ಅಲ್ಲ, ಈ ಕಣ್ಣೋಟವನ್ನು ವಾಸ್ತವಗೊಳಿಸುವ ಒಂದು ಭೌತಿಕ ಆಧಾರವೂ ಬೇಕಾಗಿತ್ತು.

ಈ ಧ್ಯೇಯೋದ್ದೇಶಗಳಲ್ಲಿ ಬಹಳಷ್ಟು ಡಾ. ಬಿ.ಆರ್.ಅಂಬೇಡ್ಕರ್ ಕರಡು ರಚನಾ ಸಮಿತಿಯ ಪರವಾಗಿ ಸಂವಿಧಾನದ ಕರಡನ್ನು ಸಂವಿಧಾನ ಸಭೆಯು ಅಂಗೀಕಾರಕ್ಕಾಗಿ ನವಂಬರ್ 25, 1949ರಂದು ಪ್ರಸ್ತುತ ಪಡಿಸುವಾಗ ನೀಡಿದ್ದ ಎಚ್ಚರಿಕೆಗಳನ್ನು ಆಧರಿಸಿದ್ದವು. ಅವರ ಮಾತುಗಳು ಹೀಗಿದ್ದವು: "ಜನವರಿ 26, 1950 ರಂದು ನಾವು ಒಂದು ವೈರುಧ್ಯಗಳ ಜೀವನಕ್ಕೆ ಕಾಲಿಡುತ್ತಿದ್ದೇವೆ. ರಾಜಕೀಯದಲ್ಲಿ ನಾವು ಸಮಾನತೆಯನ್ನು ಹೊಂದಿರುತ್ತೇವೆ, ಮತ್ತು ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ನಾವು ಅಸಮಾನತೆಯನ್ನು ಹೊಂದಿರುತ್ತೇವೆ. ರಾಜಕೀಯದಲ್ಲಿ ನಾವು ಒಂದು ವ್ಯಕ್ತಿ, ಒಂದು ಮತ ಮತ್ತು ಒಂದು ಮತ, ಒಂದು ಮೌಲ್ಯ ಎಂಬ ಸೂತ್ರವನ್ನು ಮಾನ್ಯ ಮಾಡುತ್ತೇವೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಕಾರಣಕ್ಕಾಗಿ ಒಂದು ವ್ಯಕ್ತಿ, ಒಂದು ಮೌಲ್ಯ ಎಂಬ ಸೂತ್ರವನ್ನು ನಿರಾಕರಿಸುವುದನ್ನು ಮುಂದುವರೆಸುತ್ತೇವೆ. ಎಂದಿನ ವರೆಗೆ ನಾವು ಈ ವೈರುಧ್ಯಗಳ ಜೀವನವನ್ನು ಮುಂದುವರೆಸಲು ಸಾಧ್ಯ? ಎಂದಿನ ವರೆಗೆ ನಾವು ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯ ನಿರಾಕರಣೆಯನ್ನು ಮುಂದುವರೆಸಲು ಸಾಧ್ಯ? ಬಹಳ ಸಮಯದ ವರೆಗೆ ಅದನ್ನು ಮುಂದುವರೆಸಿದರೆ, ಅದು ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಗಂಡಾಂತರಕ್ಕೆ ಗುರಿಪಡಿಸಿದಂತಾಗುತ್ತದೆ. ಈ ವೈರುಧ್ಯವನ್ನು ನಾವು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೇ ನಿವಾರಿಸಲೇ ಬೇಕು, ಇಲ್ಲವಾದರೆ ಈ ಅಸಮಾನತೆಯಿಂದ ತೊಳಲಾಡುತ್ತಿರುವವರು ಈ ಸಭೆ ಶ್ರಮಪಟ್ಟು ಕಟ್ಟಿರುವ ರಾಜಕೀಯ ಪ್ರಜಾಪ್ರಭುತ್ವದ ರಚನೆಯನ್ನು ಸ್ಫೋಟಿಸಿ ಬಿಡುತ್ತಾರೆ."

ನಮ್ಮ ನೂರು ವರ್ಷಗಳಿಂತಲೂ ಹೆಚ್ಚು ದೀರ್ಘವಾದ ಸ್ವಾತಂತ್ರ್ಯ ಹೋರಾಟದಲ್ಲಿ ರೂಪುಗೊಂಡ ಹೊಸ ರಾಷ್ಟ್ರದ ಚಾರಿತ್ರ್ಯವನ್ನು ಹಿಂದೆಂದೂ ಕಾಣದಷ್ಟು ವಿಶಾಲ ಪ್ರಮಾಣದ ಶ್ರೀಮಂತ ಮತ್ತು ಅನನ್ಯ ವೈವಿಧ್ಯತೆಯ ಸಕಲ ಅಂಶಗಳನ್ನು ಒಳಗೊಂಡ ಭೌತಿಕ ಸಮಗ್ರೀಕರಣದೊಂದಿಗೆ ಜನತೆಯ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯ ಮೂಲಕ ಈಡೇರಿಸಿಕೊಳ್ಳಲು ಪ್ರಯತ್ನಿಸಲಾಯಿತು.

ಕೇಂದ್ರೀಕೃತ ಪ್ರಭುತ್ವದ ಕಣ್ಣೋಟ

ಆದರೆ ಆರೆಸ್ಸೆಸ್ ಮತ್ತು ಈ ಮೋದಿ ಸರಕಾರ ಇದನ್ನು ಮೊದಲಿಂದಲೂ ವಿರೋಧಿಸುತ್ತಲೇ ಬಂದಿದ್ದಾರೆ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರದ ಸ್ವರೂಪವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ' ದ ತಮ್ಮ ಆವೃತ್ತಿಗೆ ಪರಿವರ್ತಿಸುವ ಪ್ರಯತ್ನವನ್ನು ಮುಂದುವರೆಸುತ್ತಲೇ ಇದ್ದಾರೆ. ಇದು ಸಾಧ್ಯವಾಗಬೇಕಾದರೆ ಹೊಸ ಗಣತಂತ್ರದ ಸ್ಥಾಪನೆಯ ವೇಳೆಯಲ್ಲಿ ನಿರ್ಮಿಸಿದ ಸಂಸ್ಥೆಗಳನ್ನು ಬುಡಮೇಲು ಮಾಡುವ ಒಂದು ಏಕಘಟಕ ಪ್ರಭುತ್ವದ ರಚನೆ ಬೇಕಾಗುತ್ತದೆ. ಯೋಜನಾ ಆಯೋಗವನ್ನು ಕಳಚಿ ಹಾಕುವುದು ಇದು ಅನಾವರಣಗೊಳ್ಳುತ್ತಿರುವುದರ ಒಂದು ಭಾಗ.

ಯೋಜನಾ ಆಯೋಗ ಈಗ ಹಳಸಲಾಗಿದೆ, ಏಕೆಂದರೆ 1950ರ ದಶಕದ ನಂತರ ಆಂತರಿಕ ಮತ್ತು ಅಂತರ್ರಾಷ್ಟ್ರೀಯ ಸನ್ನಿವೇಶ ಬಹಳಷ್ಟು ಬದಲಾಗಿದೆ ಎಂದು ಮುಖ್ಯಮಂತ್ರಿಗಳ ಸಭೆಯಲ್ಲಿ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಆದರೆ ಇಂದು ಕೂಡ ಅಂದು ಮುಂದಿಟ್ಟುಕೊಂಡ ಧ್ಯೇಯೋದ್ದೇಶಗಳಲ್ಲಿ ಹೆಚ್ಚಿನವು ಬಹಳಷ್ಟು ಈಡೇರದೇ ಉಳಿದಿವೆ ಎಂಬ ಸಂಗತಿಯನ್ನು ಅವರು ಪ್ರಸ್ತಾಪಿಸಲಿಲ್ಲ. ಪ್ರಧಾನ ಮಂತ್ರಿಗಳ ಈ ತರ್ಕವನ್ನೇ ಆರೆಸ್ಸೆಸ್/ಬಿಜೆಪಿ ಸಿದ್ಧಾಂತಿಗಳು ಯೋಜನಾ ಆಯೋಗ ಆಧುನಿಕ ಜಗತ್ತಿಗೆ ಅಸಂಗತವಾಗಿರುವ ಒಂದು ಸಂಸ್ಥೆ, 'ನೆಹರೂ ಸಮಾಜವಾದ'ದ ಒಂದು ಬಡಕಲು ಪಳೆಯುಳಿಕೆ ಎಂದು ಪ್ರಚಾರ ಮಾಡುತ್ತಿದ್ದಾರೆ.

ಬಂಡವಾಳಿಗರಿಂದಲೇ ಉತ್ತೇಜನೆ

ಒಂದು ಹೊಸ ರಾಷ್ಟ್ರದ ನಿರ್ಮಾಣ ಹೊಸ ಭಾರತೀಯ ಆಳುವ ವರ್ಗಗಳ ಅಡಿಯಲ್ಲಿ ನಡೆ–ಯ ಬೇಕಾಗಿತ್ತು. ಇದು ಬಂಡವಾಳಶಾಹಿಗಳು ಮತ್ತು ಭೂಮಾಲಕ ವರ್ಗಗಳ ಕೂಟ, ದೊಡ್ಡ ಭಾರತೀಯ ಬಂಡವಾಳಶಾಹಿಗಳ ನೇತೃತ್ವದ ಕೂಟ. ಯೋಜನಾ ಆಯೋಗದ ಧ್ಯೇಯೋದ್ದೇಶಗಳು ಎಷ್ಟೇ ಪ್ರಶಂಸಾರ್ಹವಾಗಿದ್ದರೂ ಅವು ಈ ಆರು ದಶಕಗಳಲ್ಲಿ ಎಂದೂ ಈಡೇರಲು ಸಾಧ್ಯವಾಗಲಿಲ್ಲ, ಏಕೆಂದರೆ ಆಳುವ ವರ್ಗಗಳು ಮತ್ತು ಅವರ ಸರಕಾರಗಳು ಅನುಸರಿಸಿದ್ದು ಭಾರತದಲ್ಲಿ ಬಂಡವಾಳಶಾಹಿ ಅಭಿವೃದ್ಧಿಯ ಮಾರ್ಗವನ್ನು.

ಆದರೆ ಬಂಡವಾಳಶಾಹಿ ಅಭಿವೃದ್ಧಿಗೆ ಆರ್ಥಿಕ ಮೂಲರಚನೆಯ ಮತ್ತು ಆಧುನಿಕ ಸಂಪರ್ಕದ ಸೌಲಭ್ಯಗಳನ್ನು ನಿರ್ಮಿಸಬೇಕಾಗಿತ್ತು. ದೇಶ ಸ್ವತಂತ್ರವಾದಾಗ ಅವೆಲ್ಲ ಇರಲಿಲ್ಲ. ಇದಕ್ಕೆ ಬೇಕಾದ ಹೂಡಿಕೆಗಳನ್ನು ತಾವಾಗಿಯೇ ಮಾಡುವುದು ಆ ಹಂತದಲ್ಲಿ ಭಾರತದ ಗುತ್ತೇದಾರಿ ಬಂಡವಾಳಿಗರಿಗೆ ಸಾಧ್ಯವಿರಲಿಲ್ಲ. ಅವರಲ್ಲಿ ಅದಕ್ಕೆ ಬೇಕಾದ ಸಂಪನ್ಮೂಲಗಳು ಇದ್ದರೂ ಅದಕ್ಕೆ ಅವರು ಬೇಗನೇ ಪ್ರತಿಫಲ ನಿರೀಕ್ಷಿಸುವಂತಿರಲಿಲ್ಲ. ಏಕೆಂದರೆ ಆ ಹೂಡಿಕೆಗಳ ಸ್ವರೂಪವೇ ಅಂತದ್ದು. ಆದ್ದರಿಂದ ಸಹಜವಾಗಿಯೇ ಆಗ ತಮ್ಮ ಸಂಪನ್ಮೂಲಗಳನ್ನು ಹೂಡುವ ಒಲವನ್ನು ಅವರು ತೋರಲಿಲ್ಲ. ಅದ–ರಿಂದಾಗಿ ಪ್ರಭುತ್ವ ಮಧ್ಯಪ್ರವೇಶಿಸಿ ಆ ಕೆಲಸವನ್ನು ಮಾಡಬೇಕೆಂದು ಬಯಸಿದರು. ಇದನ್ನು ಪ್ರಭುತ್ವ ಆಳುವ ವರ್ಗಗಳಿಂದ ಸಂಪನ್ಮೂಲಗಳನ್ನು ಸಂಗ್ರಹಿಸಿ ಮಾಡುವ ಬದಲು ಜನಗಳಿಂದ ಸಂಗ್ರಹಿಸಿ ಮಾಡಬೇಕಾಗಿತ್ತು. ಸಾರ್ವಜನಿಕ ವಲಯದ ಪಾತ್ರದ ನಿರೂಪಣೆಯಾದದ್ದು ಇಂತಹ ಸನ್ನಿವೇಶದಲ್ಲಿ.


ವಾಸ್ತವವಾಗಿ ಇಂತಹ ಒಂದು ಕಾರ್ಯತಂತ್ರ ಅತ್ಯಂತ ಸ್ಪಷ್ಟವಾಗಿ ಸ್ವಾತಂತ್ರ್ಯದ ಮೂರು ವರ್ಷಗಳ ಮೊದಲೇ ವ್ಯಕ್ತಗೊಂಡಿತು. 1944ರಲ್ಲಿ ಸರ್ ಪುರುಷೋತ್ತಮದಾಸ್ ಠಾಕುರ್‌ದಾಸ್ ಹಾಗೂ ಘನಶ್ಯಾಮದಾಸ್ ಬಿರ್ಲಾ, ಜೆಆರ್‌ಡಿ ಟಾಟಾ ಮತ್ತು ಶ್ರೀರಾಮ್ ಮತ್ತಿತರ ಏಳು ಭಾರತೀಯ ಬಂಡವಾಳಿಗರು ರೂಪಿಸಿದ ಒಂದು 'ಮನವಿ ಪತ್ರ'ದಲ್ಲಿ ಇದು ಕಾಣ ಸಿಗುತ್ತದೆ. ಅದರಲ್ಲಿ ಆರ್ಥಿಕ ಅಭಿವೃದ್ಧಿಯ 15 ವರ್ಷಗಳ ಒಂದು ಯೋಜನೆ ಇತ್ತು. 'ಮುಂಬೈ ಯೋಜನೆ' ಎಂದೇ ಜನಪ್ರಿಯಗೊಂಡ ಇದು ಮೂರು ಪಂಚವಾರ್ಷಿಕ ಯೋಜನೆಗಳನ್ನು ಹೊಂದಿತ್ತು. ಅದರಲ್ಲಿ ಮೊದಲನೆಯದ್ದು 'ಎರಡನೆಯದ್ದಕ್ಕೆ ಬುನಾದಿ ಹಾಕಿದರೆ, ಎರಡನೆಯದ್ದು ಮೂರನೆಯದ್ದಕ್ಕೆ ಆಧಾರವಾಗುತ್ತದೆ' ಎಂದು ಅದು ಹೇಳಿತ್ತು.

ಸಮಾಜವಾದ ಕಟ್ಟುವ ಭ್ರಮೆಯಿಂದಲ್ಲ

ಹೀಗೆ ಸಾರ್ವಜನಿಕ ವಲಯದ ರಕ್ಷಣೆ ಮತ್ತು ಖಾಸಗೀಕರಣದ ವಿರುದ್ಧ ಪ್ರಸಕ್ತ ಹೋರಾಟ ಹೊಮ್ಮಿರುವುದು ಇದು ಸಮಾಜವಾದ ಕಟ್ಟುತ್ತದೆ ಎಂಬ ಭ್ರಮೆಯಿಂದ ಅಲ್ಲ. ಇಂದಿನ ರಕ್ಷಣೆಯ ಹೋರಾಟ ಬಂದಿರುವುದು ಸಾರ್ವಜನಿಕ ವಲಯ ಇಂದೂ ಕೂಡ ಸ್ವಾವಲಂಬನೆಯ ಪ್ರಯತ್ನಗಳಲ್ಲಿ,

ಪುಟ 14 ಕ್ಕೆ

"ರಾಜಕೀಯದಲ್ಲಿ ನಾವು ಒಂದು ವ್ಯಕ್ತಿ, ಒಂದು ಮತ ಮತ್ತು ಒಂದು ಮತ, ಒಂದು ಮೌಲ್ಯ ಎಂಬ ಸೂತ್ರವನ್ನು ಮಾನ್ಯ ಮಾಡುತ್ತೇವೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಕಾರಣಕ್ಕಾಗಿ ಒಂದು ವ್ಯಕ್ತಿ, ಒಂದು ಮೌಲ್ಯ ಎಂಬ ಸೂತ್ರವನ್ನು ನಿರಾಕರಿಸುವುದನ್ನು ಮುಂದುವರೆಸುತ್ತೇವೆ. ಎಂದಿನ ವರೆಗೆ ನಾವು ಈ ವೈರುಧ್ಯಗಳ ಜೀವನವನ್ನು ಮುಂದುವರೆಸಲು ಸಾಧ್ಯ?"
ಕರಡು ಸಂವಿಧಾನವನ್ನು ಸಂವಿಧಾನ ಸಭೆಯ ಅಂಗೀಕಾರಕ್ಕೆ ಮಂಡಿಸುತ್ತ ಡಾ.ಬಿ.ಆರ್. ಅಂಬೇಡ್ಕರ್ ನೀಡಿದ್ದ ಎಚ್ಚರಿಕೆಗೆ ಈಗ ಮೋದಿ ಸರಕಾರದ ಈ ಕ್ರಮ ಲಕ್ಷ್ಯಗೊಡುವುದಂತೂ ದೂರದ ಮಾತು, ತದ್ವಿರುದ್ಧವಾಗಿ ಸಾಮಾಜಿಕ-ಆರ್ಥಿಕ ಭೇದಭಾವಗಳನ್ನು ಇನ್ನಷ್ಟು ಅಪಾಯಕಾರಕವಾಗಿ ಉಲ್ಬಣಗೊಳಿಸುತ್ತದೆ.



ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಸಾಮಾಜಿಕ ನ್ಯಾಯ

ರಾಜಕೀಯ ಪಕ್ಷಗಳ ಧೋರಣೆಗಳು

ವರದಿ: ಚಿಕ್ಕರಾಜು .ಎಸ್.

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದ)ದ 21ನೇ ರಾಜ್ಯ ಸಮ್ಮೇಳನದ ಅಂಗವಾಗಿ ನಡೆಯುತ್ತಿರುವ ಸರಣಿ ವಿಚಾರ ಸಂಕಿರಣಗಳ 6ನೇ ರಾಜ್ಯಮಟ್ಟದ "ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಸಾಮಾಜಿಕ ನ್ಯಾಯ–ರಾಜಕೀಯ ಪಕ್ಷಗಳ ಧೋರಣೆಗಳು." ಎಂಬ ವಿಚಾರ ಸಂಕಿರಣ 07 ಡಿಸೆಂಬರ್ 2014 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆಯಿತು.

"ನಾನೊಂದು ಮರವಾಗಿದ್ದರೆ, ಹಕ್ಕಿಯು ಗೂಡು ಕಟ್ಟುವ ಮುನ್ನ ಕೇಳುತ್ತಿರಲಿಲ್ಲ ನೀನು ಯಾವ ಕುಲ" ಎಂಬ ಕ್ರಾಂತಿಗೀತೆಯೊಂದಿಗೆ ವಿಚಾರ ಸಂಕಿರಣ ಪ್ರಾರಂಭವಾಯಿತು. ಅಧ್ಯಕ್ಷತೆಯನ್ನು ಸಿ.ಪಿ.ಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್ ನಾಗರಾಜ್ ವಹಿಸಿದ್ದರು.

ಪ್ರಾಸ್ತಾವಿಕವಾಗಿ ಸಿ.ಪಿ.ಐ(ಎಂ) ಪಕ್ಷದ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಗೋಪಾಲಕೃಷ್ಣ ಅರಳಹಳ್ಳಿಯವರು ಮಾತನಾಡಿದರು.

ದಲಿತರು ಮತ್ತು ದಲಿತೇತರರ ನಡುವೆ ದೊಡ್ಡ ಕಂದಕ ನಿರ್ಮಾಣವಾಗಿದ್ದು, ಇದನ್ನು ನಿರ್ನಾಮ ಮಾಡುವ ಬಹುದೊಡ್ಡ ಸವಾಲು ನಮ್ಮ ಮುಂದಿದೆ. 2011ರ ಜನಗಣತಿ ಪ್ರಕಾರ ದೇಶದ ಒಟ್ಟು ಜನಸಂಖ್ಯೆಯಲ್ಲಿ ಎಸ್.ಸಿ 16.6%, ಎಸ್.ಟಿ 8.4% ಇದ್ದು ಜನಸಂಖ್ಯೆಯ ಶೇ 25ರಷ್ಟು ದಲಿತರಿದ್ದಾರೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕ ನೋಡಿದ–ರೆ ದಲಿತರ ಅಭಿವೃದ್ಧಿ ಶೂನ್ಯವಾಗಿದೆ. ಈ ವರ್ಷದಲ್ಲೇ 150 ದಲಿತರ ಮೇಲಿನ ಪ್ರಕರಣಗಳು ನಡೆದಿದ್ದು, ಅವುಗಳಲ್ಲಿ 139 ಪ್ರಕರಣಗಳು ಮಾತ್ರ ಇತ್ಯರ್ಥವಾಗಿವೆ. ಉಳಿದ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ ಎಂದು ದೂರಿದರು.

ದೇವಸ್ಥಾನದ ಪ್ರವೇಶ ಬಯಸುವ ದಲಿತರ ಮೇಲೆ ದೌರ್ಜನ್ಯಗಳು ನಡಯುತ್ತಿವೆ. ದಲಿತರು ವಾಸಮಾಡುವ ಗ್ರಾಮಗಳಲ್ಲಿ ಕ್ಷೌರ ಮಾಡಲು ನಿರಾಕರಿಸುತ್ತಿದ್ದಾರೆ. ದೂರದ ತಾಲ್ಲೂಕು ಕೇಂದ್ರಗಳಿಗೆ ಸುಮಾರು 15–20ಕಿ.ಮೀ ದೂರ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕೊಪ್ಪಳ ಜಿಲ್ಲೆಯ ಮರಕುಂಬಿ ಗ್ರಾಮದಲ್ಲಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿತ್ತು. ಇವತ್ತಿಗೂ ಕೂಡ ದಲಿತರಿಗೆ ಟೀ ಅಂಗಡಿಗಳಲ್ಲಿ ಎರಡು ಲೋಟದ ಪದ್ಧತಿಯಿದೆ. ಬಿಸಿಯೂಟ ಯೋಜನೆಯಲ್ಲಿ ದಲಿತ ಮಹಿಳೆಯರು ಮಾಡಿದ ಆಹಾರವನ್ನು ಮೇಲ್ಜಾತಿಯ ಜನರು ನಿರಾಕರಿಸುತ್ತಿದ್ದಾರೆ. ರಾಮನಗರದಲ್ಲಿ ಪ್ರೀತಿಸಿ ಮದುವೆಯಾದ ಕಾರಣಕ್ಕೆ ದಲಿತ ಕುಟುಂಬದ ಮೇಲೆ ದಾಂಧಲೆ ನಡೆಸಿದ್ದಾರೆ.

ಎಲ್.ಪಿ.ಜಿ ನೀತಿಗಳಿಂದಾಗಿ ಮೀಸಲಾತಿ ಕಣ್ಮರೆಯಾಗುತ್ತಿದೆ. ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಜಾರಿಯ ಅಗತ್ಯವಿದೆ. ಈ ಹಿನ್ನಲೆಯಲ್ಲಿ ಸಿ.ಪಿ.ಐ(ಎಂ)ಪಕ್ಷ "ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಸಾಮಾಜಿಕ ನ್ಯಾಯ"ಕ್ಕೆ ಸಂಬಂಧಿಸಿದಂತೆ ತನ್ನ ನಿಲುವನ್ನು ಸ್ಪಷ್ಟಪಡಿಸಲು ಈ ವಿಚಾರ ಸಂಕಿರಣವನ್ನು ಆಯೋಜಿಸಿದೆ. ವಿವಿಧ ರಾಜಕೀಯ ಪಕ್ಷಗಳ ಧೋರಣೆಗಳ ಕುರಿತು ತಜ್ಞರುಗಳು ಮಾತನಾಡುತ್ತಾರೆ. ಎಂದು ಹೇಳಿದರು.

"ಅಭಿವೃದ್ಧಿ ಹಕ್ಕಿನ ಕ್ರಮವೇ ಹೊರತು ಹಂಗಿನ ಕ್ರಮವಲ್ಲ"–ಡಾ.ಟಿ.ಆರ್ ಚಂದ್ರಶೇಖರ್

ವಿಚಾರ ಸಂಕಿರಣದ ಉದ್ಘಾಟನಾ ಮಾತುಗಳನ್ನಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಟಿ.ಆರ್ ಚಂದ್ರಶೇಖರ್ ಎಡಪಂಥೀಯ ಮತ್ತು ಬಪಪಂಥೀಯ ಪಕ್ಷಗಳಿಗೆ ಸೈದ್ಧಾಂತಿಕ ನಿಲುವುಗಳಿರುತ್ತವೆ. ನಡುಪಂಥೀಯ ಪಕ್ಷಗಳಿಗೆ ಸೈದ್ಧಾಂತಿಕ ನಿಲುವುಗಳಿಲ್ಲ ಎನ್ನುವುದು ಸರಿಯಲ್ಲ, ಏಕೆಂದರೆ ಅಧಿಕಾರದ ಗದ್ದುಗೆ ಹಿಡಿಯಲು ಅವುಗಳಿಗೂ ತನ್ನದೇ ಆದ ನಿಲುವುಗಳಿವೆ.

ಸಂಪ್ರದಾಯ, ಮೌಢ್ಯತೆ, ಆಧುನಿಕತೆ ಇವುಗಳ ಭಿನ್ನತೆ ಬಗೆಗೆ ನಮಗಿನ್ನು ಗೊಂದಲವಿದೆ. ಮೌಢ್ಯ ವಿರೋಧಿ ಕಾನೂನನ್ನು ಜಾರಿಗೆ ತರಲು ಯಾವುದು ಮೌಢ್ಯ ಎನ್ನುವ ಚರ್ಚೆಯಲ್ಲಿಯೇ ನಾವಿದ್ದೇವೆ.



ಮಾಧ್ಯಮಗಳಲ್ಲಿ ಅಬ್ಬರವೇ ಇಂದು ಮೂಲಸಾಧನವಾಗುತ್ತಿದೆ. ಉದ್ದಿಮೆದಾರರೇ ವಾಹಿನಿಗಳಲ್ಲಿ ಮಾತನಾಡುತ್ತಿದ್ದಾರೆ. ಉದ್ದಿಮೆದಾರರ ಸಮಸ್ಯೆಗಳನ್ನೇ ಇಂದು ಜನರ ಸಮಸ್ಯೆಯ ರೀತಿಯಲ್ಲಿ ವೈಭವೀಕರಿಸಿ ತೋರಿಸುತ್ತಿದ್ದಾರೆ. ಶ್ರಮಿಕರ ಬಗ್ಗೆ ಇವರುಗಳು ಮಾತನಾಡುವುದೇ ಇಲ್ಲ ಇದೊಂದು ದೊಡ್ಡ ಅಪಾಯಕಾರಿ ಬೆಳವಣಿಗೆ. ಅಸ್ಪೃಶ್ಯತೆ, ಜಾತಿತಾರತಮ್ಯ ಹಾಗೂ ಸಾಮಾಜಿಕ ನ್ಯಾಯ ಇವುಗಳೆಲ್ಲವನ್ನು ಮೂಲೆಗೆ ತಳ್ಳಲಾಗುತ್ತಿದೆ.

ಅಸ್ಪೃಶ್ಯತೆಯ ಬಗ್ಗೆ ಮಾತನಾಡಲು ಮುಂದಾದರೆ 21ನೇ ಶತಮಾನದಲ್ಲಿ ಈ ಬಗ್ಗೆ ಮಾತನಾಡುತ್ತೀರಾ? ಈಗ ಅಸ್ಪೃಶ್ಯತೆ ಎಲ್ಲಿದೆ ಎಂದು ಹೇಳುತ್ತಾರೆ. ಯೋಜನಾ ಆಯೋಗದಲ್ಲಿ ಅಸ್ಪೃಶ್ಯತೆಯ ಇಂಡೆಕ್ಸ್ ಕಾಲಂ ಯಾಕೆ ಬೇಕು ಎಂಬ ಚರ್ಚೆ ನಡೆಯುತ್ತಿದೆ.

ಅಸ್ಪೃಶ್ಯತೆ ಎಂಬುದನ್ನು ಆಚರಣೆಯಾಗಿ ನೋಡಬಾರದು ಅದೊಂದು ಪ್ರಣಾಳಿಕೆಯಾಗಿ ನೋಡಬೇಕು. ಇದರಿಂದಾಗುವ ಸಾಮಾಜಿಕ, ಆರ್ಥಿಕ ದುಷ್ಪರಿಣಾಮವನ್ನು ನೋಡಬೇಕು. ಸ್ವಾತಂತ್ರ್ಯವನ್ನು ಎರಡು ರೀತಿಯಲ್ಲಿ ನೋಡುತ್ತೀವಿ ಒಂದು ನಕಾರಾತ್ಮಕ ಸ್ವಾತಂತ್ರ್ಯ ಇನ್ನೊಂದು ಸಕಾರಾತ್ಮಕ ಸ್ವಾತಂತ್ರ್ಯ. ಸ್ವಾತಂತ್ರ್ಯವನ್ನು ಹತ್ತಿಕ್ಕುವ ನೆಲೆಯನ್ನೇ ಅಸ್ಪೃಶ್ಯತೆ, ಜಾತಿ ತಾರತಮ್ಯ ಎಂದು ಕರೆಯುವುದು.

ಅಭಿವೃದ್ಧಿ ಎಂದರೆ ಜಿ.ಡಿ.ಪಿಯ ಪ್ರಮಾಣ ಹೆಚ್ಚಾಗುವುದಲ್ಲ ಬದಲಾಗಿ ಶೋಷಿತ ಜನರಿಗೆ ಅವಕಾಶಗಳು ಹೆಚ್ಚಾಗಬೇಕು ಮತ್ತು ಜನರ ಸಾಮರ್ಥ್ಯವನ್ನು ವಿಸ್ತೃತಗೊಳಿಸಬೇಕು. ಆದ್ದರಿಂದ ಅಭಿವೃದ್ಧಿಯನ್ನು ಹಕ್ಕಿನ ಕ್ರಮವಾಗಿ ನೋಡಬೇಕೇ ಹೊರತು ಹಂಗಿನ ಕ್ರಮವಾಗಿ ನೋಡುವುದಲ್ಲ.

ಈ ಹಿಂದೆ 12ನೇ ಶತಮಾನದಲ್ಲಿ ಅಸ್ಪೃಶ್ಯತೆಯ ಬಗ್ಗೆ, ಜಾತಿತಾರತಮ್ಯದ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ, ಒಡೆತನದ ಬಗ್ಗೆ, ಕೂಲಿಯ ಬಗ್ಗೆ ಮಾತನಾಡಿದ್ದಾರೆ. ಆದರೆ ಇಂದು ದಲಿತರ ಸ್ಥಿತಿಗತಿ ಕುರಿತು ಮಾತನಾಡುವ ಬದಲಾಗಿ ಭಾರತೀಯ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಿದ್ದಾರೆ.

ಸ್ವಾತಂತ್ರ್ಯ, ಸಮಾನತೆ, ಅಸ್ಪೃಶ್ಯತೆ, ಮಹಿಳೆಯರ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯದಂತಹ ಸಂಗತಿಗಳ ಬಗ್ಗೆ ವ್ಯವಸ್ಥಿತವಾಗಿ ಮೂಲೆಗೆ ತಳ್ಳುವಂತಹ ಕ್ರಮಗಳು ಇನ್ನಷ್ಟು ಸಬಲಗೊಳ್ಳುತ್ತಿದೆ. ಈ ಹಿನ್ನಲೆಯಲ್ಲಿ ವಿಚಾರಸಂಕಿರಣ ಬಹಳ ಮುಖ್ಯವಾದದ್ದು. ಇವುಗಳ ಕುರಿತು ಚರ್ಚೆ ನಡೆಸಿದರೆ ಪ್ರತಿಕ್ರಿಯೆ ಬರುವುದು ಇವು ಭಾರತದ ಸಂಸ್ಕೃತಿ ಅಲ್ಲ, ನಮ್ಮ ಪರಂಪರೆ ಅಲ್ಲ, ಇವು ಪಶ್ಚಿಮದಿಂದ ಬಂದಿರುವುದು ಇವುಗಳ ಬಗ್ಗೆ ಮಾತನಾಡುವುದು ಸರಿಯಲ್ಲ ಎಂದು ವೈದಿಕರು ನುಣುಚಿಕೊಳ್ಳುತ್ತಾರೆ.

ಯಾವ ಸಮಾಜದಲ್ಲಿ ಅವಕಾಶವಂಚಿತರಿಗೆ, ಶೋಷಿತರಿಗೆ ಹೆಚ್ಚೆಚ್ಚು ಅಗತ್ಯವಿರುವ ಸೇವೆಗಳನ್ನು ಒದಗಿಸುತ್ತದೆಯೋ ಅದೇ ಸಾಮಾಜಿಕ ನ್ಯಾಯ. ಅಂತಹ ಸಮಾಜ ಆದರ್ಶ ಸಮಾಜವಾಗುತ್ತದೆ. ಆದರೆ ಇದು ಆಗುತ್ತಿಲ್ಲ.

ಸ್ವಾತಂತ್ರ್ಯ ನಂತರದಲ್ಲಿ 67ವರ್ಷಗಳಿಂದ ಮೀಸಲಾತಿ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಅದರಿಂದ ಅನೇಕ ಜನರಲ್ಲಿ ಅಸಹ್ಯ, ಅಸೂಯೆ. ಇನ್ನೆಷ್ಟು ವರ್ಷ ಈ ರೀತಿ ಮೀಸಲಾತಿಯನ್ನು ಕೊಡಬೇಕು? ಕೇವಲ 67ವರ್ಷ ಮೀಸಲಾತಿ ಕೊಟ್ಟ ಕಾರಣಕ್ಕೆ ನಿಮಗೆ ಅಸೂಯೆ ಉಂಟಾದರೆ ಅದೆಷ್ಟೋ ಶತಮಾನಗಳಿಂದ ಶೋಷಣೆಯನ್ನು ಅನುಭವಿಸುತ್ತಿರುವವರಿಗೆ ಇನ್ನೆಷ್ಟು ಅಸಹನೆಯನ್ನು ತೋರಿಸಬೇಕು ಎಂದು ಜರಿದರು.

ಬಲಪಂಥೀಯ, ನಡುಪಂಥೀಯ ಪಕ್ಷಗಳು ಈ ಯಾವ ಸಂಗತಿಗಳ ಕುರಿತು ಮಾತನಾಡುವುದಿಲ್ಲ. ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಸಾಮಾಜಿಕ ನ್ಯಾಯದಂತಹ ವಿಚಾರಗಳನ್ನು ಚರ್ಚಿಸಬೇಕು, ಸಂವಾದ ಮಾಡಬೇಕು, ಅನುಸಂಧಾನಮಾಡಬೇಕು. ಪಠ್ಯಪುಸ್ತಕಗಳಲ್ಲಿ ಇವುಗಳನ್ನೆಲ್ಲಾ ಸೇರಿಸಬಾರದು, ಮಕ್ಕಳಿಗೆ ಇವುಗಳನ್ನು ಹೇಳಿಕೊಡಬಾರದು ಎಂದು ಮಾತನಾಡುತ್ತಿದ್ದಾರೆ.

ಅಸ್ಪೃಶ್ಯತೆ, ಅಸಮಾನತೆ, ಹಸಿವು, ಬಡತನ, ಮಹಿಳೆಯರ ಮೇಲಿನ ದೌರ್ಜನ್ಯಗಳು, ಲಿಂಗತಾರತಮ್ಯ ಇವುಗಳೆಲ್ಲವೂ ತನ್ನಷ್ಟಕ್ಕೆ ತಾನೇ ನಿವಾರಣೆಯಾಗುವುದಿಲ್ಲ. ಈ ವಿಚಾರಗಳನ್ನು ಮುಚ್ಚಿಹಾಕುವುದರಿಂದ ಶಮನ ಮಾಡಲು ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿ ವಿಚಾರಸಂಕಿರಣ ಬಹಳ ಅಗತ್ಯವಾದದ್ದು ಎಂದು ತಮ್ಮ ಉದ್ಘಾಟನಾ ಮಾತುಗಳನ್ನಾಡಿದರು.

ಶತಮಾನಗಳಿಂದ ಶೋಷಣೆ ಅನುಭವಿಸುತ್ತಿರುವ ದಲಿತರಿಗೆ ಸಾಮಾಜಿಕ ನ್ಯಾಯದ ಮೂಲಕ ವಿಶೇಷ ಸೌಲಭ್ಯ ನೀಡುವುದು ಅಗತ್ಯ; –ಡಾ.ಎಸ್ ಚಂದ್ರಶೇಖರ್

ನಡುಪಂಥೀಯ ಪಕ್ಷಗಳ ಕುರಿತು ವಿಷಯ ಮಂಡಿಸುತ್ತಾ ನಮ್ಮ ದೇಶದಲ್ಲಿ ಜನತಂತ್ರ ಮತ್ತು ಸ್ವಾತಂತ್ರ್ಯ ಅನ್ನೋದು ಅರ್ಥಪೂರ್ಣವಾಗಬೇಕಾದರೆ ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಸಾಮಾಜಿಕ ನ್ಯಾಯ ಅನಿವಾರ್ಯ. ಇದನ್ನು ಯಾವುದೇ ಪಕ್ಷವಾಗಲಿ, ಪಂಥವಾಗಲಿ ಕಾರ್ಯಕ್ರಮವನ್ನು ರೂಪಿಸಿ ಅನುಷ್ಠಾನ ಮಾಡುವುದು ಅನಿವಾರ್ಯ ಎಂದು ಅವರು ಹೇಳಿದರು.

ಗಾಂಧೀಜಿಯವರು 1921ರಲ್ಲಿ "ಯಂಗ್ ಇಂಡಿ–ಯಾ" ಎಂಬ ಮಾಸಪತ್ರಿಕೆಯಲ್ಲಿ "ಅಸ್ಪೃಶ್ಯತೆಯ ಕೊನೆಯ ಚಹರೆ ಈ ದೇಶದಲ್ಲಿ ಇರೋವರೆಗೂ ನಿಜವಾದ ಸ್ವಾತಂತ್ರ್ಯ ಬಂದಿದೆ ಎನ್ನುವುದು ತಪ್ಪು" ಎಂದು ಬರೆದಿದ್ದಾರೆ. ಅವರು ಬರೆದು ನೂರು ವರ್ಷಗಳು ಕಳೆದಿವೆ. ವಚನ ಸಾಹಿತ್ಯದ ಕಾಲ ಮುಗಿದು 800ವರ್ಷಗಳು ಕಳೆದಿವೆ. 12ನೇ ಶತಮಾನದ ವಚನ ಚಳುವಳಿಗೆ ಸಂಘಟನಾತ್ಮಕ ಪ್ರಕ್ರಿಯೆ ಪ್ರಾರಂಭವಾಗಿದ್ದು 19ನೇ ಶತಮಾನದಲ್ಲಿ.

ಉದಾರತಾವಾದಿಗಳು, ಮಾನವತಾವಾದಿಗಳು ಆದ ಕೆಲವರು ರಾಜಾರಾಂ ಮೋಹನ್ ರಾಯ್‌ರಿಂದ ಹಿಡಿದು ವಿವೇಕಾನಂದರವರೆಗೆ ಜಾತಿವ್ಯವಸ್ಥೆಯ ವಿರುದ್ಧವಾಗಿ ಮಾತನಾಡಿದ್ದಾರೆ. ಆದರೆ ಇವರನ್ನು ಬೇರೆಯವರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ನಿಜವಾದ ಎಡಪಂಥೀಯವಾದಿ ಕ್ರಾಂತಿಕಾರಿಯೆಂದರೆ ಸ್ವಾಮಿ ವಿವೇಕಾನಂದರು. ಏಕೆಂದರೆ "ಭಾರತ ದೇಶಕ್ಕೆ ಹೊಸ ಶಕ್ತಿ ಬರಬೇಕೆಂದರೆ ಅದು ಶ್ರಮಿಕರ ಗುಡಿಸಲುಗಳಲ್ಲಿ" ಎಂದು ಹೇಳಿದ್ದರು. ಶೂದ್ರಶಕ್ತಿ ಅಂದರೆ ಕಾರ್ಮಿಕ ಶಕ್ತಿ ಅರಳಿದಾಗಲೇ ನಮ್ಮ ದೇಶ ನಿಜವಾಗಿಯೂ ಗುಲಾಮಗಿರಿಯಿಂದ ನಾಶವಾಗುತ್ತದೆ ಎಂದು ಹೇಳಿದ್ದರು.

20ನೇ ಶತಮಾನದಲ್ಲಿ ರಾಜಕೀಯವಗಿ ಸಕ್ರಿಯವಾಗಿದ್ದ ಬಹುತೇಕ ಎಲ್ಲರೂ ಸಮಾನತೆ ಬಗ್ಗೆ ಮಾತನಾಡುತ್ತಿದ್ದರು. ಆ ಸಮಯದಲ್ಲಿ ತತ್‌ಕ್ಷಣ ಸಮಾನತೆ ಬೇಕಾಗಿತ್ತು. ಬ್ರಿಟೀಷರು ಮತ್ತು ದೇಶದ ಜನರ ನಡುವಿನ ತಾರತಮ್ಯ ಹೆಚ್ಚುತ್ತಿತ್ತು. ಅದರ ಕುರಿತು ಮಾತನಾಡುತ್ತಿದ್ದರು ಆದರೆ ನಮ್ಮೊಳಗೇ ಇದ್ದಂತಹ ತಾರತಮ್ಯದ ಬಗ್ಗೆ ಧ್ವನಿ ಎತ್ತಿದ್ದು ಡಾ.ಬಿ.ಆರ್ ಅಂಬೇಡ್ಕರ್‌ರವರು. ಈ ದೇಶದಲ್ಲಿ ಮೊದಲು ಪ್ರಾರಂಭವಾಗಿದ್ದು ರಾಜಕೀಯ ಸ್ವಾತಂತ್ರ್ಯವಲ್ಲ ಮೊದಲು ಪ್ರಾರಂಭವಾದದ್ದು ಸಾಮಾಜಿಕ ಸುಧಾರಣಾ ಚಳುವಳಿಗಳು.

1931ರವರೆಗೂ ನಾಗರೀಕ ಹಕ್ಕು ವಿಷಯ ಕಾಂಗ್ರೆಸ್ ಪಕ್ಷದಲ್ಲೇ ಚರ್ಚೆ ನಡೆದಿರಲಿಲ್ಲ. ಕಮ್ಯುನಿಸ್ಟರಿಂದಲೇ ಈ ಚರ್ಚೆ ಪ್ರಾರಂಭವಾಗಿದ್ದು. ಕಾರಣವೆಂದರೆ ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲೂ ಕಾಂಗ್ರೆಸ್‌ನಲ್ಲಿ ಶೇ.80ರಷ್ಟು ಕಮ್ಯುನಿಸ್ಟರು ಮತ್ತು ಸಮಾಜವಾದಿಗಳೇ ಇದ್ದರು.

ನಮ್ಮ ಸಮಾಜದಲ್ಲಿರುವ ಪೂರ್ವಾಗ್ರಹಗಳು, ನಂಬಿಕೆಗಳನ್ನು ನಾಶಮಾಡದಿದ್ದರೆ ಸಾವಿರಾರು ಕಾಯ್ದೆಗಳನ್ನು ರಚಿಸಿದರು ಈ ಅನಿಷ್ಟ ಪದ್ಧತಿಗಳು ನಿವಾರಣೆಯಾಗುವುದಿಲ್ಲ. ಇವುಗಳ ನಿರ್ಮೂಲನೆ ಮಾಡಲು ಯಾವುದೋ ಒಂದು ಜನಾಂಗದ ಅಥವಾ ವರ್ಗದ ಕೆಲಸವಲ್ಲ ಇಡೀ ಪ್ರಜ್ಞಾವಂತ ಜನಸಮೂಹ ಮಾಡಬೇಕಾದ ಕೆಲಸ.

ಶಿಕ್ಷಣ, ಆಧುನಿಕತೆಯಿಂದಾಗಿ ಕಾಲಕ್ರಮೇಣ ಇವುಗಳೆಲ್ಲವು ನಾಶವಾಗುತ್ತದೆ ಎನ್ನುವುದು ಬಲಪಂಥೀಯರ ವಾದ. ಆದರೆ ಖಂಡಿತಾ ಇದು ಸುಳ್ಳು. ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿದ್ದಂತೆ ಜಾತಿವಾದ ಕೋಮುವಾದದ ವೇಗ ತೀವ್ರಸ್ವರೂಪ ಪಡೆದುಕೊಳ್ಳುತ್ತಿದೆ. ಜಾತಿ ಲಿಂಗಾಧಾರಿತ ತಾರತಮ್ಯಗಳು ಮನುಷ್ಯತ್ವವನ್ನು ಕೊಂದುಬಿಡುವಷ್ಟು ಬಲಾಢ್ಯವಾಗಿವೆ. 10ನೇ ಶತಮಾನದಲ್ಲೇ ಮನುಷ್ಯ ಕುಲಂ ತಾನೊಂದೇ

ಜನಶಕ್ತಿ
ಕನ್ನಡ ವಾರಪತ್ರಿಕೆ

ವಲಂ ಎಂದು ಪಂಪ ಹೇಳಿದ್ದರು. ಆದರೆ ಇಂದು ಬಲಪಂಥೀಯರು ನೇರವಾಗಿ ಅಥವಾ ಬಹಿರಂಗವಾಗಿ ನಡುಪಂಥೀಯ ಪಕ್ಷಗಳು ಕೂಡ ಜಾತಿಲೆಕ್ಕಾಚಾರದಿಂದಲೇ ಅಧಿಕಾರದ ಗದ್ದುಗೆಯನ್ನು ಹಿಡಿಯುತ್ತಾರೆ ಎಂದರು.

ಡಾ.ಬಿ.ಆರ್ ಅಂಬೇಡ್ಕರ್‌ರವರ ಅನುಯಾಯಿಗಳೇ ಇಂದು ದಲಿತರಿಗೆ ರಾಜಕೀಯ ಮೀಸಲಾತಿ ಬೇಡ ಎನ್ನುತ್ತಿರುವುದು ಕೆಟ್ಟ ವಿಪರ್ಯಾಸ; ಪ್ರೊ.ಬಿ. ಗಂಗಾಧರಮೂರ್ತಿ.

ಪ್ರಗತಿಪರ ಚಿಂತಕರಾದ ಪ್ರೊ.ಬಿ.ಗಂಗಾಧರಮೂರ್ತಿರವರು ಭಾರತದಲ್ಲಿ ಮೂಲಭೂತವಾಗಿರುವ “ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಸಾಮಾಜಿಕ ನ್ಯಾಯ” ಇವುಗಳ ಬಗ್ಗೆ ಬಲಪಂಥೀಯ ಪಕ್ಷಗಳು ಹೊಂದಿರುವ ಧೋರಣೆ ಕುರಿತು ಮಾತನಾಡುತ್ತಾ ಸಂವಿಧಾನ ಬಂದು 67ವರ್ಷಗಳು ಕಳೆದರೂ ಜಾತಿರಹಿತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗಲಿಲ್ಲ.

ಭಾರತದಲ್ಲಿರುವ ಬಲಪಂಥೀಯ ರಾಜಕೀಯ ಪಕ್ಷಗಳಲ್ಲಿ ಪ್ರಬಲವಾಗಿರುವ ಬಿ.ಜೆ.ಪಿ, ಕೆಲವು ಪ್ರಾಂತ್ಯಗಳಲ್ಲಿ ಪ್ರಬಲವಾಗಿರುವ ಶಿವಸೇನೆ ಮತ್ತಿತರ ಪಕ್ಷಗಳು ಜಾತಿ ವ್ಯವಸ್ಥೆಯನ್ನು ಉಳಿಸಿಕೊಂಡು ಹೋಗಲು ಪ್ರಯತ್ನಿಸುತ್ತಿವೆ.

ಆರ್.ಎಸ್.ಎಸ್‌ನ ಬಗ್ಗೆ ಮಾತನಾಡದೇ ಯಾವುದೇ ಬಲಪಂಥೀಯ ಪಕ್ಷಗಳ ಸಿದ್ಧಾಂತವನ್ನು ಕುರಿತು ಮಾತನಾಡಲಾಗುವುದಿಲ್ಲ. 1925ರಲ್ಲಿ ಆರ್‌ಎಸ್‌ಎಸ್ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ಅತ್ಯಂತ ಸ್ಪಷ್ಟವಾದ ಸಿದ್ಧಾಂತದ ಕಲ್ಪನೆಯನ್ನು ಇಟ್ಟಿಕೊಂಡಿದ್ದರು. ಅವರಿಗಿದ್ದ ಗುರಿ ಹಿಂದೂ ರಾಷ್ಟ್ರವನ್ನು ಕಟ್ಟುವುದು. ಹಿಂದೂ ಸಂಸ್ಕೃತಿಯೆಂದರೆ ತಮ್ಮದೇ ಆದ ದೇವತೆಗಳ ಉಪಾಸನೆಯನ್ನು ಮಾಡುವುದು. ಇಲ್ಲಿ ಬೇರೆ ಆಚರಣೆಗಳಿಗೆ ಅವಕಾಶ ಇಲ್ಲ.

ಆರ್‌ಎಸ್‌ಎಸ್‌ನ ಸಾಮರ್ಥ್ಯ ಈಗಿರುವಷ್ಟು ಮೊದಲು ಇರಲಿಲ್ಲ. ಇನ್ನು ಆರ್‌ಎಸ್‌ಎಸ್‌ನ್ನು ಕಟ್ಟುವ ಹಂತದಲ್ಲಿದ್ದರು. ಆಗ ಹೊರಗಡೆ ಚರ್ಚೆ ಮಾಡುತ್ತಿರಲಿಲ್ಲ. ಹಿಂದೂ ಸಂಸ್ಕೃತಿಯಲ್ಲಿ ವಿಶೇಷವೆಂದರೆ ಒಳಗೆ ಮಾಡುವುದನ್ನು ಹೊರಗೆ ಮಾಡುತ್ತಾರೆ, ಹೊರಗೆ ಮಾಡಬೇಕಾದ್ದನ್ನು ಒಳಗೆ ಮಾಡುತ್ತಾರೆ. ಆರ್‌ಎಸ್‌ಎಸ್‌ನಲ್ಲಿ ಮೊದಲಿನಿಂದಲೂ ಒಳಗಿನ ಶಿಸ್ತು, ಹೊರಗಿನ ಶಿಸ್ತು, ವಿಚಾರಣೆ ಮಾಡುವ ಶಿಸ್ತು ಮತ್ತು ಆಚರಣೆ ಮಾಡುವ ಶಿಸ್ತು ಎನ್ನುವುದಿದೆ.

ಇಂದು ಆರ್‌ಎಸ್‌ಎಸ್ ಇಡೀ ದೇಶದಲ್ಲಿ 45,000 ಶಾಖೆಗಳನ್ನು ಕ್ರಿಯಾಗೊಳಿಸಿದ್ದಾರೆ. ಜೊತೆಗೆ 1,50,000 ಯೋಜನೆಗಳನ್ನು ನಡೆಸುತ್ತಿದ್ದಾರೆ. 1948ರಲ್ಲಿ ಗಾಂಧೀಜಿಯ ಕೊಲೆಯಾಯ್ತು ಅದರಲ್ಲಿ ಹಿಂದೂಪರ ಶಕ್ತಿಗಳು ಒಳಗೊಂಡಿದ್ದವು. ಆರ್‌ಎಸ್‌ಎಸ್ ಕೂಡ ಅದರ ಭಾಗವಾಗಿತ್ತು. ಮಹಾತ್ಮ ಗಾಂಧೀಜಿಯವರ ಕೊಲೆಯ ರಕ್ತ ಅವರ ಕೈಯಲ್ಲಿತ್ತು, ಆದರೆ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಬಹಳ ಬೆಳವಣಿಗೆಯಾಗಿದೆ ಎಂದೆನಿಸುತ್ತದೆ. ಅವರಿಗಿರುವ 45,000 ಶಾಖೆಗಳಲ್ಲಿ ಅವರ ಕಾರ್ಯಕರ್ತರಿಗೆ ಏನನ್ನು ತರಬೇತಿಗೊಳಿಸುತ್ತಿದ್ದಾರೆ? ಅವರು ಯೋಚನೆ ಮಾಡುವ ರೀತಿ ಏನು? ಅವರು ನಡೆದುಕೊಳ್ಳುತ್ತಿರುವ ನಡವಳಿಕೆಯ ಕ್ರಮ ಏನು? ಎಂಬುದನ್ನು ಗಂಭೀರವಾಗಿ ಗಮನಿಸಬೇಕಾಗಿದೆ. ಅದರ 1,50,000 ಯೋಜನೆಗಳಲ್ಲಿ ಮುಖ್ಯವಾಗಿ ಶಿಕ್ಷಣರಂಗ, ಸಾಮಾಜಿಕ ವಿಭಾಗದಲ್ಲಿ, ಸಾಂಸ್ಕೃತಿಕ ರಂಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮ ಸಿದ್ಧಾಂತವನ್ನು ಕೇವಲ ರಾಜಕೀಯವಾಗಿ ಬಳಸುತ್ತಿಲ್ಲಾ ಬದಲಾಗಿ ಸಂಘಟನಾತ್ಮಕವಾಗಿ ಬಳಸುತ್ತಿದ್ದಾರೆ. ಅವರ ಸಿದ್ಧಾಂತ ಮತ್ತು ನಡವಳಿಕೆ 1948ರಿಂದಲೂ ಆಕ್ರಮಣಕಾರಿಯಾಗಿ ನಡೆ-ಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದುತ್ವದ ಬಗ್ಗೆ ಸಾವರ್ಕರ್ ಮಾತನಾಡಿದ್ದರು. ಆದರೆ ಗಾಂಧೀಜಿಯವರಿಗೆ ಒಪ್ಪಿಗೆ ಇರಲಿಲ್ಲ. ಹಿಂದೂ ಧರ್ಮವನ್ನು ನಾನು ಒಪ್ಪುತ್ತೇನೆ ಎಂದರೂ ಸಹ ಹಿಂದುತ್ವದ ಬಗ್ಗೆ ಯಾವತ್ತೂ ಒಲವನ್ನು ತೋರಿರಲಿಲ್ಲ. ಆದರೆ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಸೇಡಿನ ಮೂಲಕವೇ ನಮ್ಮ ಹೋರಾಟ ಎಂದು, ಇದು ನನ್ನ ಭಾರತದ ಕನಸು ಎಂದು ಸಾವರ್ಕರ್ ಹೇಳಿದ್ದರು.

ಸಾಂಪ್ರದಾಯಿಕವಾಗಿರುವ ಸಾಮಾಜಿಕ ವ್ಯವಸ್ಥೆ, ಸಾಂಪ್ರದಾಯಿಕವಾಗಿರುವ ರಾಜಕೀಯ ವ್ಯವಸ್ಥೆ, ಸಾಂಪ್ರದಾಯಿಕವಾಗಿರುವ ಆರ್ಥಿಕ ವ್ಯವಸ್ಥೆ ಹಾಗೂ ಸಾಂಪ್ರದಾಯಿಕವಾಗಿರುವ ಸಾಂಸ್ಕೃತಿಕ ವ್ಯವಸ್ಥೆಯೇ ಆರ್‌ಎಸ್‌ಎಸ್ ಮತ್ತು ಬಿ.ಜೆ.ಪಿಯ ಮೂಲಮಂತ್ರವಾಗಿದೆ. ಆದ್ದರಿಂದಲೇ ಡಾ.ಬಿ.ಆರ್ ಅಂಬೇಡ್ಕರ್‌ರವರು ಹಿಂದೂ ಧರ್ಮದ ಅಜೆಂಡಾವೆಂದರೆ ಅದು ಅಸಮಾನತೆ ಎಂದು ಹೇಳಿರುವುದು.



ಆರ್‌ಎಸ್‌ಎಸ್ ಇತ್ತೀಚೆಗೆ ಸೂಚನೆ ಕೊಡುತ್ತಿರುವುದೇನೆಂದರೆ ಹಿಂದುಳಿದ ವರ್ಗದವರನ್ನು ನಾಯಕರನ್ನಾಗಿ ಮಾಡಬೇಕೆಂದು. ಜಾತಿಯ ವಿರುದ್ಧವಾಗಿ ಹೋರಾಟ ಮಾಡುವ ಶಕ್ತಿಗಳನ್ನು ತೆಳುವುಮಾಡುವ ಕ್ರಮವೆಂದರೆ ಅವರನ್ನು ತಮ್ಮತ್ತ ಸೆಳೆದು ಆರ್‌ಎಸ್‌ಎಸ್‌ನಲ್ಲಿ ತರಭೇತಿಗೊಳಿಸುವ ತಂತ್ರ ನಡೆಯುತ್ತಿದೆ. ಉದಾಹರಣೆಗೆ ಉಮಾಭಾರತಿಯನ್ನು, ಕಲ್ಯಾಣ್‌ಸಿಂಗ್, ಬಂಗಾಳದ ಲಕ್ಷ್ಮಣ್, ನರೇಂದ್ರಮೋದಿಯನ್ನು ನಾಯಕರುಗಳನ್ನಾಗಿ ಮಾಡಿರುವುದು. ತಮ್ಮ ಸಿದ್ಧಾಂತವನ್ನು ಮುಟ್ಟಬೇಕಾದರೆ ವಿವಿಧ ರೀತಿಯಲ್ಲಿ ಕಾರ್ಯತಂತ್ರವನ್ನು ಉಪಯೋಗಿಸುತ್ತಾರೆ.

ಡಾ.ಬಿ.ಆರ್ ಅಂಬೇಡ್ಕರ್‌ರವರ ಅನುಯಾಯಿಗಳೇ ಇಂದು ದಲಿತರಿಗೆ ರಾಜಕೀಯ ಮೀಸಲಾತಿ ಬೇಡ ಎಂದು ಹೇಳುತ್ತಿರುವುದು ಕೆಟ್ಟ ವಿಪರ್ಯಾಸವಾಗಿದೆ. ಆದ್ದ-ರಿಂದ ಅಂಬೇಡ್ಕರ್‌ರವರು ಹಿಂದೂ ಧರ್ಮವನ್ನು ನೋಡಿದ ರೀತಿಯಲ್ಲಿ ನಾವಿಂದು ನೋಡಲು ಸಾಧ್ಯವಾಗಬೇಕು. ಏಕೆಂದರೆ ಬಿ.ಜೆ.ಪಿ ಮತ್ತು ಆರ್‌ಎಸ್‌ಎಸ್ ಬಲವಾಗಿ ನೆಲೆಯೂರುತ್ತಿದೆ. ಈ ಹಿನ್ನಲೆಯಲ್ಲಿ ಬಲಪಂಥೀಯ ಪಕ್ಷಗಳು “ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಸಾಮಾಜಿಕ ನ್ಯಾಯ”ದ ಕುರಿತ ಅವರ ಧೋರಣೆಗಳು ಸರಿಯಿಲ್ಲ. ಎಂದು ಅವರು ಹೇಳಿದರು.

ಜಾತಿಯ ಮೂಲಸಂರಚನೆಯ ಬೇರುಗಳನ್ನು ಹುಡುಕಿದ್ದು ಎಡಪಕ್ಷಗಳು; – ಸಿ. ಯತಿರಾಜ್.

ನಿವೃತ್ತ ಪ್ರಾಂಶುಪಾಲರಾದ ಸಿ. ಯತಿರಾಜ್‌ರವರು “ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಸಾಮಾಜಿಕ ನ್ಯಾಯ” ಇವುಗಳ ಬಗ್ಗೆ ಎಡಪಕ್ಷಗಳು ಹೊಂದಿರುವ ಧೋರಣೆಗಳ ಕುರಿತು ಮಾತನಾಡುತ್ತಾ ಒಂದರಿಂದ ಐದನೇ ತರಗತಿವರೆಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯಲ್ಲಿ ಶೇ48ರಷ್ಟು ಎಸ್.ಸಿ/ಎಸ್.ಟಿ ಜಾತಿಯವರಾಗಿದ್ದಾರೆ. ನಾವು ಮೀಸಲಾತಿಯ ಸಾಧಕ-ಬಾಧಕಗಳ ಕುರಿತು ಮೈದುಂಬಿ ಮಾತನಾಡುತ್ತಿದ್ದೇವೆ. ಇತ್ತೀಚೆಗೆ ಸಿ.ಎಸ್.ಡಿ.ಎಸ್ ಒಂದು ವರದಿಯನ್ನು ನೀಡಿದೆ. ಆ ವರದಿಯಲ್ಲಿ 315 ಮುಖ್ಯ ತೀರ್ಮಾನಗಳನ್ನು ತೆಗೆದುಕೊಳ್ಳುವ ದೆಹಲಿಯ ಕೇಂದ್ರದಲ್ಲಿರುವ ಸಂಸ್ಥೆಗಳನ್ನು ಅಧ್ಯಯನ ಮಾಡಿದ್ದಾರೆ. ತೀರ್ಮಾನ ಮಾಡುವ ಉನ್ನತ ಹುದ್ದೆಗಳಲ್ಲಿ ದಲಿತರಿಗೆ ಪ್ರಾತಿನಿಧ್ಯವೇ ಇಲ್ಲ ಎಂದು ಹೇಳಿದೆ. ಪರಿಸ್ಥಿತಿ ಈಗಿರುವಾಗ ಮೀಸಲಾತಿಯೇ ಅಪ್ರಸ್ತುತ ಎಂಬ ಚರ್ಚೆಗಳು ನಡೆಯುತ್ತಿವೆ. ಸಾಮಾಜಿಕ ನ್ಯಾಯದ ಪ್ರಶ್ನೆಗಳು ಜನಗಣತಿಯವರೆಗೂ ಹೋಗುತ್ತಿವೆ.

ಜಾತಿವ್ಯವಸ್ಥೆ ಎಂದರೆ ಗತಕಾಲದ ಪಾತಕಗಳ ಅಭಿವ್ಯಕ್ತಿ ಎಂದರ್ಥ. ಜ್ಯೋತಿ ಬಾ ಫುಲೆಯವರು ಜಾತಿವ್ಯವಸ್ಥೆಯ ನಿವಾರಣೆಗೆ ಅತ್ಯಂತ ಮಹತ್ತರವಾದ ಕೊಡುಗೆಯನ್ನು ನೀಡಿದವರು. ಅವರಿಗೆ ಜಾತಿ ನಿರ್ಮೂಲನೆ ಬಗೆಗೆ ಸ್ಪಷ್ಟವಾದ ನಿಲುವಿತ್ತು. ಅವರು ಮುಸ್ಲಿಂರನ್ನು ಕ್ರೈಸ್ತರನ್ನು ಒಳಗೊಳ್ಳುವ ನಿಟ್ಟಿನಲ್ಲಿ ಚಿಂತಿಸುತ್ತಿದ್ದರು. ಅಲ್ಲದೇ ಭೂಮಿಯ ಪ್ರಶ್ನೆಯನ್ನು ಬಹಳ ಪ್ರಧಾನವಾಗಿ ತೆ-ಗೆದುಕೊಂಡಿದ್ದರು. ಆದರೆ 1986ರಲ್ಲಿ ಜ್ಯೋತಿ ಬಾ ಫುಲೆಯವರ ನಿಧನದ ನಂತರ ಸತ್ಯ ಶೋಧ ಕ ಚಳುವಳಿ ಶಾಹುಮಹಾರಾಜರ ವಶವಾಯಿತು. ಅವರು ವೈದಿಕತೆಗೆ ಹೆಚ್ಚು ಮಹತ್ವವನ್ನು ನೀಡಿದ್ದರು. ಹೀಗೆ ಬ್ರಾಹ್ಮಣ್ಯೇತರ ಚಳುವಳಿಗಳು ರಾಷ್ಟ್ರೀಯ ಚಳುವಳಿಯಿಂದ ದೂರ ಸರಿಯುತ್ತಾ ಬಂದವು.

ಇಂತಹ ಪರಿಸ್ಥಿತಿಯಲ್ಲಿ ಎಡಪಕ್ಷಗಳು ಸರಿಯಾದ ನಿಲುವನ್ನು ತೆಗೆದುಕೊಂಡಿದ್ದವು. ಮುಖ್ಯವಾಗಿ ಲೋಹಿಯವಾದಿಗಳು, ಅಂಬೇಡ್ಕರ್‌ವಾದಿಗಳು ಕಮ್ಯುನಿಸ್ಟರಿಗೆ ಜಾತಿಯ ಕುರಿತು ಸ್ಪಷ್ಟ ನಿಲುವಿಲ್ಲ ಎನ್ನುತ್ತಿದ್ದರು. ಆದ-ರೆ ಜಾತಿಯ ಬಗೆಗೆ ಸ್ಪಷ್ಟವಾದ ಕಲ್ಪನೆಯಿದ್ದದ್ದು ಎಡಪಕ್ಷಗಳಿಗೆ ಮಾತ್ರ. ಜಾತಿಯ ಮೂಲ ಬೇರುಗಳನ್ನು ಹುಡುಕಿದ್ದು ಎಡಪಂಥೀಯರು.



ಸುಧಾರಣಾವಾದಿ ಚಳುವಳಿಗಳು, ರಾಷ್ಟ್ರೀಯ ಚಳುವಳಿಗಳು ಜಾತಿಯ ಮೂಲ ಪ್ರಶ್ನೆಯ ಕುರಿತು ಚರ್ಚಿಸಲೇ ಇಲ್ಲ ಏಕೆಂದರೆ ಮೂಲದಲ್ಲಿ ಭೂಮಿಯ ಪ್ರಶ್ನೆ ಮುಖ್ಯವಾಗಿತ್ತು. ಭೂಮಿಯ ಹಂಚಿಕೆಯ ಪ್ರಶ್ನೆ ಆ ಸಂದರ್ಭದಲ್ಲಿ ಬರಲೇ ಇಲ್ಲಾ. ಅಷ್ಟೇ ಶೋಷಿತ ಜಾತಿಗಳ ಐಕ್ಯತೆಯನ್ನು ಒಡೆಯುವುದಕ್ಕೆ ಒಳ ಮೀಸಲಾತಿಯ ಪ್ರಶ್ನೆ ತೀವ್ರಗೊಳ್ಳುತ್ತಿದೆ. ಜಾತಿಯ ಮೂಲ ಸಂರಚನೆಯ ಬಗ್ಗೆ ಚರ್ಚಿಸುವುದನ್ನು ಬಿಟ್ಟು ಕೇವಲ ಮೇಲ್‌ರಚನೆ ಕುರಿತು ವಿಮರ್ಶಿಸಲಾಗುತ್ತಿದೆ. ವರ್ಗದ ನೆಲೆಗಟ್ಟಿನಲ್ಲಿ ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬೇಕು. ಯಾರು ಶೋಷಿತರಿರುತ್ತಾರೋ ಅವರನ್ನು ಸಂಘಟಿಸಬೇಕಾಗಿದೆ ಎಂದರು.

ಆದ್ದರಿಂದ ಜಾತಿ ಎನ್ನುವುದು ಬಹಳ ಸಂಕೀರ್ಣವಾದದ್ದು, ಆರ್ಥಿಕ ಸಮಾನತೆ ಬಂದರೆ ಜಾತಿ ನಾಶವಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಜಾತಿಯ ನೆಲೆಯು ಹೊಸ ಹೊಸ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಎಡಪಕ್ಷಗಳ ಮೇಲೆ ಒಂದು ದೊಡ್ಡ ಸವಾಲಿದೆ. ಆ ಸವಾಲು ಎಡಪಕ್ಷಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಎಡಪಕ್ಷಗಳಿಗೆ ಪ್ರಜಾಪ್ರಭುತ್ವದ ಪ್ರಾತಿನಿಧ್ಯದಲ್ಲಿ ಶಕ್ತಿ ಕಡಿಮೆಯಾಗಿರಬಹುದು ಆದರೆ ಸಂಘಟನಾ ಶಕ್ತಿ ಕಡಿಮೆಯಾಗಿಲ್ಲ. ಜಾತಿಯೊಂದಿಗೆ ತಳುಕು ಹಾಕಿಕೊಂಡಿರುವ ವಿಶಾಲವಾದ ವರ್ಗಾಧಾರಿತ ಹೋರಾಟ ಮಾಡಲು ಎಡಪಕ್ಷಗಳಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ನಮ್ಮ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಯಾರು ಬೆಳೆಸಿದರೋ ಅವರೆಲ್ಲರೂ ಕೂಡ ಜಾತಿವ್ಯವಸ್ಥೆಯ ವಿರುದ್ಧ ಹೋರಾಟ ಮಾಡಿದವರೇ; – ಕಾಂ. ಜಿ.ಎನ್ ನಾಗರಾಜ್

ಸ್ವಾತಂತ್ರ್ಯ ನಂತರದಲ್ಲಿ ಸಂವಿಧಾನದ ರಚನೆಯಲ್ಲಿ ಪ್ರಮುಖವಾಗಿ ಸಮಾನತೆ, ಆಸ್ಪೃಶ್ಯತೆಯನ್ನು ನಿಷೇಧಿಸುವುದು ಸೇರಿದಂತೆ ಅನೇಕ ಅಂಶಗಳು ಒಳಗೊಂಡಿದ್ದವು. ರಚನೆ ಮಾಡಿದಂತಹ ಸಮಿತಿಯಲ್ಲಿ ಇದ್ದ ಸದಸ್ಯರುಗಳಲ್ಲಿ ಡಾ.ಬಿ.ಆರ್ ಅಂಬೇಡ್ಕರ್‌ರವರನ್ನು ಹೊರತುಪಡಿಸಿ ಉಳಿದವರೆಲ್ಲರೂ ಅತ್ಯಂತ ಮೇಲ್ವರ್ಗದವರು. ಪಾಳೇಗಾರ ಪ್ರತಿನಿಧಿಗಳೇ ಇದ್ದರು. ಆದ್ದರಿಂದ ಪ್ರಜಾಸತ್ತಾತ್ಮಕ ಸಂವಿಧಾನ ರಚನೆಯಾಗಬೇಕಾದರೆ ಸಂವಿಧಾನ ರಚನಾ ಸಮಿತಿ ಕೂಡ ಇಡೀ ದೇಶದೊಳಗೆ ಸಾರ್ವತ್ರಿಕ ಮತದಾನದ ಮೇಲೆ ಆಯ್ಕೆಯಾಗಬೇಕಾಗಿತ್ತು. ಹೀಗೆ ಸಂವಿಧಾನ ರಚನೆ ಆದ ನಂತರದಲ್ಲಿ ಅದರ ಕರಡನ್ನು ಇಡೀ ದೇಶದ ಜನರ ಮುಂದೆ ಮಂಡಿಸಿ ಜನರ ಅಭಿಪ್ರಾಯಗಳನ್ನು ಒಳಗೊಂಡು ಅಂತಿಮವಾಗಿ ಅನುಮೋದಿಸಬೇಕಿತ್ತು. ಈ ರೀತಿ ಪ್ರಜಾಸತ್ತಾತ್ಮಕ ಕ್ರಿಯೆಯಲ್ಲೇ ಲೋಪವಾಗಿದೆ. ರಚನೆಯಲ್ಲಾಗಿರುವ ಲೋಪದಿಂದಾಗಿ ಸಂವಿಧಾನದ ಆಶಯಗಳನ್ನು ಜಾರಿ ಮಾಡುವಲ್ಲೂ ಅದೇ ಲೋಪಗಳು ಎದುರಾಗುತ್ತಿವೆ.

ಸಾಮಾಜಿಕನ್ಯಾಯ ಎನ್ನುವುದು ಮೀಸಲಾತಿಗಿಂತ ಬಹಳ ದೊಡ್ಡದು. ಸಾಮಾಜಿಕ ನ್ಯಾಯದ ಒಂದು ಭಾಗವಾಗಿ ಮೀಸಲಾತಿಯನ್ನು ನೋಡಬೇಕಾಗಿದೆ. 1950ರಲ್ಲೇ ಮೀಸಲಾತಿ ಬಂದರೂ 1970ರವರೆಗೂ ಐಐಎಂ ಮತ್ತು ಎಐಟಿ ಈ ಎರಡು ಸಂಸ್ಥೆಗಳಲ್ಲಿ ಮೀಸಲಾತಿಯೇ ಇರಲಿಲ್ಲ. ಮೀಸಲಾತಿ ಜಾ-ರಿಯ ನಂತರವು ಎಸ್.ಸಿ/ಎಸ್.ಟಿ ಯವರಿಗೆ ಉದ್ಯೋಗದ ಮಾತು ಮರೀಚಿಕೆಯಾಗಿದೆ. ಖಾಸಗಿ ರಂಗದಲ್ಲಿ ಯಾರಿಗೆ ಹೆಚ್ಚು ಪ್ರಾಧಾನ್ಯತೆ ಸಿಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಖಾಸಗೀಕರಣವೆಂದರೆ ಜಾತಿ ವ್ಯವಸ್ಥೆಯ ಪುನರ್ ಸ್ಥಾಪನೆ ಮತ್ತು ಅಸ್ಪೃಶ್ಯತೆಯ ವೇದಿಕೆ ಎಂದರ್ಥ.

ನಮ್ಮ ದೇಶದಲ್ಲಿ ಜಾತಿ ವ್ಯವಸ್ಥೆಯನ್ನು ಸ್ಪಷ್ಟವಾಗಿ ಆರ್ಥಮಾಡಿಕೊಳ್ಳವಲ್ಲಿ ಹಾಗೂ ಜಾತಿ ನಿರ್ಮೂಲನೆ ಮಾಡುವಲ್ಲಿ ಮೊದಲು ಧ್ವನಿಯನ್ನು ಎತ್ತಿದ್ದು ಕಮ್ಯುನಿಸ್ಟರೇ. 1922ರಲ್ಲಿ ಮೊಟ್ಟಮೊದಲು ಸಂಪೂರ್ಣ ಸ್ವಾತಂತ್ರ್ಯಬೇಕು ಎಂಬ ಘೋಷಣೆಯ ಜೊತೆಗೆ ಜಾತಿಪದ್ಧತಿ ನಾಶಗೊಳಿಸಬೇಕೆಂಬುದನ್ನು ಸೇರಿಸಲಾಗಿತ್ತು. ಮಾರ್ಕ್ಸ್‌ವಾದಿ ಇತಿಹಾಸಕಾರರು,

ಪುಟ 15 ಕ್ಕೆ

‘ಲಂಚಕೋರ ಯುಡಿಎಫ್ ಸಚಿವರೆ ಕುರ್ಚಿ ಬಿಟ್ಟು ಇಳಿಯಿರಿ!!’

ಕೇರಳದಲ್ಲಿ ಮಾರ್ಧನಿಸಿರುವ ಜನರ ಕೂಗು

ಜನಪ್ರಿಯ ಕಲ್ಯಾಣ ಕಾರ್ಯಕ್ರಮವನ್ನು ಮುಂದುವರಿಸಲು ಬ್ಯಾಂಕ್ ಸಾಲ ಒದಗಿಸಲೂ ಸರ್ಕಾರ ಹಿಂದೇಟು ಹಾಕುತ್ತಿರುವುದರಿಂದ ಸಮುದಾಯದ ನೆಲೆಯುಳ್ಳ, ಬಡವರಿಗೆ ಮತ್ತು ಮಹಿಳೆಯರಿಗೆ ಸಹಕಾರಿಯಾಗಿರುವ ‘ಕುಟುಂಬ ಶ್ರೀ’ ಯೋಜನೆಗೆ ಇತಿಶ್ರೀ ಹಾಡಲು ಬಯಸಿರುವ ಕೇರಳ ಸರ್ಕಾರದ ವಿರುದ್ಧ ಹೋರಾಟ ತೀವ್ರಗೊಳಿಸಲು ನಿರ್ಧರಿಸಲಾಗಿದೆ.

ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್) ಸರಕಾರ ಆರಂಭಿಸಿ ದಕ್ಷತೆಯಿಂದ ನಡೆಸುತ್ತಿದ್ದ ‘ಇಎಂಎಸ್ ವಸತಿ ಯೋಜನೆ’ಯನ್ನು ಸ್ಥಗಿತಗೊಳಿಸಲು ಸರ್ಕಾರ ಹುನ್ನಾರ ನಡೆಸುತ್ತಿದೆ. 59,000 ಮನೆಗಳ ನಿರ್ಮಾಣ ಅರ್ಧದಲ್ಲೇ ನಿಂತಿದೆ. ಈ ಯೋಜನೆಯ ಫಲಾನುಭವಿಗಳೆಲ್ಲರೂ ಹೋರಾಟದಲ್ಲಿ ತೊಡಗಿಕೊಳ್ಳಲಿದ್ದಾರೆ. ಬಡವರ ಮೇಲೆ ಹಗೆ ಕಾರುತ್ತಿರುವ ಸರ್ಕಾರ ತಯಾರಿಸಿರುವ ಬಡತನ ರೇಖೆಯ ಕೆಳಗಿರುವ ಫಲಾನುಭವಿಗಳ ಪಟ್ಟಿಯಲ್ಲಿ ಆಗಿರುವ ದೋಷಗಳನ್ನು ಸರಿಪಡಿಸುವಂತೆ ಒತ್ತಾಯಿಸಲಾಗುತ್ತಿದೆ.

ಹಿಂದೆ ಅಧಿಕಾರದಲ್ಲಿದ್ದ ಎಡರಂಗ ಸರ್ಕಾರವು ಅನೇಕ ಸಣ್ಣ ಸಣ್ಣ ಯೋಜನೆಗಳನ್ನು ರೂಪಿಸುವ ಮತ್ತು ಕಾರ್ಯಗತಗೊಳಿಸುವ ಅಧಿಕಾರವನ್ನು ಸ್ಥಳೀಯ ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ನೀಡಿ ಜನರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಗೌರವ ಕೊಡುವ ನಿಟ್ಟಿನಲ್ಲಿ ರಾಜ್ಯ ಸರಕಾರದ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿತ್ತು. ಈ ಪ್ರಕ್ರಿಯೆಯನ್ನು ಬುಡಮೇಲು ಮಾಡಲು ಯುಡಿಎಫ್ ಸರ್ಕಾರವು ಹಲವಾರು ಕಾನೂನುಗಳನ್ನು ನಿರೂಪಿಸುತ್ತಿದೆ. ಸರ್ಕಾರದ ಈ ಧೋರಣೆಯನ್ನು ಸಿಪಿಐ(ಎಂ) ಖಂಡಿಸಿದೆ.



ಡಿಸೆಂಬರ್ 6 ರಂದು ‘ಕೋಮು ಸಾಮರಸ್ಯ ದಿನ’ ಆಚರಿಸಲಾಗಿದೆ. ಡಿಸೆಂಬರ್ 8 ರಿಂದ 14, 2014 ರ ವರೆಗೆ ಅಖಿಲ ಭಾರತ ಪ್ರಚಾರಾಂದೋಲನ ನಡೆಯಿತು. ಪಕ್ಷವು ಸಾಮಾಜಿಕ ಕ್ಷೇತ್ರದಲ್ಲಿ ನರಳುತ್ತಿರುವವರ ನೋವು ಉಪಶಮನ ನಿಗಾ, ಸ್ವಚ್ಛ ಕೇರಳ ಮತ್ತು ತರಕಾರಿ ಉತ್ಪಾದನೆಯಲ್ಲಿ ಸ್ವಾವಲಂಬನೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಲಿದೆ.

ಬಾರ್ ಪರವಾನಗಿ ನವೀಕರಣ : ಲಂಚದ ಆಪಾದನೆಗಳಿಗೆ ತತ್ತರಿಸಿದ ಯುಡಿಎಫ್ ಸರ್ಕಾರ

ಪಂಚತಾರ ಹೋಟೆಲ್‌ಗಳನ್ನು ಹೊರತುಪಡಿಸಿ ಉಳಿದ ಬಾರ್‌ಗಳನ್ನು ಮುಚ್ಚುವ ಸರ್ಕಾರದ ನಿರ್ಧಾರವನ್ನು ಕೇರಳ ಹೈಕೋರ್ಟ್ ತಡೆಹಿಡಿದ ನಂತರ ಬಾರ್ ಮಾಲೀಕರು ತಮ್ಮ ಬಾರ್‌ಗಳ ಪರವಾನಗಿ ನವೀಕರಣಕ್ಕಾಗಿ ಹಲವು ಮಂತ್ರಿಗಳಿಗೆ ಕೋಟಿಗಟ್ಟಲೆ ಲಂಚ ಕೊಟ್ಟಿದ್ದನ್ನು ಅವರು ಮಾಧ್ಯಮಗಳ ಮೂಲಕ ಜಾಹೀರು ಮಾಡಿರುವುದು ಸರ್ಕಾರದೊಳಗೆ ಹಿಂದೆಂದೂ ಕಾಣದ ತಿಕ್ಕಾಟವುಂಟು ಮಾಡಿದೆ.

ಬಾರ್ ಮಾಲೀಕರ ಸಂಘದ ಅಧ್ಯಕ್ಷ ಡಾ. ಬಿಜು ರಮೇಶ್ ತಾವು ಹಣಕಾಸು ಮಂತ್ರಿ ಕೆ.ಎಂ. ಮಣಿಯವರಿಗೆ ಅವರ ನಿವಾಸದಲ್ಲಿ ಒಂದು ಕೋಟಿ ರೂಪಾಯಿ ಕೊಟ್ಟಿರುವುದನ್ನು ಆಧಾರ ಸಮೇತ ಸಾಬೀತು ಮಾಡುವುದಾಗಿ ಹೇಳಿದ್ದಾರೆ. “ಇದೆಲ್ಲವೂ ಮುಖ್ಯಮಂತ್ರಿ ಊಮನ್ ಚಾಂಡಿಯವರಿಗೆ ತಿಳಿದಿದೆ. ಆದರೂ, ಅವರಿಗೆ ವರದಿ ಮಾಡಿದ್ದೇನೆ. ಅಲ್ಲದೆ, ನಾನು ಮಾಡಿರುವ ಆಪಾದನೆಯನ್ನು ಸಾಬೀತು ಪಡಿಸಲು ವಿಫಲನಾದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ.” ಎಂದಿದ್ದಾರೆ.

ಈ ಮಧ್ಯೆ ಸರ್ಕಾರದ ಮುಖ್ಯ ಸಚೇತಕರಾದ ಪಿ.ಸಿ. ಜಾರ್ಜ್ ಅವರು 418 ಬಾರ್‌ಗಳಿಂದ ವಸೂಲಾಗಿರುವ 15 ಕೋಟಿ ರೂ. ಎಲ್ಲಿ ಹೋಗಿದೆ? ಎಂದು ಕೇಳಿದ್ದಾರೆ. ಈ ಎರಡೂ ಹೇಳಿಕೆಗಳು ಯುಡಿಎಫ್ ಸರ್ಕಾರವನ್ನು ಬಿಕ್ಕಟ್ಟಿಗೆ ಸಿಲುಕಿಸಿವೆ. ಕಳೆದ ಮಾರ್ಚಿ ತಿಂಗಳಲ್ಲಿ ದೇಶಾಭಿಮಾನಿ ಪತ್ರಿಕೆಯೂ ಸೇರಿದಂತೆ ಕೆಲವು ಪತ್ರಿಕೆಗಳಲ್ಲಿ ಬಾರ್‌ಗಳ ಪರವಾನಗಿ ನವೀಕರಣ ಸಂಬಂಧವಾಗಿ ಕೆಲವು ಮಂತ್ರಿಗಳು 25 ಕೋಟಿ ರೂ. ಲಂಚ ಪಡೆದಿದ್ದಾರೆಂದು ವರದಿ ಮಾಡಿದ್ದವು.

ಲಂಚ ಪಡೆದ ಪ್ರಕರಣ ಬಯಲಾಗುತ್ತಿದ್ದಂತೆಯೇ ಹಣಕಾಸು ಮಂತ್ರಿ ಕೆ.ಎಂ. ಮಣಿಯವರು ಇದೊಂದು ಪಿತೂರಿ ಎನಿಸುತ್ತದೆ. “ನನ್ನನ್ನು ಬೆದರಿಸಲು ಪ್ರಯತ್ನಿಸಿದರೆ ನಾನು ಅನೇಕ ಸಂಗತಿಗಳನ್ನು ಬಯಲು ಮಾಡಬೇಕಾಗುತ್ತದೆ.”ಎಂದರು. ಪಿತೂರಿಯ ಹಿಂದೆ ಮುಖ್ಯಮಂತ್ರಿ ಇದ್ದಾರೆಯೇ? ಎಂದು ಕೇಳಿದಾಗ “ತನಿಖೆ ಮಾಡಬೇಕಾಗುತ್ತದೆ.” ಎಂದರು. ಕೇರಳ ಕಾಂಗ್ರೆಸ್(ಮಣಿ) ಸಭೆಯು ಈ ಆಪಾದನೆಗಳ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದೆ.

ಪಿನರಾಯಿ ಪ್ರತಿಕ್ರಿಯೆ :

15 ಕೋಟಿ ರೂ. ಲಂಚ ಪ್ರಕರಣದಲ್ಲಿ ಯಾವ ಆಶ್ಚರ್ಯವೂ ಇಲ್ಲ. ಕೆಲವು ಮಂತ್ರಿಗಳು ಬಾರ್‌ಮಾಲೀಕರೂ ಆಗಿದ್ದಾರೆ. ಬಾರ್‌ಗಳ ಪರವಾನಗಿ ನವೀಕರಣ ಪ್ರಕ್ರಿಯೆ ಮತ್ತು ಲಂಚದ ಚಾಳಿ ಇರುವ ಸಂಬಂಧ ಒಂದು ಪೂರ್ಣ ಪ್ರಮಾಣದ ತನಿಖೆ ಅಗತ್ಯವಿದೆ. ಮಣಿಯವರು ಲಂಚ ಪಡೆದಿರುವುದಷ್ಟೇ ಅಲ್ಲ ಮುಖ್ಯಮಂತ್ರಿ ಮತ್ತು ಅಬ್ಕಾರಿ ಮಂತ್ರಿ ಬಾಬು ಸಹ ತನಿಖೆಗೊಳಪಡಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ■

ತ್ರಿಪುರ: ಹಲವು ರ್‍ಯಾಲಿಗಳು – ಬಹುಸಂಸ್ಕೃತಿ ರಕ್ಷಿಸುವ ಪಣ

ಡಿಸೆಂಬರ್ 6 ರಂದು ಈಶಾನ್ಯ ಭಾರತದ ಗುಡ್ಡಗಾಡು ರಾಜ್ಯವಾದ ತ್ರಿಪುರದಲ್ಲಿಯೂ ಕೋಮುವಾದದ ವಿರುದ್ಧ ರ್‍ಯಾಲಿಗಳು ನಡೆದಿವೆ. ಬಾಬರಿ ಮಸೀದಿ ಧ್ವಂಸ ಹಾಗೂ ಕೋಮುವಾದದ ವಿರುದ್ಧ ತ್ರಿಪುರದ ಎಲ್ಲ ಉಪ ವಿಭಾಗಗಳ ಮಟ್ಟದಲ್ಲಿ ಸಹಸ್ರಾರು ಜನರು ಪಾಲ್ಗೊಂಡ ರ್‍ಯಾಲಿಗಳು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ನಡೆದಿದೆ. ರಾಜಧಾನಿ ಅಗರ್ತಲದಲ್ಲಿ ರವೀಂದ್ರ ಭವನದಿಂದ ಶಕುಂತಲ ರಸ್ತೆಯವರೆಗೆ ಬೃಹತ್ ಮೆರವಣಿಗೆ ನಡೆದಿದೆ. ದೇಶದ ಬಹುಸಂಸ್ಕೃತಿ, ಸೌಹಾರ್ದ ಬದುಕನ್ನು ರಕ್ಷಿಸುವ ಪಣತೊಡುವುದರೊಂದಿಗೆ ಈ ರ್‍ಯಾಲಿಗಳು ನಡೆದಿವೆ.

ಬಾಬರಿ ಮಸೀದಿ ಧ್ವಂಸದ ಕಹಿ ನೆನಪು: ಕೊಲ್ಕೊತ್ತಾದಲ್ಲಿ ಕೋಮುವಾದದ ವಿರುದ್ಧ 17 ಎಡ ಪಕ್ಷಗಳ ಬೃಹತ್ ರ್‍ಯಾಲಿ

ಡಿಸೆಂಬರ್ 6, 2014 ರಂದು ಹತ್ತಾರು ಸಾವಿರ ಜನರು ಕೊಲ್ಕೋತ್ತಾದ ಬೀದಿಗಳಲ್ಲಿ ನೆರೆದರು. ಕೋಮುವಾದಿ ಶಕ್ತಿಗಳಿಗೆ ಧಿಕ್ಕಾರ ಹೇಳಿದರು. ಬಂಗಾಳದ ಕೋಮುಸೌಹಾರ್ದ ಪರಂಪರೆಯನ್ನು ರಕ್ಷಿಸುತ್ತೇವೆ ಎಂದು ಘೋಷಿಸಿದರು. ಡಿಸೆಂಬರ್ 6 ಎಂಬುದು ಎಂದಿನಂತೆ ಒಂದು ಮಾಮೂಲಿ ದಿನವಲ್ಲ. 22 ವರ್ಷಗಳ ಹಿಂದೆ ಕೋಮುವಾದಿ ಶಕ್ತಿಗಳು ಐತಿಹಾಸಿಕ ಬಾಬರಿ ಮಸೀದಿಯನ್ನು ಕೆಡವಿ ಹಾಕಿ ಕೇಕೆ ಹಾಕಿದ ದುರ್ದಿನ. ಡಾ. ಬಾಬಾ ಸಾಹೇಬ್ ಅಂಬೇಡ್ಕರರು ನಮ್ಮನ್ನು ಅಗಲಿದ ವಿಷಾಧದ ದಿನ. ಕೋಮು ಸೌಹಾರ್ದತೆಗೆ ಹೆಸರಾದ ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಕೋಮುವಾದಿ ಶಕ್ತಿಗಳು ಮತ್ತೆ ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಿರುವ ಪರಿಸ್ಥಿತಿಯಲ್ಲಿ ಕೋಲ್ಕೋತ್ತಾದ ಈ ರ್‍ಯಾಲಿಗೆ ವಿಶೇಷ ಮಹತ್ವವಿದೆ. ಇತ್ತೀಚೆಗೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಬಹಿರಂಗ ಸಭೆ ನಡೆಸಿ ಕೋಮುವಾದಿ ಧೃವೀಕರಣವನ್ನು ತೀವ್ರಗೊಳಿಸುವ ಮಾತನ್ನು ಆಡಿದ್ದನ್ನು ದೇಶವೇ ಗಮನಿಸಿದೆ. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಅಲ್ಪಸಂಖ್ಯಾತ ಮೂಲಭೂತವಾದಿಗಳು ಸಹ ತಮಗೆ ಬೇಕಾದಂತೆ ಸಮಾಜವನ್ನು ಧೃವೀಕರಣಗೊಳಿಸಲು ಪ್ರಯತ್ನಿಸುತ್ತಿದ್ದಾರೆ.

ಅಂದು ಕೋಲ್ಕೊತ್ತಾದ ಮಹಜತಿ ಸದನದ ಬಳಿಯಿಂದ ರವೀಂದ್ರ ಸದನದವರೆಗೆ ಬೃಹತ್ ಮೆರವಣಿಗೆ ನಡೆಯಿತು. ಬೀಮನ್ ಬಸು ಸೇರಿದಂತೆ ಹಲವು ಎಡರಂಗ ಮುಖಂಡರು ಹಾಗೂ ಸಮಾಜದ ವಿವಿಧ ವಲಯಗಳ ಗಣ್ಯರು ಮೆರವಣಿಗೆಯ ಮುಂಚೂಣಿಯಲಿದ್ದರು. ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು,



ಚಿಂತಕರು ಗಣನೀಯ ಸಂಖ್ಯೆಯಲ್ಲಿದ್ದರು.

ಜನರು ‘ಮೋದಿ–ಅಮಿತ್ ಷಾಗಳ ಬಗೆಗೆ ಎಚ್ಚರ ಎಚ್ಚರ – ಬಂಗಾಳ ವಿಭಜನಾಕಾರಿ ಶಕ್ತಿಗಳನ್ನು ಸಹಿಸುವುದಿಲ್ಲ’ ಮುಂತಾಗಿ ಘೋಷಣೆ ಕೂಗುತ್ತಿದ್ದುದು ಸಾರ್ವಜನಿಕರ ಗಮನ ಸೆಳೆಯುತ್ತಿತ್ತು. ಕೋಮುವಾದದ ವಿರುದ್ದ ಹೋರಾಟಗಳನ್ನು ತೀವ್ರಗೊಳಿಸಲು ಮತ್ತು ಜಿಲ್ಲಾ ಮಟ್ಟಗಳಲ್ಲಿ ಮತ್ತು ತಳಹಂತದಲ್ಲಿ ಕೋಮುವಾದದ ವಿರುದ್ದ ಸಮರವನ್ನು ಹರಿತಗೊಳಿಸಲು ಹಾಗೂ ಜನರ ಸಮಸ್ಯೆಗಳ ವಿರುದ್ದದ ಹೋರಾಟವನ್ನು ತೀವ್ರಗೊಳಿಸಲು ಎಡರಂಗ ನಿರ್ಧರಿಸಿದೆ.

ಜ್ಯಾತ್ಯತೀತ ಭಾವನೆಗಳ ರಕ್ಷಣೆಗಾಗಿ ಮತ್ತು ಕೋಮು ಧೃವೀಕರಣದ ವಿರುದ್ಧ ಹೋರಾಟದಲ್ಲಿ ಪಶ್ಚಿಮ ಬಂಗಾಳದ 17 ಎಡಪಕ್ಷಗಳು ಮುಖ್ಯವಾಗಿ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ, ಎಸ್‌ಯುಸಿಐ, ಸಿಪಿಐ(ಎಂಎಲ್)ನ ಬೇರೆ ಬೇರೆ ಪಂಗಡಗಳೂ ಸೇರಿದ ಎಡಪಕ್ಷಗಳು ನವೆಂಬರ್ 13, 2014 ರಂದು ಒಂದು ಸಮಾವೇಶ ನಡೆಸಿ, ಜನರನ್ನು ವಿಭಜಿಸಿ ಧೃವೀಕರಣಗೊಳಿಸುತ್ತಿರುವ ಕೋಮುವಾದದ ವಿರುದ್ಧ, ಸಾರ್ವಜನಿಕ ಸಭೆ, ರ್‍ಯಾಲಿಗಳು ಸೇರಿ ರಾಜ್ಯಾದ್ಯಂತ ಪ್ರಚಾರಾಂದೋಲನ ಮತ್ತು ಡಿಸೆಂಬರ್ 6 ರಂದು ಕೊಲ್ಕತಾದಲ್ಲಿ ಒಂದು ಬೃಹತ್ ರ್‍ಯಾಲಿ ನಡೆಸಲು ತೀರ್ಮಾನಿಸಿದ್ದವು.

ಸುಧಾರಣೆಗಳ ಹೆಸರಿನಲ್ಲಿ ನವ–ಉದಾರವಾದಿ ಆರ್ಥಿಕ ನೀತಿಗಳನ್ನು ಬಹಳ ಹುರುಪಿನಿಂದ ಜಾರಿಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಪರಿಣಾಮವಾಗಿ ಜನ ಜೀವನ ಇನ್ನಷ್ಟು ಸಂಕಷ್ಟಕ್ಕೊಳಗಾಗುತ್ತಿದೆ. ಈ ಪರಿಸ್ಥಿತಿಯಲ್ಲಿ, ತಮ್ಮದೇ ಆದ ಸರಕಾರ ಅಧಿಕಾರ ಹಿಡಿದಿದೆ ಎಂದು ಬೀಗುತ್ತಿರುವ ಕೋಮು ಶಕ್ತಿಗಳು ತಮ್ಮ ಮಾಮೂಲಿ ಕಾರ್ಯಾಚರಣೆಗಿಳಿದಿವೆ. ಆರ್ಥಿಕ ನೀತಿಗಳ ದುಷ್ಪರಿಣಾಮಗಳ ವಿರುದ್ಧ ಜನರು ಒಗ್ಗಟ್ಟಾಗಿ ಸರ್ಕಾರದ ವಿರುದ್ಧ ತಿರುಗಿ ಬೀಳದಂತೆ ತಡೆಯಲು ಜನರ ಐಕ್ಯತೆ ಮುರಿಯುವುದೊಂದೇ ಅವರಿಗಿರುವ ಗುರಿ.

ಕೋಮು ಸೌಹಾರ್ದತೆಗೆ ಹೆಸರಾಗಿದ್ದ ಪಶ್ಚಿಮ ಬಂಗಾಳದಲ್ಲಿ ಮತೀಯ ಶಕ್ತಿಗಳು ತಮ್ಮ ಹೆಡೆ ಎತ್ತಿವೆ. ಬರ್ದ್ವಾನ್‌ನಲ್ಲಿ ಆದ ಬಾಂಬ್ ಸಿಡಿತವು ತೀವ್ರವಾದಿಗಳ ಅಪಾಯಕಾರಿ ಕುತಂತ್ರಗಳನ್ನು ತೋರಿಸುತ್ತದೆ. ಆದರೆ, ಅಲ್ಪಸಂಖ್ಯಾತರ ಮೇಲೆ ವಿಷ, ಕಾರಲು ಬಿಜೆಪಿಯು ಈ ಪ್ರಕರಣವನ್ನು ಬಳಸಿಕೊಳ್ಳುತ್ತಿದೆ.

1940ರ ದಶಕದಲ್ಲಿ ಜರುಗಿದ ಚಾರಿತ್ರಿಕ ತೇಭಾಗ ಚಳುವಳಿಯಲ್ಲಿ ಹಿಂದೂ–ಮುಸ್ಲಿಂ ರೈತರು ಒಗ್ಗಟ್ಟಾಗಿ ತಮ್ಮ ನ್ಯಾಯಯುತ ಪಾಲಿಗಾಗಿ ಹೋರಾಡುವ ಮೂಲಕ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಿದ್ದರು. ಇಂದಿನ ಪರಿಸ್ಥಿತಿಯಲ್ಲಿ, ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಎಡ ಶಕ್ತಿಗಳು ಒಗ್ಗಟ್ಟಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ಮಾಡಬೇಕಾಗಿರುವುದು ಅನಿವಾರ್ಯ ಎಂದು ಈ ಬಗ್ಗೆ ಬಿಮನ್ ಬಸು ಪ್ರತಿಕ್ರಿಯಿಸಿದ್ದಾರೆ.

ಉದ್ರೇಕಕಾರಿ ಕೋಮು ಪ್ರಚಾರಕ್ಕೆ ತಡೆ, ಅಂತಹ ಚಟುವಟಿಕೆಯಲ್ಲಿ ತೊಡಗಿದವರ ವಿರುದ್ಧ ಕಟ್ಟು ನಿಟ್ಟಿನ ಕ್ರಮ, ಅಲ್ಪ ಸಂಖ್ಯಾತರ ವಿರುದ್ಧ ಅವಮಾನಕರ ಚಟುವಟಿಕೆ ಅಥವಾ ಅವಹೇಳನ ಮಾಡುವವರ ವಿರುದ್ಧ ಕ್ರಮ ಮತ್ತು ಯಾವುದೇ ಧಾರ್ಮಿಕ ಆಚರಣೆ ಹಾಗು ಪದ್ಧತಿಗಳಿಂದ ಸರ್ಕಾರ ದೂರ ಕಾಯ್ದು ಕೊಳ್ಳಬೇಕೆಂದು ಸಮಾವೇಶವು ಒತ್ತಾಯಿಸಿತ್ತು. ಈ ಪ್ರಶ್ನೆಗಳ ಮೇಲೆ ಪ್ರಚಾರ ಪ್ರಕ್ಷೋಭೆ ಮುಂದುವರಿಯಲಿದೆ. ■

ಮೋದಿ ಆಡಳಿತದ ಆರು ತಿಂಗಳು – ಭಾರಿ ಬಂಡವಾಳಗಾರರನ್ನು ಓಲೈಸುವ ಕಾಂಗ್ರೆಸ್ ನೀತಿಗಳ ಮುಂದುವರಿಕೆ – ಸ್ಪಷ್ಟವಾಗುತ್ತಿರುವ ಆರ್‌ಎಸ್‌ಎಸ್ ಧೋರಣೆಯೊಂದಿಗೆ ಜೋಡಿಸಿಕೊಳ್ಳುವ ಸಂಕಲ್ಪ




ಪ್ರಕಾಶ್ ಕಾರಟ್ ಕನ್ನಡಕ್ಕೆ : ಟಿ. ಸುರೇಂದ್ರ ರಾವ್– ಕೆ.ಎಂ. ನಾಗರಾಜ್.

ಮೋದಿ ಸರ್ಕಾರ ಆರು ತಿಂಗಳ ಅವಧಿ ಪೂರೈಸಿದ ಸಂದರ್ಭದಲ್ಲಿ ಅದರ ಆಡಳಿತ ವೈಖರಿಯನ್ನು ಮೂದಲಿಸಿರುವ ಕಾಂಗ್ರೆಸ್ ಪಕ್ಷವು “ಉಲ್ಟಾ ಹೊಡೆದ ಸರ್ಕಾರ” ಎಂಬ ಕಿರು ಹೊತ್ತಿಗೆ ಪ್ರಕಟಿಸಿದೆ. ಹಿಂದೆ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರದ ಅನೇಕ ನೀತಿ/ವಿಷಯಗಳಿಗೆ ಸಂಬಂಧಿಸಿ ಆಗ ವಿರೋಧ ಪಕ್ಷವಾಗಿದ್ದ ಬಿಜೆಪಿಯು ಖಂಡ ತುಂಡವಾಗಿ ವಿರೋಧಿಸಿತ್ತು. ತಾನೇ ವಿರೋಧಿಸಿದ ನೀತಿ/ವಿಷಯಗಳನ್ನು ಈಗ ಯಾವ ಮುಜುಗರವೂ ಇಲ್ಲದೆ ಅನುಸರಿಸುತ್ತಿದೆ.

ಕಾಂಗ್ರೆಸ್ ಹೇಳುತ್ತಿರುವುದರಲ್ಲಿ ಸತ್ಯಾಂಶವಿದೆ. ಬಿಜೆಪಿಯೂ ನಮ್ಮ ಹಾಗೆ ಇದೆ ಎನ್ನುತ್ತಿದೆ ಕಾಂಗ್ರೆಸ್. ಮೋದಿ ಸರ್ಕಾರದ ಆರು ತಿಂಗಳ ಆಡಳಿತದ ದಾಖಲೆ ನೋಡಿದರೆ ಅದು ಯುಪಿಎ ಸರ್ಕಾರದ ನೀತಿಗಳನ್ನೇ ಅನುಸರಿಸುತ್ತಿದೆ. ವಿಮಾ ಕ್ಷೇತ್ರದಲ್ಲಿ ಶೇ. 49 ವಿದೇಶಿ ನೇರ ಬಂಡವಾಳ ಹೂಡಿಕೆಗೆ ಮುಂದಾಗುತ್ತಿದೆ. ಕಾಂಗ್ರೆಸ್ ಕೂಡ ಅದನ್ನೇ ಮಾಡಿತ್ತು. ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಬೃಹತ್ ಪ್ರಮಾಣದ ಬಂಡವಾಳದ ಹಿಂತೆಗೆತಕ್ಕೆ ಬಿಜೆಪಿ ಸರ್ಕಾರ ಮುಂದಾಗಿದೆ. ಕಾಂಗ್ರೆಸ್ ಕೂಡ ಅದನ್ನೇ ಮಾಡಲು ಹೊರಟಿತ್ತು. ಯುಪಿಎ ಸರ್ಕಾರ ಅಲ್ಪ ಪ್ರಮಾಣದಲ್ಲಿ ಡೀಸೆಲ್ ಬೆಲೆಗಳನ್ನು ನಿಯಂತ್ರಿಸಿತ್ತು. ಬಿಜೆಪಿ ಸರ್ಕಾರ ಡೀಸೆಲ್ ಬೆಲೆಗಳ ನಿಯಂತ್ರಣವನ್ನು ಪೂರ್ಣಪ್ರಮಾಣದಲ್ಲಿ ಕೈ ಬಿಟ್ಟಿದೆ. ರೈಲು ಪ್ರಯಾಣ ದರಗಳನ್ನು ಹೆಚ್ಚಿಸಲು ಯುಪಿಎ ಸರ್ಕಾರ ಪ್ರಯತ್ನಿಸಿತ್ತು. ಬಿಜೆಪಿ ಸರ್ಕಾರ ಅದನ್ನು ಜಾರಿ ಮಾಡಿದೆ. ಯುಪಿಎ ಸರ್ಕಾರ ಕಾರ್ಯಗತಗೊಳಿಸಿದ್ದ ಆಧಾರ್ ಯೋಜನೆ ಮತ್ತು ನಗದು ವರ್ಗಾವಣೆ ಯೋಜನೆಗಳನ್ನು ಬಿಜೆಪಿ ವಿರೋಧಿಸಿತ್ತು. ಅದನ್ನು ಈಗ ಬಿಜೆಪಿ ಸರ್ಕಾರ ಒಪ್ಪಿಕೊಂಡಿದೆ. ಈ ವಿದ್ಯಮಾನದಲ್ಲಿ ಎದ್ದುಕಾಣುವ ಅಂಶವೆಂದರೆ ಅದು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಒಂದೇ ವರ್ಗದ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತವೆ ಎಂಬುದು.

ಭಾರಿ ಬಂಡವಾಳಗಾರರನ್ನು ಓಲೈಸುವ ವಿಷಯದಲ್ಲೂ ಈ ಎರಡೂ ಪಕ್ಷಗಳು ಸಮನಾಗಿವೆ. ಕಾಂಗ್ರೆಸ್ ಪಕ್ಷಕ್ಕೆ ಮುಖೇಶ್ ಅಂಬಾನಿ ಆಪ್ತರಾಗಿದ್ದರು. ಅವರ ಹಿತರಕ್ಷಣೆ ಮಾಡಲು ಕಾಂಗ್ರೆಸ್ ಪಕ್ಷವು ಪೆಟ್ರೋಲಿಯಂ ಮಂತ್ರಿಯನ್ನು ಎರಡು ಬಾರಿ ಬದಲಾಯಿಸಿತು. ಗೌತಮ್ ಅದಾನಿ ನರೇಂದ್ರ ಮೋದಿಗೆ ಪರಮಾಪ್ತರು. ಆರು ತಿಂಗಳಲ್ಲಿ ಅದಾನಿಯ ಸಂಪತ್ತು ಯದ್ವಾ ತದ್ವಾ ಏರಿದೆ. ಅದಾನಿ ಒಡೆತನದ ಕಂಪೆನಿಯೊಂದು ಇತ್ತೀಚೆಗೆ ಎಸ್‌ಬಿಐ ನಿಂದ 6,200 ಕೋಟಿ ರೂಪಾಯಿಗಳ ಸಾಲ ಪಡೆದಿದೆ. ಇದು ಕಂಪೆನಿಯೊಂದು ಈ ವರೆಗೆ ಪಡೆದ ಅತ್ಯಂತ ದೊಡ್ಡ ಮೊತ್ತದ ಸಾಲ. ಚಮಚಾ ಬಂಡವಾಳಶಾಹಿ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.

ಕಾಂಗ್ರೆಸ್ ಪಕ್ಷಕ್ಕೆ ಲೋಕಸಭೆಯಲ್ಲಿ ತನ್ನದೇ ಆದ ಬಹುಮತ ಇಲ್ಲದಿದ್ದುದರಿಂದ ಯುಪಿಎ ಸರ್ಕಾರ ಬೇರೆ ಪಕ್ಷಗಳ ಬಾಹ್ಯ ಬೆಂಬಲವನ್ನು ಅವಲಂಬಿಸಿತ್ತು. ಆದ್ದರಿಂದ ಆ ಪಕ್ಷಕ್ಕೆ ಕೆಲವು ಮಿತಿಗಳಿದ್ದವು. ಹಾಗಾಗಿ ಕಾಂಗ್ರೆಸ್ ಪಕ್ಷವು ತಾನು ಜಾರಿ ಮಾಡಬೇಕೆಂದಿದ್ದ ನೀತಿಗಳನ್ನು ಕಾರ್ಯಗತಗೊಳಿಸಲಾಗಿರಲಿಲ್ಲ. ಬಿಜೆಪಿಗೆ ಲೋಕ ಸಭೆಯಲ್ಲಿ ತನ್ನದೇ ಆದ ಬಹುಮತ ಇರುವುದರಿಂದ ಅದೇ ನೀತಿಗಳನ್ನು ಹುರುಪಿನಿಂದ ಜಾರಿ ಮಾಡುವ ಸ್ಥಿತಿಯಲ್ಲಿದೆ. ಹಾಗಾಗಿ, ಮೋದಿ ಸರ್ಕಾರದ ಅನುಗ್ರಹದಲ್ಲಿ ಒಂದು ಬಲ ಪಂಥೀಯ ದಾಳಿ ನಡೆಸಲು ಸಜ್ಜಾಗಿರುವುದನ್ನು ನೋಡಬಹುದಾಗಿದೆ. ಮೊಟ್ಟ ಮೊದಲ ಬಾರಿಗೆ ರೈಲ್ವೆಯಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ, ಖಾಸಗಿ ವಾಣಿಜ್ಯ ಹಿತಾಸಕ್ತಿಗಳಿಗೆ ಅನುವಾಗಲು ಕಲ್ಲಿದ್ದಲು ಗಣಿಗಾರಿಕೆಗೆ ಒಂದು ಸುಗ್ರೀವಾಜ್ಞೆಯ ಜಾರಿ ಮತ್ತು ಭೂಮಿ ವಶಪಡಿಸಿಕೊಳ್ಳುವ ಕಾಯ್ದೆಯ ಸಡಿಲಿಕೆ ಮುಂತಾದ ಕ್ರಮಗಳು ಉದಾಹರಣೆಯಾಗಿವೆ. ಅದೇ ಸಮಯದಲ್ಲಿ, ಕಾರ್ಪೊರೇಟ್‌ಗಳ ಲಾಭ ಹೆಚ್ಚಿಸಲು, ಕಾರ್ಮಿಕರ ಹಿತ ಬಲಿಕೊಟ್ಟು, ಅವರಿಗೆ ಕೆಲಮಟ್ಟಿನ ರಕ್ಷಣೆ ಒದಗಿಸಲು ಲಭ್ಯವಿದ್ದ ಕಾರ್ಮಿಕ ಕಾನೂನುಗಳನ್ನು ಬದಲಾಯಿಸುವ ಪ್ರಕ್ರಿಯೆ ನಡೆಯುತ್ತಿದೆ. ಬಡವರನ್ನು ಹಿಂಡಿ ಹಿಪ್ಪೆ ಮಾಡುವ ಮೂಲಕ 'ಒಳ್ಳೆಯ ದಿನಗಳು' ಕಾರ್ಪೊರೇಟ್‌ಗಳಿಗೆ ಬರಲಿವೆ. ಹಕ್ಕು ಪ್ರತಿಪಾದಿಸುವ ಗುಣವುಳ್ಳ ಉದ್ಯೋಗ ಖಾತ್ರಿ ಯೋಜನೆಯನ್ನು ವಿರೂಪಗೊಳಿಸಲಾಗುತ್ತಿದೆ.


ಅಮಿತ್ ಶಾ

ಆರು ತಿಂಗಳ ಅವಧಿಯಲ್ಲಿ ಪ್ರಧಾನ ಮಂತ್ರಿ ಮೋದಿಯವರು ದಾಖಲೆ ಸಂಖ್ಯೆಯಲ್ಲಿ ಬೇರೆ ಬೇರೆ ದೇಶಗಳಿಗೆ ಭೇಟಿ ನೀಡಿದ್ದಾರೆ. ಈ ಪೈಕಿ, ಜಪಾನ್ ಮತ್ತು ಆಸ್ಟ್ರೇಲಿಯಾ ದೇಶಗಳ ಭೇಟಿ, ಮೋದಿಯವರ ನಿಲುವಿನಿಂದ ನೋಡಿದರೆ, ಬಹಳ ಮಹತ್ವ ಪಡೆಯುತ್ತವೆ. ಈ ಎರಡೂ ದೇಶಗಳಲ್ಲಿ ಮೋದಿಯವರ ರಾಜಕೀಯ ನಿಲುವಿನೊಂದಿಗೆ ಒಲವುಳ್ಳ ಬಲಪಂಥೀಯ ಪ್ರಧಾನ ಮಂತ್ರಿಗಳಿರುವುದು ಕಾಕತಾಳೀಯವೇನಲ್ಲ.

ಜಪಾನ್ ಭೇಟಿಯ ಸಂದರ್ಭದಲ್ಲಿ ಮೋದಿ ಮತ್ತು ಶಿಂಜೊ ಅಬೆ(ಜಪಾನ್) ರಕ್ಷಣೆ ಮತ್ತು ಮಿಲಿಟರಿ ಸಂಬಂಧಗಳನ್ನು ಬಲಪಡಿಸಲು ಒಪ್ಪಂದವಾಗಿದೆ. ಅದರಂತೆ, ಭಾರತ-ಅಮೆರಿಕ ನೌಕಾಭ್ಯಾಸಗಳು (ಮಲಬಾರಿನಲ್ಲಿ ನಡೆದಂತೆ) ಸೇರಿವೆ ಮತ್ತು ಎರಡೂ ದೇಶಗಳ ವಿದೇಶಾಂಗ ಮತ್ತು ರಕ್ಷಣಾ ಮಂತ್ರಿಗಳ(2+2 ಮಾದರಿಯಲ್ಲಿ) ನಡೆಸುವ ವಾರ್ಷಿಕ ಸಭೆಯನ್ನು ಮೇಲ್ದರ್ಜೆಗೇರಿಸಲು ಒಪ್ಪಿದ್ದಾರೆ.

ಮೋದಿ ಮತ್ತು ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ ಟೋನಿ ಅಬ್ಬಟ್ ರಕ್ಷಣಾ ಸಹಕಾರ ಚೌಕಟ್ಟು ಒಪ್ಪಂದವೊಂದಕ್ಕೆ ಆಸ್ಟ್ರೇಲಿಯಾದಲ್ಲಿ ಸಹಿ ಹಾಕಿದರು. ಈ ಒಪ್ಪಂದದ ಮೂಲಕ ಎರಡೂ ದೇಶಗಳು ವಾರ್ಷಿಕ ಉತ್ತುಂಗಸಭೆಗಳನ್ನು, ರಕ್ಷಣಾ ಸಚಿವರ ನಿಯತಕಾಲಿಕ ಸಭೆಗಳನ್ನು ಹಾಗೂ ಕಾಲಕಾಲಕ್ಕೆ ಕಡಲ ಕವಾಯತುಗಳನ್ನು ನಡೆಸಬೇಕು. ಆಸ್ಟ್ರೇಲಿಯಾದ ಪತ್ರಿಕೆ, 'ದಿ ಏಜ್' ಪ್ರಕಾರ “ಆಸ್ಟ್ರೇಲಿಯಾದೊಂದಿಗಿನ ಈ ನಿಕಟ ರಕ್ಷಣಾ ಒಪ್ಪಂದವು ಒಂದರ್ಥದಲ್ಲಿ ಜಪಾನಿನೊಂದಿಗೆ ಭಾರತವು ತ್ವರಿತವಾಗಿ ಮಾಡಿಕೊಂಡಿರುವ ಬಿಗಿಯಾದ ಮಿಲಿಟರಿ ಸಂಬಂಧದ ಸಾಲಿನಲ್ಲೇ ಇದು ನಿಲ್ಲುತ್ತದೆ ಮತ್ತು ಈ ಮೂರೂ ದೇಶಗಳು ಅಮೆರಿಕಾದೊಂದಿಗೆ ಹೊಂದಿರುವ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ.”

ಬರುವ ಜನವರಿಯಲ್ಲಿ ಅಧ್ಯಕ್ಷ ಒಬಾಮಾ ಅವರ ನಿಗದಿತ ಭೇಟಿ ಮತ್ತು ಭಾರತ ಅಮೆರಿಕಾ ರಕ್ಷಣಾ ಚೌಕಟ್ಟು ಒಪ್ಪಂದದ ನವೀಕರಣವು ಆಗಬೇಕಾಗಿರುವ ಹಿನ್ನೆಲೆಯಲ್ಲಿ, ಇದರಿಂದ ಹಳೆಯ ಆಲೋಚನೆಯಾದ ಭಾರತ, ಜಪಾನ್, ಆಸ್ಟ್ರೇಲಿಯಾ ಮತ್ತು ಅಮೆರಿಕಾವನ್ನೊಳಗೊಂಡ ಒಂದು ಚತುರ್ಭುಜ ಮೈತ್ರಿಕೂಟ ಹೊರಹೊಮ್ಮಬಹುದು. ಇಲ್ಲಿ ಕೂಡ, ಯುಪಿಎ ಸರ್ಕಾರದ ಕೆಲವು ವಿದೇಶಾಂಗ ನೀತಿ ನಿರೂಪಣೆಗಳನ್ನೇ ಬಿಜೆಪಿ ಸರ್ಕಾರ ಮುಂದುವರಿಸಿಕೊಂಡು ಹೋಗುತ್ತಿದೆ.

ಆರ್ಥಿಕ ಮತ್ತು ವಿದೇಶಾಂಗ ನೀತಿಗಳ ವಿಷಯದಲ್ಲಿ ಮೋದಿ ಸರ್ಕಾರವು ಯುಪಿಎ ಸರ್ಕಾರದ ನೀತಿಗಳನ್ನೇ ಮುಂದುವರಿಸಿಕೊಂಡು ಹೋಗುತ್ತಿರುವಾಗಲೇ, ಒಂದು ವಿಚಾರದಲ್ಲಿ ಅದು ತನ್ನದೇ ಆದ ಭಿನ್ನ ದಾರಿಯನ್ನು ತುಳಿಯುತ್ತಿದೆ. ಅದ್ಯಾವುದೆಂದರೆ ಆರ್‌ಎಸ್‌ಎಸ್–ಹಿಂದುತ್ವ ಕಾರ್ಯಸೂಚಿಯನ್ನು ಮುಂದೆ ಕೊಂಡೊಯ್ಯುವುದು. ಈ ಆರು ತಿಂಗಳಲ್ಲಿ, ಮೋದಿ ಸರ್ಕಾರವು ತನ್ನ ಧೋರಣೆಯನ್ನು ಆರ್‌ಎಸ್‌ಎಸ್ ಧೋರಣೆಯೊಂದಿಗೆ ಜೋಡಿಸುವ ಸಂಕಲ್ಪ ಮಾಡಿದಂತೆ ಕಾಣುತ್ತಿದೆ. ಆರ್‌ಎಸ್‌ಎಸ್ ಆರು 'ಸಮೂಹ' (ಗುಂಪು)ಗಳನ್ನು ರಚಿಸಿದೆ. ಅವು ಅರ್ಥಿಕ್(ಹಣಕಾಸು), ಶಿಕ್ಷಾ(ಶಿಕ್ಷಣ), ವಿಚಾರ್(ಸಿದ್ಧಾಂತ), ಸುರಕ್ಷಾ(ಭದ್ರತೆ), ಸೇವಾ(ಸೇವೆ) ಮತ್ತು ಜನ್(ಜನರು) ವಿಭಾಗಗಳನ್ನು ಹೊಂದಿವೆ. ಈ ಆರ್‌ಎಸ್‌ಎಸ್ ಗುಂಪುಗಳು ಈಗಾಗಲೇ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರೊಂದಿಗೆ ಪರಸ್ಪರ ಮಾತುಕತೆ ನಡೆಸಿವೆ ಮತ್ತು ಸರ್ಕಾರದ ಕಾರ್ಯಸೂಚಿಯನ್ನು ಮತ್ತು ನೀತಿಗಳನ್ನು ರೂಪಿಸಲು ನಿರತವಾಗಿವೆ. ಶಿಕ್ಷಣದ ಕ್ಷೇತ್ರದಲ್ಲಿ, ನೀತಿ ನಿರೂಪಣೆ, ಸಂಶೋಧನೆ ಮತ್ತು ಉನ್ನತ ಶಿಕ್ಷಣ ಮುಂತಾದ ಸಂಸ್ಥೆಗಳಲ್ಲಿನ ಹುದ್ದೆಗಳಿಗೆ ಹಿಂದುತ್ವವಾದಿಗಳು ಅಥವಾ ಅದೇ ದಾರಿ ತುಳಿಯುವವರನ್ನು ನೇಮಿಸಲಾಗುತ್ತಿದೆ. ಬೇರೆ ಭಾರತೀಯ ಭಾಷೆಗಳನ್ನು ಬದಿಗೊತ್ತಿ ಸಂಸ್ಕೃತವನ್ನು ಹೇರಲು ಮಾಡುತ್ತಿರುವ ಪ್ರಯತ್ನ, ವಿಜ್ಞಾನ, ಸಂಸ್ಕೃತಿ ಮತ್ತು ಸಮಾಜ ಕುರಿತು ಹಿಂದು ಅಂಧಶ್ರದ್ಧಾಳುಗಳ ವಿಶ್ವ ಕಣ್ನೋಟವನ್ನು ಪ್ರೋತ್ಸಾಹಿಸುವ ಕೆಲಸ ಭರದಿಂದ ಸಾಗುತ್ತಿದೆ. ಅತ್ಯಂತ ಕೋಮುವಾದಿ ನಿಲುವು ಹೊಂದಿರುವ ಗಿರಿರಾಜ ಕಿಶೋರ್ ಮತ್ತು ನಿರಂಜನ್ ಜ್ಯೋತಿಯಂಥವರು ಸಚಿವ ಸಂಪುಟದಲ್ಲಿ ತುಂಬಿಹೋಗಿದ್ದಾರೆ. ಪ್ರಧಾನ ಮಂತ್ರಿಗಳೇ ಆರ್‌ಎಸ್‌ಎಸ್ ಪ್ರಚಾರಕರಾಗಿರುವುದರಿಂದ ಹಿಂದುತ್ವ ಯೋಜನೆ ಜಾರಿ ಮಾಡುವಲ್ಲಿ ಆರ್‌ಎಸ್‌ಎಸ್ ಉನ್ನತ ಸ್ಥಾನದಲ್ಲಿದೆ.

ಕೆಳಹಂತದಲ್ಲಿ, ಹಿಂದುತ್ವ ಪಡೆಯವರು ಗೋಹತ್ಯೆ, 'ಲೌವ್ ಜಿಹಾದ್' ಮತ್ತು ಬಾಂಗ್ಲಾದೇಶದ ಕಾನೂನುಬಾಹಿರ ವಲಸೆಯಂತಹ ವಿಷಯಗಳನ್ನು ಎತ್ತುವ ಮೂಲಕ ಕೋಮು ಗಲಭೆಗಳನ್ನು ಹುಟ್ಟುಹಾಕುವ ಹಾಗೂ ಅಲ್ಪಸಂಖ್ಯಾತರ ವಿರುದ್ಧ ಮತೀಯ ದ್ವೇಷ ಹರಡುವ ಕುಕೃತ್ಯಗಳಲ್ಲಿ ತೊಡಗಿದ್ದಾರೆ. ದೇಶದ ರಾಜಧಾನಿ ದೆಹಲಿಯಲ್ಲೂ ಈ ಪ್ರವೃತ್ತಿ ಕಾಣುತ್ತಿದ್ದು, ಬವಾನ, ತ್ರಿಲೋಕಪುರಿಯಲ್ಲಿ ಕೋಮು ವಿದ್ವೇಷ ತಲೆದೋರಿದೆ ಮತ್ತು ಪೂರ್ವ ದೆಹಲಿಯಲ್ಲಿ ಒಂದು ಚರ್ಚನ್ನು ಸುಟ್ಟು ಹಾಕಲಾಗಿದೆ.

ಬಿಜೆಪಿ ಮತ್ತು ಮೋದಿ ಸರ್ಕಾರದ ಆರು ತಿಂಗಳ ಆಳ್ವಿಕೆಯು, ಕಾರ್ಪೊರೇಟ್ ಮತ್ತು ಹಿಂದುತ್ವ ಶಕ್ತಿಗಳ ಅವಳಿ ದಾಳಿಗಳನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಸಾಬೀತುಪಡಿಸಿದೆ. ಈ ದಾಳಿಯನ್ನು ಸರಿಯಾಗಿ ಎದುರಿಸಬೇಕು ಮತ್ತು ಹಿಮ್ಮೆಟ್ಟಿಸಬೇಕು. ಅದಕ್ಕೆ ಸಂಯೋಜಿತ ಹೋರಾಟದ ಅವಶ್ಯಕತೆ ಇದೆ. ಮೋದಿ ಸರ್ಕಾರದ ನವ ಉದಾರವಾದಿ ನೀತಿಗಳ ವಿರುದ್ಧದ ಹೋರಾಟ ಮತ್ತು ಆರ್‌ಎಸ್‌ಎಸ್-ಹಿಂದುತ್ವ ಕೋಮುವಾದಿ ಸಿದ್ಧಾಂತ ಮತ್ತು ಚಟುವಟಿಕೆಗಳ ವಿರುದ್ಧದ ಸಮರವನ್ನು ಒಟ್ಟುಗೂಡಿಸಬೇಕಾಗಿದೆ. ಜನರ ಮೇಲೆ ಹೊರಿಸುತ್ತಿರುವ ಹೊರೆಗೆ ಪ್ರತಿರೋಧ ಒಡ್ಡಲು ದುಡಿಯುವ ವಿವಿಧ ಜನವಿಭಾಗಗಳನ್ನು ಅಣಿನೆರಸಿ ಐಕ್ಯ ಹೋರಾಟಗಳನ್ನು ಮತ್ತು ಸಾಮೂಹಿಕ ಚಳುವಳಿಗಳನ್ನು ನಮ್ಮ ವರ್ಗ ಹಾಗೂ ಸಾಮೂಹಿಕ ಸಂಘಟನೆಗಳು ರೂಪಿಸಬೇಕು. ಈ ಬಲಪಂಥೀಯ ದಾಳಿಯನ್ನು ಎಡ ಶಕ್ತಿಗಳು ಒಂದಾಗಿ ಪ್ರತಿಭಟನೆಗಳನ್ನು ಸಂಘಟಿಸಬೇಕು. ಒಂದು ವಿಶಾಲ ತಳಹದಿಯ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಅಣಿನೆರಸುವಲ್ಲಿ ಇದು ಸಹಾಯಕವಾಗುತ್ತದೆ.



ಮಾಣಿಕ್ ಸರ್ಕಾರ್

ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾದ ಬೆನ್ನ ಹಿಂದೆಯೇ ದೇಶದ 'ಯೋಜನಾ ಆಯೋಗ'ವನ್ನು ರದ್ದುಪಡಿಸುವ ಘೋಷಣೆ ಹೊರಬಿದ್ದಿತು. ಈಗ ಈ ಪ್ರಯತ್ನ ಇನ್ನೂ ನಿರ್ದಿಷ್ಟ ರೂಪುಪಡೆದುಕೊಳ್ಳುತ್ತಿದೆ. ಇತ್ತೀಚೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಯೋಜನಾ ಆಯೋಗವನ್ನು 'ಪುನರಚಿಸುವ' ಸಲುವಾಗಿ ಅಭಿಪ್ರಾಯ ಸಂಗ್ರಹಿಸಲು ದಿಲ್ಲಿಯಲ್ಲಿ 2014 ಡಿಸೆಂಬರ್ 7ರಂದು ಮುಖ್ಯಮಂತ್ರಿಗಳ ಸಭೆ ನಡೆಸಿದರು. ತಮಗೆ ಮೊದಲೇ ಕಳಿಸಿದ್ದ ನಿರ್ದಿಷ್ಟ ಪ್ರಶ್ನಾವಳಿಗೆ ಉತ್ತರವಾಗಿ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ತ್ರಿಪುರ ರಾಜ್ಯದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರು ಈ ಸಭೆಯಲ್ಲಿ ಮಾಡಿದ ಲಿಖಿತ ಭಾಷಣದ ಸಾರ ಇಲ್ಲಿದೆ.

ಯೋಜನಾ ಆಯೋಗದ ರದ್ಧತಿ ಹಿನ್ನಲೆಯಲ್ಲಿ ಚರ್ಚೆ

'ಜನತೆಯ ಈ ಆಶೋತ್ತರಗಳನ್ನು ಸಾಕಾರಗೊಳಿಸಲು ಪ್ರಜ್ಞಾಪೂರ್ವಕವಾದ 'ಯೋಜನೆ' ಅನಿವಾರ್ಯ'

– ಮಾಣಿಕ್ ಸರ್ಕಾರ್

ಜನತೆಯ ಆಶೋತ್ತರಗಳನ್ನು ಜವಾಬ್ದಾರಿ ಸರ್ಕಾರಕ್ಕಿದೆ

"ತಮ್ಮ ಬದುಕನ್ನು ಉತ್ತಮಗೊಳಿಸಿಕೊಳ್ಳುವ ಆಶೋತ್ತರಗಳನ್ನು ಹೊತ್ತ ಜನಸಾಮಾನ್ಯರು ಭಾಗವಹಿಸಿದ ವಸಾಹತುಶಾಹಿ ವಿರೋಧಿ ಹೋರಾಟಗಳ ಮೂಲಕ ರೂಪಗೊಂಡಿದೆ, ಈ ನಮ್ಮ ಆಧುನಿಕ ಭಾರತ ರಾಷ್ಟ್ರ. ಜನತೆಯ ಈ ಆಶೋತ್ತರಗಳನ್ನು ತನ್ನ ಜವಾಬ್ದಾರಿ ಎಂದು ಪರಿಗಣಿಸಿ ಪ್ರಭುತ್ವವು ಅದನ್ನು ಈಡೇರಿಸಬೇಕೆಂಬುದಾಗಿ ನಮ್ಮ ಸಂವಿಧಾನದ ರಾಜ್ಯನೀತಿಯ ನಿರ್ದೇಶಕ ತತ್ವಗಳಲ್ಲಿ ಅಡಕಗೊಳಿಸಲಾಗಿದೆ. ಈ ಕೆಲಸವನ್ನು ಬಂಡವಾಳಶಾಹಿ ಮಾರುಕಟ್ಟೆ ಶಕ್ತಿಗಳಿಗೆ ವಹಿಸಲಾಗದು. ಜಾಗತೀಕರಣದ ವಾತಾವರಣದಲ್ಲಿ ಯೋಜನೆಯ ಅವಶ್ಯಕತೆ ಇಲ್ಲ ಎನ್ನುವವರಿದ್ದಾರೆ. ಈ ಪೊಳ್ಳು ವಾದವು 'ರಾಷ್ಟ್ರ' ಎಂಬ ಪರಿಕಲ್ಪನೆಯನ್ನೇ ಬುಡಮೇಲು ಮಾಡಬಲ್ಲದು.

'ತ್ರಿಪುರಾ ಸಚಿವರನ್ನು ಉದ್ದೇಶಿಸಿ ಮೋದಿ ಭಾಷಣ'– ಮಾಧ್ಯಮ ಸೃಷ್ಟಿ

ತ್ರಿಪುರಾ ಸಿಪಿಐ(ಎಂ) ಮುಖ್ಯ ಮಂತ್ರಿ ಮಾಣಿಕ್ ಸರ್ಕಾರ್ ಅವರ ಆಹ್ವಾನದ ಮೇರೆಗೆ, ಅವರ ಎಡರಂಗ ಸರ್ಕಾರದ ಸಚಿವರನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಭಾಷಣ ಮಾಡಿದರು ಎಂಬ ಕೆಲವು ದಿನ ಪತ್ರಿಕೆಗಳಲ್ಲಿ ಪ್ರಕಟ ವಾಗಿರುವ ಸುದ್ದಿ ಮಾಧ್ಯಮ ಸೃಷ್ಟಿಯಾಗಿದೆ. ಈ ಕುರಿತು ನವದೆಹಲಿಯಿಂದ ಸಿಪಿಐ(ಎಂ) ಸ್ಪಷ್ಟೀಕರಣವೊಂದನ್ನು ನೀಡಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ತ್ರಿಪುರ ಸಚಿವ ಸಂಪುಟದ ಸಭೆಯಲ್ಲಿ ಭಾಗವಹಿಸಿಲ್ಲ, ಅವರಿಗೆ ಅಂತಹ ಅಹ್ವಾನವನ್ನು ನೀಡಿರಲಿಲ್ಲ. ಈ ಕುರಿತು ಮುಖ್ಯ ಮಂತ್ರಿ ಮಾಣಿಕ್ ಸರ್ಕಾರ್ ಸಹ ಸ್ಪಷ್ಟೀಕರಣ ನೀಡಿದ್ದಾರೆ.

ನಡೆದದ್ದು ಇಷ್ಟು. ಪ್ರಧಾನಿ ನರೇಂದ್ರ ಮೋದಿ ತನ್ನ ಈಶಾನ್ಯ ರಾಜ್ಯಗಳ ಪ್ರವಾಸದ ಸಂದರ್ಭದಲ್ಲಿ ತ್ರಿಪುರಾ ರಾಜ್ಯ ಅತಿಥಿ ಭವನದಲ್ಲಿ ತಂಗಿದಾಗ ಮುಖ್ಯ ಮಂತ್ರಿ ಮಾಣಿಕ್ ಸರ್ಕಾರ್ ಮತ್ತು ಅವರ ಸಚಿವ ಸಂಪುಟದ ಕೆಲವು ಮಂತ್ರಿಗಳು ಪ್ರಧಾನಿಯನ್ನು ಭೇಟಿಯಾಗಿ ರಾಜ್ಯದ ಕೆಲವು ಪ್ರಶ್ನೆಗಳ ಕುರಿತು ಮನವಿಯೊಂದನ್ನು ಸಲ್ಲಿಸಿ ಚರ್ಚಿಸಿದರು. ಇಂತಹ ಭೇಟಿ ಹಿಂದೆ ಪ್ರಧಾನಿ ಮನಮೋಹನ ಸಿಂಗ್ ರಾಜ್ಯಕ್ಕೆ ಭೇಟಿ ನೀಡಿದಾಗಲೂ ನಡೆದಿತ್ತು.


ಸಂವಿಧಾನದಲ್ಲಿ ಅಡಕವಾಗಿರುವ ಜನತೆಯ ಈ ಆಶೋತ್ತರಗಳನ್ನು ಸಾಕಾರಗೊಳಿಸಲು ಪ್ರಜ್ಞಾಪೂರ್ವಕವಾದ ಒಂದು 'ಯೋಜನೆ' ಅನಿವಾರ್ಯ. ಆದ್ದರಿಂದ, 'ಯೋಜನಾ ಆಯೋಗ'ದಂತಹ ಒಂದು ಸಾಂಸ್ಥಿಕ ಏರ್ಪಾಟು ಅತ್ಯವಶ್ಯವಾಗಿದೆ. ಹಾಗಾಗಿ, ಹೊಸ ಸಂಸ್ಥೆಯು ಶಕ್ತಿಶಾಲಿಯಾಗಿಯೂ, ಸ್ವಾಯತ್ತವಾಗಿಯೂ ಮತ್ತು ಉತ್ತರದಾಯಿಯಾಗಿಯೂ ಇರಬೇಕು." ಇದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸದಸ್ಯ ಮತ್ತು ತ್ರಿಪುರಾದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರ ಅಭಿಪ್ರಾಯ.

ಮಾಣಿಕ್ ಸರ್ಕಾರ್ ಅವರ ಕೆಲವು ಸಲಹೆಗಳು :

1. ಒಕ್ಕೂಟ–ಸಹಕಾರ; ಯೋಜನಾ ವೇದಿಕೆಯ ರಚನೆ, ಗುರಿ ಮತ್ತು ಕಾರ್ಯವ್ಯೂಹ ಏನಿರಬೇಕು?

* ಇಡೀ ದೇಶದ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವ ಜವಾಬ್ದಾರಿ ಹೊರುವ ಸಂಸ್ಥೆಗೆ ಒಂದು ಸಾಂಸ್ಥಿಕ ಸ್ವರೂಪವಿರಬೇಕು. ಕೇಂದ್ರ ಹಾಗು ರಾಜ್ಯಗಳ ಪ್ರತಿನಿಧಿಗಳನ್ನು ಒಳಗೊಂಡ ಅದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಮಾದರಿಯಲ್ಲಿ ಅಥವಾ ಸಾಂವಿಧಾನಿಕ ಸಂಸ್ಥೆಯಾದ ಅಂತರ–ರಾಜ್ಯ ಮಂಡಳಿಯ ಮಾದರಿಯಲ್ಲಿ, ಪರಮಾಧಿಕಾರ ಉಳ್ಳದ್ದಾಗಿರಬೇಕು.
* ಉಪ ಅಧ್ಯಕ್ಷರು(ಡೆಪ್ಯುಟಿ ಛೇರ್‌ಮನ್) ಸೇರಿದಂತೆ ಪದ ನಿಮಿತ್ತ ಸದಸ್ಯರ(ತಜ್ಞರು) ನೇಮಕವು ರಾಜ್ಯಗಳ ಮತ್ತು ಕೇಂದ್ರದ ಪ್ರತಿನಿಧಿಗಳ ಸಹಮತದ ಮೂಲಕ ನಡೆಯಬೇಕು.
* ಪ್ರಧಾನ ಮಂತ್ರಿ ಅಧ್ಯಕ್ಷರಾಗಿಯೂ ಮತ್ತು ಎಷ್ಟು ಮಂದಿ ಕೇಂದ್ರ ಮಂತ್ರಿಗಳು ಪದ ನಿಮಿತ್ತ ಸದಸ್ಯರಿರುತ್ತಾರೊ ಅಷ್ಟೇ ಸಂಖ್ಯೆಯ ಮುಖ್ಯಮಂತ್ರಿಗಳೂ, ಸರದಿಯ ಮೇಲೆ, ಪದ ನಿಮಿತ್ತ ಸದಸ್ಯರಾಗಿರಬೇಕು.
* ಈಶಾನ್ಯ ರಾಜ್ಯಗಳ ಮುಖ್ಯಮಂತ್ರಿಗಳ ಪೈಕಿ ಒಬ್ಬರು, ಸರದಿಯ ಮೇಲೆ, ಪದ ನಿಮಿತ್ತ ಸದಸ್ಯರಾಗಿರಬೇಕು.
* ವರ್ಷಕ್ಕೆ ಕನಿಷ್ಟ ಎರಡು ಸಭೆಗಳು ನಡೆಯಬೇಕು.

ಹೊಸ ಯೋಜನಾ ಮಂಡಳಿಯು, ಜಿಡಿಪಿಯ ಬೆಳವಣಿಗೆಯಲ್ಲೇ ಧ್ಯಾನಮಗ್ನವಾಗಿರುವುದರ ಬದಲು ಜನ ಸಮೂಹದ ಒಂದು ಬಲು ದೊಡ್ಡ ವಿಭಾಗದ ಸ್ಥಿತಿ–ಗತಿಗಳನ್ನು ಅತಿ ಕಡಿಮೆ ಸಮಯದಲ್ಲಿ ಸುಧಾರಿಸುವ ಬಗ್ಗೆ ತನ್ನ ಗಮನ ಹರಿಸಬೇಕು. ಪ್ರತಿಯೊಬ್ಬ ಭಾರತೀಯ ನಾಗರಿಕನಿಗೂ ಒಳ್ಳೆಯ ಆರೋಗ್ಯ–ಆರೈ–ಕೆ, ಉದ್ಯೋಗದ ಭರವಸೆ, ಪ್ರತಿ ಮಗುವಿಗೂ ಒಳ್ಳೆಯ ಶಿಕ್ಷಣ, ವೃದ್ಧರಿಗೆ ಮತ್ತು ಅಂಗವಿಕಲರಿಗೆ ಬೆಂಬಲ, ಕುಡಿಯುವ ನೀರು, ನೈರ್ಮಲ್ಯ ಮತ್ತು ಎಲ್ಲರಿಗೂ ವಸತಿ ಒದಗಿಸುವ ನಿಟ್ಟಿನಲ್ಲಿ ಅದು ಕೆಲಸಮಾಡಬೇಕು.



2. ಕಾರ್ಯವ್ಯೂಹಾತ್ಮಕ ಮತ್ತು ಕಾರ್ಯಸಾಧು ಯೋಜನೆ – ಸತತವಾದ, ಐದು ವರ್ಷ ಅವಧಿಯ ಯೋಜನೆ ಮುಂದುವರಿಯಬೇಕೆ? ಅಥವಾ ಬೇರೆ ಸಲಹೆಗಳೇನು?

ಐದು ವರ್ಷ ಅವಧಿಯ ಯೋಜನಾ ವ್ಯವಸ್ಥೆ ಮುಂದುವರಿಯಬೇಕು. ಯೋಜನೆಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕು. ಉದ್ದೇಶಿತ ಯೋಜನಾ ಮಂಡಳಿಯು ಪಾರದರ್ಶಕವಾಗಿಯೂ ಮತ್ತು ಉತ್ತರದಾಯಿಯೂ ಆಗಿರಬೇಕು.

*** ವಾರ್ಷಿಕ ಯೋಜನೆಯ ಚರ್ಚೆ, ಕೇಂದ್ರ–ರಾಜ್ಯದ ನಡುವೆ, ಈಗಿರುವಂತೆ ಮುಂದುವರಿಯಬೇಕೆ?**

ವಾರ್ಷಿಕ ಯೋಜನೆಯ ಚರ್ಚೆ ಮುಂದುವರಿಯಬೇಕು. ಏಕೆಂದ–ರೆ, ಗುರಿ ಸಾಧಿಸುವಲ್ಲಿ ಆಗಿರುವ ಪ್ರಗತಿಯ ಪರಾಮರ್ಶೆಗೆ ಅವಕಾಶವಿರುತ್ತದೆ. ಅಲ್ಲದೆ, ತ್ರಿಪುರದಂತಹ ರಾಜ್ಯಗಳಿಗೆ ಯೋಜನೆಗಳನ್ನು ಕಾರ್ಯಗತಗೊಳಿಸಲು ಬೇಕಾಗುವ ಸಂಪನ್ಮೂಲ ಹೊದಿಸಿಕೊಳ್ಳಲು ಅವಕಾಶವಿರುತ್ತದೆ.

3. ನಾವೀನ್ಯತಾ ಮತ್ತು ಜ್ಞಾನ ಕೇಂದ್ರಗಳು ಉದ್ದೇಶಿತ ನಾವೀನ್ಯತೆಯ ಮತ್ತು ಜ್ಞಾನ ಕೇಂದ್ರಗಳು ಹೇಗೆ ಕಾರ್ಯನಿರ್ವಹಿಸಿದರೆ ನಿಮ್ಮ ರಾಜ್ಯಕ್ಕೆ ಅನುಕೂಲವಾಗುತ್ತದೆ?

ಹೊಸ ಯೋಜನಾ ಸಂಸ್ಥೆಯು ಒಂದು ಗುರುತರವಾದ ಪಾತ್ರ ನಿರ್ವಹಿಸಲಿರುವುದರಿಂದ ಉದ್ದೇಶಿತ ನಾವೀನ್ಯತಾ ಮತ್ತು ಜ್ಞಾನ ಕೇಂದ್ರಗಳು ಅದರ ಮಾರ್ಗದರ್ಶನಗಳಿಗೆ ಒಳಪಟ್ಟಿರುವುದು ಸೂಕ್ತ. ಏಕೆಂದರೆ, ಯೋಜನೆಯು, ನಾವೀನ್ಯತೆ ಮತ್ತು ಜ್ಞಾನ ಎರಡನ್ನೂ ಒಳಗೊಂಡಿರಬೇಕು ಮತ್ತು ಅವುಗಳನ್ನು ಬೆಳೆಸುವ ಅರ್ಥಪೂರ್ಣ ಪ್ರಕ್ರಿಯೆಯೂ ಆಗಿರಬೇಕು. ಆಗ, ಅದು ಗುಣಮಟ್ಟದ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ನೆರವಾಗುತ್ತದೆ.

ಯೋಜನಾ ವ್ಯವಸ್ಥೆಯು, ಆಹಾರ–ಧಾನ್ಯಗಳ ಉತ್ಪಾದನೆ, ಅದನ್ನು ಸರ್ಕಾರ ಕೊಳ್ಳುವ ವ್ಯವಸ್ಥೆ, ನಂತರ ಅದನ್ನು ಗ್ರಾಹಕರು ಕೊಳ್ಳುವ ದರ ನಿಗದಿ ಹಾಗು ಅವರ ಕೊಳ್ಳುವ ಸಾಮರ್ಥ್ಯ, ಜನರ ವಸತಿ ಮತ್ತು ಅವರ ಉದ್ಯೋಗದ ಅಥವಾ ವರಮಾನಗಳ ಕುರಿತು ಅದು ಕಾರ್ಯ ಪ್ರವೃತ್ತವಾಗಬೇಕು. ಇತ್ತೀಚಿನ ವರ್ಷಗಳಲ್ಲಿ ಕೃಷಿ ಸಂಶೋಧನೆಯನ್ನು ಕಡೆಗಣಿಸಲಾಗಿದೆ. ಅದರಿಂದಾಗಿ, ಬಹುರಾಷ್ಟ್ರೀಯ ಕಂಪೆನಿಗಳ ಕೃಷಿ ಸಂಬಂಧಿತ ವ್ಯವಹಾರ ಅನೇಕ ಪಟ್ಟು ಹೆಚ್ಚಾಗಿದೆ. ಮುಂದೆ ಇದು ಅಪಾಯ ತಂದೊಡ್ಡುತ್ತದೆ. ಆದ್ದರಿಂದ, ನಮ್ಮ ಸಾಮಾಜಿಕ ಆದ್ಯತೆಗಳಿಗೆ ಅನುಸಾರವಾಗಿ ಸರಕು, ಸೇವೆಗಳನ್ನು ಉತ್ಪಾದಿಸಲು, ಸರ್ಕಾರ ತನ್ನ ಖರ್ಚಿನಲ್ಲಿ ಜ್ಞಾನ–ಕೌಶಲ್ಯಗಳನ್ನು ಬೆಳೆಸುವುದು ಮತ್ತು ಅಗತ್ಯತೆಗಳಿಗೆ ಅನುಗುಣವಾದ ಸಂಶೋಧನೆ ನಡೆಸುವ ಏರ್ಪಾಡುಗಳು ಯೋಜನಾ ವ್ಯವಸ್ಥೆಯ ಒಂದು ಮುಖ್ಯವಾದ ಉದ್ದೇಶವಾಗಬೇಕು. ಹಾಗಿದ್ದಾಗ ಮಾತ್ರ ಯೋಜನೆ ತನ್ನ ಉದ್ದೇಶವನ್ನು ಈಡೇರಿಸಿದಂತಾಗುತ್ತದೆ.

*** ಚಿಂತನಾ ಚಿಲುಮೆಯ ಪಾತ್ರ ನಿರ್ವಹಿಸಲಿರುವ ಹೊಸ ಯೋಜನಾ ವ್ಯವಸ್ಥೆಯಿಂದ ಏನು ಬಯಸುತ್ತೀರಿ?**

ಹೊಸ ಯೋಜನಾ ಆಯೋಗವು ಕೇವಲ ಒಂದು ಚಿಂತನಾ ಚಿಲುಮೆಯಾಗಿದ್ದರಷ್ಟೇ ಸಾಲದು. ಅದಕ್ಕೊಂದು ಸ್ವತಂತ್ರವಾದ ಅಸ್ತಿತ್ವವಿರಬೇಕು. ನಮ್ಮ ಸಾಮಾಜಿಕ ಗುರಿ ತಲುಪಲು ಅನುವಾಗುವಂತೆ ಅದು ದೇಶದ ಅಭಿವೃದ್ಧಿಯ ದಿಕ್ಕುದಿಸೆಗಳನ್ನು ನಿರ್ಧರಿಸುವಂತಿರಬೇಕು. ಇಡೀ ಯೋಜನೆಯ ಗಾತ್ರ, ವಲಯವಾರು ಹಂಚಿಕೆ, ಮೂಲಸೌಕರ್ಯ ನಿರ್ಮಾಣದಲ್ಲಿ ಸಾರ್ವಜನಿಕ–ಖಾಸಗಿ ಹೂಡಿಕೆಯ ಪ್ರಮಾಣ ಮತ್ತು ಅದಕ್ಕೆ ಬೇಕಾಗುವ ಸಂಪನ್ಮೂಲಗಳ ಹೊಂದಿಕೆಯನ್ನೂ ನಿರ್ಧರಿಸುವಂತಿರಬೇಕು. ಒಟ್ಟಾರೆಯಾಗಿ ಹೇಳುವುದಾದರೆ, ವಿಶ್ವ ವ್ಯಾಪಾರ ಸಂಸ್ಥೆಯ ಒತ್ತಡಗಳನ್ನು ತಪ್ಪಿಸಿಕೊಳ್ಳಲು ಬೇಕಾಗುವ ನೀತಿಗಳನ್ನು ಅದು ನಿರೂಪಿಸುವ ಸಾಮರ್ಥ್ಯ ಹೊಂದಿರಬೇಕು.

4. ಯೋಜನಾ ಹಣದ ಹರಿವು

*** ಕೇಂದ್ರೀಯ ಯೋಜನೆಗಳಿಗೆ ಸಹಾಯವಾಗಿ ರಾಜ್ಯಗಳಿಗೆ ಸಿಗುವ ಹಣದ ಹರಿವಿನ ವಿಧಾನವನ್ನು ಹೇಗೆ ಪುನರ್ರೂಪಿಸಬೇಕು?**

ಕೇಂದ್ರ ಸರ್ಕಾರವು ತನ್ನ ಆದಾಯದ 50% ಭಾಗವನ್ನು ರಾಜ್ಯಗಳಿಗೆ ಮರುಹಂಚಿಕೆ ಮಾಡಬೇಕೆಂಬ ಬೇಡಿಕೆ ಬಹಳ ಸಮಯದಿಂದಲೂ ಇದೆ. ಇತ್ತೀಚೆಗೆ, ಕೇಂದ್ರ ಸರ್ಕಾರವು ಯೋಜನೆಗಳ


ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

E£ÀßµÀÄÖªÀÄvÀÛµÀÄÖ¸À©ìrPÀrvÀUÀ¼À ¨sÀgÀªÀ¸ÉUÀ½UÉPÉÆ£ÉAiÉÄÃE®è!

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



"ಸಬ್ಸಿಡಿಗಳನ್ನು ತಗ್ಗಿಸಲು ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಲಾಗುವುದು" ಎಂದು ಮೋದಿ ಸರಕಾರದ ಹಣಕಾಸು ಮಂತ್ರಿಗಳು ಹೇಳಿದ್ದಾರೆ. 'ಇಟಿ ನೌ' ಎಂಬ ಟಿವಿ ಚಾನೆಲ್ ಸಂಘಟಿಸಿದ್ದ 'ಇಂಡಿಯಾ ಎಕನಾಮಿಕ್ ಕೊಂಕ್ಲೇವ್'ನಲ್ಲಿ ಮಾತಾಡುತ್ತ ಅವರು ಕಾರ್ಪೊರೇಟ್ ಕುಳಗಳಿಗೆ ನೀಡಿರುವ ಭರವಸೆ. ಅಂದರೆ ಇದು ಯಾರಿಗೆ 'ಒಳ್ಳೆಯ ದಿನಗಳ' ದೃಢೀಕರಣ ಎಂಬುದು ಸ್ಪಷ್ಟ.

"ಖರ್ಚು ನಿರ್ವಹಣೆ ಸಮಿತಿಯೊಂದಿಗೆ ನಾವು ಮಾತುಕತೆಗಳ ಸರಣಿಯನ್ನೇ ನಡೆಸಿದ್ದೇವೆ. ಮುಂದಿನ ಕೆಲವು ತಿಂಗಳಲ್ಲಿ, ಬಹುಶಃ ಅದಕ್ಕೆ ಮೊದಲೇ ಅವರು ಕೆಲವು ಮಧ್ಯಂತರ ಶಿಫಾರಸುಗಳನ್ನು ಕೊಡಬಹುದು, ಆಮೂಲಕ ನಾವು ವಿವೇಕಯುತಗೊಳಿಸುವ ಕ್ರಮಗಳನ್ನು ಮುಂದುವರೆಸುತ್ತೇವೆ" ಎಂದು ಅವರು ಹೇಳಿದರು.

ನವ-ಉದಾರವಾದಿ ಭಾಷೆಯಲ್ಲಿ 'ವಿವೇಕಯುತ'ಗೊಳಿಸುವುದು ಅಥವ 'ತರ್ಕಬದ್ಧಗೊಳಿಸುವುದು' ಎಂದರೆ ಜನಸಾಮಾನ್ಯರಿಗೆ ಕೊಡುವ ರಿಯಾಯ್ತಿಗಳನ್ನು , ಸಬ್ಸಿಡಿಗಳನ್ನು ಕಡಿತ ಮಾಡುವುದೆಂದೇ ಅರ್ಥ. ಏಕೆಂದರೆ ಇಂತಹ ರಿಯಾಯ್ತಿಗಳು, ಸಬ್ಸಿಡಿಗಳು ವಿವೇಕಯುತವಲ್ಲ, ತರ್ಕಬದ್ಧವಲ್ಲ, ಅವು ಅನುತ್ಪಾದಕ ದುಂದುವೆಚ್ಚ ಎಂಬ ತತ್ವ ನವ-ಉದಾರವಾದದ ಜೀವಾಳ ತಾನೇ?

ಇದಕ್ಕೆ ಮೊದಲು ನವಂಬರ್ 27ರಂದು 'ಹಿಂದು ಪತ್ರಿಕೆಯಲ್ಲಿ ಪ್ರಕಟವಾದ ಒಂದು ಸುದ್ದಿಯ ಪ್ರಕಾರ ಎನ್‌ಡಿಎ ಸರಕಾರ ತಾನೆ ಸಲ್ಲಿಸಿರುವ ಬಜೆಟಿನಲ್ಲಿ ನಮೂದಿಸಿದ್ದ ಸಬ್ಸಿಡಿಗಳಲ್ಲಿ ಭಾರೀ ಕಡಿತಗಳನ್ನು ತರುವ ಬಗ್ಗೆ ಯೋಚಿಸುತ್ತಿದೆ. ಈ ಕಡಿತ 25ಶೇ.ದ ವರೆಗೂ ಹೋಗಬಹುದು ಎನ್ನಲಾಗಿತ್ತು. ಹಣಕಾಸು ಕೊರತೆಯನ್ನು ಕಡಿಮೆ ಮಾಡಲು ಹೀಗೆ ಮಾಡಲಾಗುತ್ತಿದೆಯಂತೆ. ಮೋದಿ ಸರಕಾರದ ವಕ್ತಾರರು ಆಗ ಈ ಸುದ್ದಿಯನ್ನು ದೃಢೀಕರಿಸದಿದ್ದರೂ ನಿರಾಕರಿಸಿರಲಿಲ್ಲ. ಈಗ ಸ್ವತಃ ಹಣಕಾಸು ಮಂತ್ರಿಗಳೇ ಅದನ್ನು ದೃಢಪಡಿಸಿದ್ದಾರೆ.

ಇದು ಕನಿಷ್ಟ ಮೂರು ಕಾರಣಗಳಿಂದಾಗಿ ಸರಕಾರದ ವಿಚಿತ್ರ ವರ್ತನೆ ಎನ್ನುತ್ತಾರೆ ಅರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಮೊದಲನೆಯದಾಗಿ, ಮೋದಿ ಸರಕಾರದ ಬಜೆಟ್ ಇತ್ತೀಚೆಗಷ್ಟೇ ಬಂದದ್ದು. ಅಲ್ಲದೆ ಅದನ್ನು ಮಂಡಿಸಿದ ಮೇಲೆ ವಿಪತ್ಕಾರಿ ಆರ್ಥಿಕ ಬೆಳವಣಿಗೆಯೇನೂ ನಡೆದಿಲ್ಲ. ವಾಸ್ತವವಾಗಿ ಕಚ್ಚಾತೈಲ ಬೆಲೆಗಳು ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಇಳಿದು ಸರಕಾರದ ತೈಲ ಸಬ್ಸಿಡಿಗಳ ಪ್ರಮಾಣ ಉಳಿದು ಹಣಕಾಸು ಕೊರತೆ ಕಡಿಮೆಯಾಗಬೇಕಿತ್ತು.

ಎರಡನೆಯದಾಗಿ, ಸಂಸತ್ತು ಅದಿವೇಶನ ನಡೆಯುತ್ತಿದೆ. ಸಂಸತ್ತು ಅಂಗೀಕಾರ ನೀಡಿರುವ ಬಜೆಟಿನಲ್ಲಿ ಇಂತಹ ಗಮನಾರ್ಹ ಬದಲಾವಣೆಯನ್ನು ಅದರ ಗಮನಕ್ಕೆ ತಂದಿಲ್ಲ. ಮೂರನೆಯದಾಗಿ, ವೆಚ್ಚಗಳನ್ನು ಕಡಿತ ಮಾಡಲೇಬೇಕಾಗಿದ್ದಲ್ಲಿ ಅದು ಸಾಮಾಜಿಕ ವಲಯದ್ದೇ ಮಾತ್ರ ಏಕಾಗಬೇಕು? ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತಹ ಕಡುಬಡವರಿಗೆ ಸ್ವಲ್ಪವಾದರೂ ಪರಿಹಾರ ಒದಗಿಸುವಂತಹ ಕ್ರಮಗಳ ಮೇಲೆ ಮಾತ್ರ ಕಣ್ಣು ಏಕೆ?

ಇದು 'ಒಳ್ಳೆಯ ದಿನಗಳ' ಮಾತಾಡುವ ಮೋದಿ ಸರಕಾರ ಶ್ರೀಮಂತರ ಪರವಾದ, ಬಡವರ ವಿರೋಧಿಯಾದ ಸರಕಾರ ಎಂಬುದು ದೃಢಪಡುತ್ತದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್. ಹಣಕಾಸು ಕೊರತೆ ತಗ್ಗಿಸಬೇಕು ಎನ್ನುವಾಗ ಸರಕಾರ ವೆಚ್ಚ ತಗ್ಗಿಸುವ ಬಗ್ಗೆಯೇ ಏಕೆ ಮಾತಾಡುತ್ತದೆ, ವೆಚ್ಚ ತಗ್ಗಿಸುವ ಮಾತಾಡಬೇಕಾದಾಗ ಬಡವರಿಗೆ ಕೊಡುವ ಸಬ್ಸಿಡಿಗಳ ಮೇಲೆ ಮಾತ್ರ ಏಕೆ ಸರಕಾರದ ಕಣ್ಣು?

ಇದನ್ನು ಸಮರ್ಥಿಸಿಕೊಳ್ಳಲು ನವ-ಉದಾರವಾದಿಗಳು ಹೂಡುವ ಹೊಸ ತರ್ಕದ ಬಗ್ಗೆ ನಾವು ಕಳೆದ ವಾರ ಈ ಅಂಕಣದಲ್ಲಿ ನೋಡಿದ್ದೇವೆ. ಹಣಕಾಸು ಕೊರತೆಯನ್ನು ತಗ್ಗಿಸಲು ಉಳ್ಳವರಿಂದ ನೇರ ತೆರಿಗೆಗಳ ಮೂಲಕ ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸುವುದು ವಿವೇಕಯುತವಲ್ಲ, ಅವರಿಗೆ ಉತ್ತೇಜನೆಯೆಂದು ನೀಡುವ ರಿಯಾಯ್ತಿಗಳಲ್ಲಿ ಕಡಿತವೂ ತರ್ಕಬದ್ಧವಲ್ಲ, ಏಕೆಂದರೆ ಅವರಿಗೆ ರಿಯಾಯ್ತಿಗಳನ್ನು ನೀಡಿದರೆ ಅವರ 'ಆತ್ಮವಿಶ್ವಾಸ' ಹೆಚ್ಚುತ್ತದೆ, ಅದರಿಂದ ಅವರ ಹೂಡಿಕೆಗಳು, ಅವರ ಲಾಭ ಹೆಚ್ಚಿದರೆ ಅದರ ಒಂದಂಶ ಆದಾಯವಾಗಿ ಸರಕಾರದ ಬೊಕ್ಕಸಕ್ಕೆ ಬರುತ್ತದೆ. ಆಗ ಸರಕಾರ ಬಡವರಿಗಾಗಿ ಹೆಚ್ಚು ವೆಚ್ಚ ಮಾಡಲು ಸಾಧ್ಯವಾಗುತ್ತದೆ. ಆದರೆ ಈಗಾಗಲೇ ಗಮನಿಸಿರುವಂತೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕೇವಲ 200 ಜಿಲ್ಲೆಗಳಿಗೆ ಸೀಮಿತಗೊಳಿಸುವ ಮೋದಿ ಸರಕಾರದ ಕ್ರಮ ಈ ತರ್ಕವೂ ತರ್ಕಹೀನ ಎಂದು ಸಾಬೀತು ಮಾಡಿದೆ.

ನಿಜ, ಜನಸಾಮಾನ್ಯರ ಮೇಲೆ ಸರಕಾರ ದಾಳಿ ಮಾಡಿದಾಗ ಕಾರ್ಪೊರೇಟ್‌ಗಳಿಗೆ ಖುಶಿಯಾಗುತ್ತದೆ. ಆದರೆ ಈ ಖುಶಿಯೆಲ್ಲವೂ ಹೂಡಿಕೆಗಳಾಗಿ ಪರಿವರ್ತನೆಗೊಳ್ಳುವುದಿಲ್ಲ. ಏಕೆಂದರೆ ಅವರ ಹೂಡಿಕೆ ಮಾರುಕಟ್ಟೆ ವಿಸ್ತಾರಗೊಳ್ಳುತ್ತದೆಯೋ ಇಲ್ಲವೋ ಎಂಬುದರ ಮೇಲೆ ಅವಲಂಬಿಸಿದೆ. ಜನಗಳ ಮೇಲೆ ದಾಳಿ ಮಾಡಿ ಅವರ ಕೊಳ್ಳುವ ಶಕ್ತಿ ಇಳಿದರೆ ಮಾರುಕಟ್ಟೆ ವಿಸ್ತಾರಗೊಳ್ಳುವುದಾದರೂ ಹೇಗೆ?

ಆಗಲೂ ನವ-ಉದಾರವಾದಿಗಳು ಬಡವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕ್ರಮಗಳನ್ನು ವಿರೋಧಿಸುತ್ತಾರೆ, ಮಾತ್ರವಲ್ಲ, ಉಳ್ಳವರು ಹೂಡಿಕೆ ಮಾಡದಿರಲು ಅವರಿಗೆ ನಿಡಿರುವ ಉತ್ತೇಜನೆ ಸಾಕಷ್ಟು ಪ್ರಮಾಣದಲ್ಲಿ ಇಲ್ಲ, ಅದನ್ನು ಇನ್ನಷ್ಟು ಹೆಚ್ಚಿಸಬೇಕಾಗಿದೆ, 'ಮಿತವ್ಯಯ'ದ ಕ್ರಮಗಳನ್ನು ಮತ್ತಷ್ಟು ಹೆಚ್ಚಿಸಬೇಕು ಎಂದು ತರ್ಕ ಹೂಡುತ್ತಾರೆ.

ಅಂದರೆ 'ಒಳೆಯ ದಿನಗಳ' ಸರಕಾರದ ಹಣಕಾಸು ಮಂತ್ರಿಗಳಿಂದ ಇನ್ನಷ್ಟು, ಮತ್ತಷ್ಟು ಸಬ್ಸಿಡಿ ಕಡಿತಗಳ ಭರವಸೆಗಳು ಬರುತ್ತಲೇ ಇರಬೇಕು!

ಮೋದಿ ಸರಕಾರಕ್ಕೆ 'ಧೈರ್ಯದ ಕೊರತೆ': ಕಾರ್ಪೊರೇಟ್‌ಗಳಿಗೇ ಆತಂಕ!

ಅಮೆರಿಕನ್ ಉದ್ಯಮಿಗಳಿಗೆ ಮೋದಿ ಸರಕಾರ ಇದುವರೆಗೆ ಕೊಟ್ಟಿರುವ ಭಕ್ಷೀಸುಗಳು ಸಾಲದಂತೆ, ಅವರಿಗೆ ಇನ್ನೂ ಬೇಕಂತೆ ಎಂಬ ಸುದ್ದಿಯನ್ನು ಈ ಅಂಕಣದಲ್ಲಿ ನೋಡಿದ್ದೇವೆ. ಈ ವಾರ ನಮ್ಮ ದೇಶೀ ಕಾರ್ಪೊರೇಟ್‌ಗಳಿಂದಲೂ ಇಂತಹ ಬೇಡಿಕೆ ಬಂದಿದೆ ಎಂದು ಎಕನಾಮಿಕ್ ಟೈಮ್ಸ್ ಬ್ಯುರೋದ ಡಿಸೆಂಬರ್ 10ರ ಸುದ್ದಿ ಹೇಳುತ್ತದೆ. ಇದು ಪ್ರೊ. ಪಟ್ನಾಯಕ್ ನವ-ಉದಾರವಾದಿಗಳ 'ತರ್ಕ;ದ ಬಗ್ಗೆ ಮಾಡಿರುವ ವಿಶ್ಲೇಷಣೆಯನ್ನು ದೃಢಪಡಿಸಿದೆ.

"ಆರಂಭದ ಭಾವಾವೇಶ ಮಾಯ, ಮೋದಿ ಸರಕಾರಕ್ಕೆ 'ಧೈರ್ಯದ ಕೊರತೆ' ಯೆಂದು ಕಾರ್ಪೊರೇಟ್ ಭಾರತದ ಆತಂಕ". ಇದು ಈ ಸುದ್ದಿಯ ತಲೆ ಬರಹ. ಮೋದಿ ಸರಕಾರ ಆರು ತಿಂಗಳು ಮುಗಿಸುತ್ತಿದ್ದಂತೆ ಸುಧಾರಣೆಗಳನ್ನು ತರುವಲ್ಲಿ ಅದರಲ್ಲಿ ಧೈರ್ಯದ ಕೊರತೆಯಿದೆ, ತೀವ್ರಗಾಮಿಯಾದ ಹೊಸ ವಿಚಾರಗಳು ಅದರ ಬಳಿ ಇಲ್ಲ ಎಂದು ಹಲವು ಉದ್ಯಮಿಗಳಿಗೆ ಆತಂಕವಾಗಿದೆ ಎಂಬದು ಡಿಸೆಂಬರ್ 6ರಂದು ನಡೆದ ಸಿಐಐ(ಭಾರತೀಯ ಉದ್ಯಮದ ಮಹಾಒಕ್ಕೂಟ)ನ ಸಭೆಯಲ್ಲಿ ವ್ಯಕ್ತವಾಗಿರುವ ಭಾವನೆಯೆಂದು ಅದು ವರದಿ ಮಾಡಿದೆ. ಈ ಸಭೆಗೆ ಮಾಧ್ಯಮಗಳಿಗೆ ಪ್ರವೇಶವಿರಲಿಲ್ಲವಂತೆ. ಆದರೆ ಸಭೆಯಲ್ಲಿ ಭಾಗವಹಿಸಿದ ಉದ್ಯಮಿಗಳು ತಮ್ಮ ಗುರುತನ್ನು ಪ್ರಕಟಿಸಬಾರದು ಎಂದು ಹೇಳಿಕೊಂಡು ತಿಳಿಸಿದ ಅಂಶಗಳನ್ನು ಆಧರಿಸಿ ಈ ವರದಿಯನ್ನು ಪ್ರಕಟಿಸಿದ್ದಾರೆ.

ಸರಕಾರ ವಾಸ್ತವವಾಗಿ ಒಂದು ಧೀರ ನಿಲುವು ತಳೆಯಬೇಕು, ಹಿಂದಿನ ದಾರಿಯಿಂದ ದೂರ ಸರಿಯುತ್ತೇವೆ ಎಂದು ಹೇಳಬೇಕು ಎಂದು ಒಬ್ಬ ಉದ್ಯಮಿ ಹೇಳಿದರೆ, ಮತ್ತೊಬ್ಬರು "ಈ ಸರಕಾರ ನಮ್ಮನ್ನು ಹತಾಶೆಯಿಂದ ನಿರೀಕ್ಷೆಯತ್ತ ಒಯ್ದಿದೆ, ಆದರೆ ಈಗ ಆ ನಿರೀಕ್ಷೆ ಮಾಯವಾಗುತ್ತಿದೆ" ಎಂದರಂತೆ.

ಇನ್ನೊಬ್ಬ ಉದ್ಯಮಿ ಬಿಜೆಪಿ ಸರಕಾರ ಆರೋಗ್ಯ ಪಾಲನೆಯ ಹೊಸದೊಂದು ಕಲ್ಯಾಣ ಕ್ರಮವನ್ನು ಪ್ರಕಟಿಸಿ ಅದರ ಹಿಂದಿನ ಸರಕಾರದ ಹಾದಿಯಲ್ಲೇ ಸಾಗಿದೆ ಎಂದು ಆಕ್ರೋಶವನ್ನೇ ವ್ಯಕ್ತಪಡಿಸಿದ್ದಾರೆ. "ನಾವೀಗ ಕಾಣುತ್ತಿರುವ ಸುಧಾರಣೆಗಳು ಅಲ್ಲಿ-ಇಲ್ಲಿ ತೇಪೆ ಹಚ್ಚುವ ಸಣ್ಣ ಕ್ರಮಗಳು, ಭಾರತೀಯ ಶೇರುಗಳಲ್ಲಿ ಬಹಳ ಆಸಕ್ತಿಯಿದೆ, ಆದರೆ ಹೊಸ ಪ್ರಾಜೆಕ್ಟುಗಳಿಗೆ ಹೂಡಿಕೆ ಎಲ್ಲಿದೆ? ಪ್ರತಿಯೊಬ್ಬರೂ ಕಾದು ನೋಡುವ ಆಟ ಆಡುತ್ತಿದ್ದಾರೆ" ಎಂಬ ಅವರ ಟಿಪ್ಪಣಿ ಮೋದಿ ಸರಕಾರದ ಕುರಿತಾದ್ದೋ ಅಥವ ಅದು ಜನಸಾಮಾನ್ಯರ ಮೇಲೆ ದಾಳಿ ಮಾಡಿ ಉದ್ಯಮಿಗಳಿಗೆ ನೀಡುವ ಉತ್ತೇಜನೆಯ ಫಲಿತಾಂಶವೇನೂ ಕಾಣುತ್ತಿಲ್ಲ, ಆದ್ದರಿಂದ ಪ್ರೊ. ಪಟ್ನಾಯಕ್ ಹೇಳುವಂತೆ ಇನ್ನಷ್ಟು ದಾಳಿ ಮಾಡಿ ಎಂದು ಹೇಳುತ್ತಿದ್ದಾರೋ ಎಂಬ ಸಂದೇಹ ಮೂಡುವುದು ಸಹಜ.

ಮೋದಿ ಸರಕಾರದ 'ಕಾರ್ಮಿಕ ಸುಧಾರಣೆ'ಗಳಿಗೆ ಬಿಜೆಪಿಯ ಕಾರ್ಮಿಕ ಸಂಘಟನೆಯಿಂದಲೇ ವಿರೋಧ ಬಂದಿರುವುದರಿಂದ ಮತ್ತೊಬ್ಬ ಉದ್ಯಮಿಗೆ ಖೇದವಾಗಿದೆ. ಎಲ್ಲವನ್ನೂ ಹಿಂದಿನಂತೆಯೇ ರಾಜಕೀಯವಾಗಿಯೇ ತೂಗಲಾಗುತ್ತಿದೆ ಎಂಬುದು ಅವರ ಅಳಲು.

ಮೋದಿ ಸರಕಾರ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ತನ್ನ ಬಂಡವಾಳವನ್ನು 52ಶೇ.ಕ್ಕೆ ಇಳಿಸಿ ಅದನ್ನು ಖಾಸಗೀಕರಿಸುವ ಅಂಚಿನಲ್ಲಿ ಬಂದು ನಿಲ್ಲುವ 'ಸಾಹಸ' ಮಾಡುತ್ತಿದ್ದರೆ, ಬೋಸ್ಟನ್ ಕನ್ಸಲ್ಟಿಂಗ್ ಗ್ರುಪ್‌ನ ಭಾರತೀಯ ಅಧ್ಯಕ್ಷ ಅದನ್ನು 33ಶೇ.ಕ್ಕೆ ಇಳಿಸಿ ಖಾಸಗೀಕರಸಿಯೇ ಬಿಡಬಾರದೇಕೆ ಎಂದು ಕೇಳಿದ್ದಾರಂತೆ.

ಅದಕ್ಕೆ ಮತ್ತೊಬ್ಬ ಉದ್ಯಮಿ 'ಸಮಜಾಯಿಷಿ' ನೀಡುತ್ತ "ಉದ್ಯಮಿಗಳು ಸ್ವಲ್ಪ ತಾಳ್ಮೆಯಿಂದಿರಬೇಕು, ಸುಧಾರಣೆಗಳಿಗೆ ಕೆಲವು ವರ್ಷಗಳು ಬೇಕಾಗುತ್ತವೆ" ಎಂದರಂತೆ.

ಬಿಜೆಪಿ ಮಂದಿಗೆ ದೂರದ ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಸಲಹೆ ನೀಡುತ್ತಿರುವ ಅರ್ಥಶಾಸ್ತ್ರ ಪ್ರಾಧ್ಯಾಪಕರೂ, ಈ ವೇಳೆಗೆ ಆಗಬೇಕಾದ್ದು ಆಗಿಲ್ಲ, ಭಾರತ ಬೆಳವಣಿಗೆ ರೇಖೆಯಲ್ಲಿ ಹಿಂದಿದೆ, ನನಗೆ ತುಸು ನಿರಾಸೆಯಾಗಿದೆ ಎಂದಿದ್ದಾರೆ ಎಂದು ಈ ವರದಿ ಹೇಳುತ್ತದೆ.

ಸಿಐಐ ಅಧ್ಯಕ್ಷ ಮತ್ತು ಶ್ರೀರಾಮ್ ಗುಂಪಿನ ಅಜಯ್ ಶ್ರೀರಾಮ್ ಆಹ್ವಾನದ ಮೇರೆಗೆ ಈ ಸಭೆ ನಡೆಯಿತು, ಹಣಕಾಸು ಮಂತ್ರಿಗಳು ತಮ್ಮ ಸರಕಾರದ ಕ್ರಮಗಳ ಬಗ್ಗೆ ಉದ್ಯಮ ವಲಯಗಳ 'ನಾಡಿಮಿಡಿತ ತಿಳಿಯುವ' ಆಶಯವನ್ನು ತಮ್ಮಲ್ಲಿ ವ್ಯಕ್ತಪಡಿಸಿದ್ದರೆಂದೂ ಅಜಯ್ ಶ್ರೀರಾಮ್ ಹೇಳಿರುವುದಾಗಿ ಈ ವರದಿ ತಿಳಿಸುತ್ತದೆ.

ಪ್ರೊ. ಪಟ್ನಾಯಕ್ ಹೇಳಿರುವಂತೆ ದೇಶದ ಜನಸಾಮಾನ್ಯರು ಮೋದಿ ಸರಕಾರದಿಂದ ಇನ್ನಷ್ಟು ದಾಳಿಗಳನ್ನು ಎದುರಿಸಲು ಸನ್ನದ್ಧರಾಗಬೇಕು ಎಂಬುದನ್ನು ಈ ಸುದ್ದಿ ನೆನಪಿಸುತ್ತದೆ..

ಅಭಿವೃದ್ಧಿ ಅಜೆಂಡಾದ ಆಚೆ

ತಿಂಗಳಿಗೆ 50ಲಕ್ಷ ರೂ. ಖರ್ಚು ಮಾಡುವ 'ಆಮಿಷವಿಲ್ಲದ ಶುದ್ಧೀಕರಣ' ಅಭಿಯಾನ!

ಆಗ್ರಾದ ವೇದನಗರದ ಸರಿಯಾದ ಚರಂಡಿ ವ್ಯವಸ್ಥೆ, ಸರಿಯಾದ ಶೌಚಾಲಯಗಳೂ ಇಲ್ಲದ ಕೊಳೆಗೇರಿಗಳಲ್ಲಿ ವಾಸಿಸುವ 350ಕ್ಕೂ ಹೆಚ್ಚು ಮುಸ್ಲಿಂ ನಿವಾಸಿಗಳು ಈಗ ಮತಾಂತರ- ಮರು ಮತಾಂತರದ ಸಮರದ ನಡುವೆ ಸಿಲುಕಿಕೊಂಡಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.(ದಿ ಹಿಂದು, ಡಿಸೆಂಬರ್ 11). ಬಹುಶಃ ಇವರು 'ಸ್ವಚ್ಛ ಭಾರತ ಅಭಿಯಾನ'ದ ಬಗ್ಗೆ ಕೇಳಿರಲಿಕ್ಕಿಲ್ಲ, ಆದರೂ 'ಶುದ್ಧೀಕರಣ'ದ ವಿವಾದದಲ್ಲಿ ಸಿಲುಕಿಕೊಂಡಿದ್ದಾರೆ.

ಮೂರು ವರ್ಷಗಳ ಹಿಂದೆ ಪಶ್ಚಿಮ ಬಂಗಾಲದ ಒಂದು ಹಳ್ಳಿಯಿಂದ ವಲಸೆ ಬಂದ ತನಗೆ ಬಿಪಿಎಲ್ ರೇಶನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಕೊಡಲಾಗುವುದು ಎಂದು ಹೇಳಿದರು, ಅದಕ್ಕಾಗಿ ಕೇಸರಿ ಬಾವುಟ ಹಿಡಿದ ಕೆಲವರು ನಡೆಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿದೆ ಎಂದು ಒಬ್ಬಾಕೆ ಹೇಳಿದರೆ, ಈ ಮಂದಿ ನಮಗಾಗಿ ಕೆಲವು ಫಾರಂಗಳನ್ನು ಭರ್ತಿ ಮಾಡಿ ನಮ್ಮನ್ನು ಬೆಂಕಿಯ ಎದುರು

ಪುಟ 15 ನೋಡಿ

ಕಾರ್ಪೊರೇಟ್-ಪರ, ಜನ-ವಿರೋಧಿ 'ಅಭಿವೃದ್ಧಿ ಅಜೆಂಡಾ' ಮಾತ್ರವಲ್ಲ, ದಿನ ಬೆಳಗಾದರೆ ಹಗೆಯುಗುಳುವ ಭಾಷಣಗಳು, 'ಮರು' ಮತಾಂತರಗಳು, ತಾಜ್ ಮಹಲ್, ರಾಷ್ಟ್ರೀಯ ಗ್ರಂಥವಾಗಿ ಗೀತೆ ಇತ್ಯಾದಿ, ಇತ್ಯಾದಿ-ಪ್ರತಿಪಕ್ಷಗಳಿಗೆ ಚರ್ಚಿಸಲು ವಿಷಯಗಳೇ ಇಲ್ಲ ಎನ್ನುತ್ತಿದ್ದಾರೆ ಆಳುವ ಪಕ್ಷದ ವಕ್ತಾರರು!

'ದಿ ಹಿಂದು'ನಲ್ಲಿ ಕೇಶವ್ ಅವರ ವ್ಯಂಗ್ಯ.



ಹಾಸನ: ಬಗರ್ ಹುಕುಂ - ಅರಣ್ಯ ಭೂಮಿ ಸಾಗುವಳಿ ಸಕ್ರಮ- ಮನೆ ನಿವೇಶನಕ್ಕಾಗಿ ಆಗ್ರಹಿಸಿ ಪ್ರತಿಭಟನೆ

ಸರ್ಕಾರಿ ಹಾಗೂ ಈಗ ಅರಣ್ಯವೆನ್ನಲಾಗುವ ಜಮೀನಿನಲ್ಲಿ ಸಾಗುನಿರತ 10 ಎಕರೆ ಒಳಗಿನ ಬಡ ಸಾಗುದಾರರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು. ಭೂ ಕಂದಾಯ ಕಾಯ್ದೆ-1966ಕ್ಕೆ, ಅರಣ್ಯ ಹಕ್ಕು ಮಾನ್ಯತಾ ಕಾಯ್ದೆ- 2006, ಸಿಟಿ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ- 1977 ಹಾಗೂ ಗೋಮಾಳ ನೀತಿಗೆ ಮತ್ತು ಭೂಕಬಳಿಕೆ ನಿಷೇಧ ಕಾಯ್ದೆ-2011 ಗಳಿಗೆ ತಿದ್ದುಪಡಿ ತಂದು ಈ ಎಲ್ಲಾ ಬಡವರಿಗೆ ಹಕ್ಕು ಪತ್ರ ಸಿಗುವಂತೆ ಕ್ರಮ ವಹಿಸಬೇಕು. ತಕ್ಷಣವೇ ಇಂತಹ ಎಲ್ಲಾ ಬಡ ಸಾಗುದಾರರ ಜಮೀನನ್ನು ವಾಸ್ತವಿಕತೆಯ ಆಧಾರದಲ್ಲಿ ಸರ್ವೇ (ಗಣತಿ) ಮಾಡಲು ಕ್ರಮವಹಿಸಿ, ಆರ್‌ಟಿಸಿಗಳಲ್ಲಿ ವಾಸ್ತವ ಅಂಶಗಳನ್ನು ಸೇರ್ಪಡೆ ಮಾಡಬೇಕು. ಅರಣ್ಯ ಇಲಾಖೆಯವರು ದೌರ್ಜನ್ಯದಿಂದ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು ಮತ್ತು ರೈತರ ಮೇಲೆ ಹಾಕಲಾದ ಕೇಸುಗಳನ್ನು ವಾಪಾಸು ಪಡೆಯಬೇಕು. ಜಂಟಿ ಗಣತಿಯಲ್ಲಿ ಈ ಸಾಗುದಾರರ ಹೆಸರುಗಳನ್ನು ಪರಿಗಣಿಸಬೇಕು. ಎಲ್ಲಾ ಬಡವರಿಗೆ ಮನೆ ನಿವೇಶನಕ್ಕೆ ತಲಾ 05 ಗುಂಟೆ ಅಥವಾ 12ಸೆಂಟ್ ನಿವೇಶನವನ್ನು ಒದಗಿಸಬೇಕು ಮತ್ತು ಶೇ. 75 ಸಬ್ಸಿಡಿ ಇರುವ ಉಳಿದುದಕ್ಕೆ ಬಡ್ಡಿ ಇಲ್ಲದ ಸಾಲದ 03 ಲಕ್ಷ ರೂ.ಗಳ ಮನೆಯನ್ನು ಕಟ್ಟಿಸಿ ಕೊಡಬೇಕು. ನಗರವೂ ಸೇರಿದಂತೆ ಎಲ್ಲಾ ಪ್ರದೇಶದಲ್ಲಿ ಸರ್ಕಾರಿ ಜಮೀನಿನಲ್ಲಿ ಗುಡಿಸಲು ಹಾಗೂ ಮನೆ ಕಟ್ಟಿಕೊಂಡವರಿಗೆ ಹಕ್ಕುಪತ್ರ ಕೊಡಬೇಕು. ಅದೇ ರೀತಿ, ಪರಿಸರ ಸ್ನೇಹಿ ಅಭಿವೃದ್ದಿಗೆ ವಿರುದ್ದವಾಗಿರುವ ಕಸ್ತೂರಿ ರಂಗನ್ ವರದಿಯನ್ನು ಪರಿಸರ ಸ್ನೇಹಿ ಅಭಿವೃದ್ದಿಗೆ ಪೂರಕವಾಗಿ ತಿದ್ದುಪಡಿ ಮಾಡಬೇಕು. ಅದನ್ನು ತಿದ್ದುಪಡಿ ಮಾಡದೇ ಜಾರಿಗೆ ತರಬಾರದು. ಗೇಣಿ ನಿರತ ಬಡರೈತರು ಹಾಗೂ ಕೂಲಿಕಾರರನ್ನು ನೊಂದಾಯಿಸಲು ಕ್ರಮ ವಹಿಸಬೇಕು. ರಾಜ್ಯಾದ್ಯಂತ ಅಕ್ರಮ ಭೂ ಬೆಲೆಗೆ ದೌರ್ಜನ್ಯದಿಂದ ಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ, ಹೊಸ ಭೂ ಸ್ವಾಧೀನ ಕಾಯ್ದೆಯಂತೆ ಬೆಲೆ ನಿಗದಿಸಿ ರೈತರಿಗೆ ನ್ಯಾಯ ಒದಗಿಸಬೇಕು.



ಭೂ ಸಂತ್ರಸ್ಥರಾದ ಪ್ರತಿ ಕುಟುಂಬಕ್ಕೂ ಉದ್ಯೋಗ ಸಿಗುವಂತೆ, ಭೂಸುಧಾರಣಾ ಕಾನೂನಿನಂತೆ ಕುಟುಂಬಗಳನ್ನು ಗುರುತಿಸಿ ಉದ್ಯೋಗ ಒದಗಿಸಲು ಕ್ರಮವಹಿಸಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಡಿಸೆಂಬರ್ 08, 2014 ರಂದು ಹಾಸನದ ಜಿಲ್ಲಾಧಿಕಾರಿ ಕಛೇರಿ ಎದುರು ಬಡ ಬಗರ್‌ಹುಕುಂ ಸಾಗುವಳಿದಾರರು ಹೋರಾಟ ನಡೆಸಿದರು.

ಪ್ರತಿಭಟನೆಯ ಭಾಗವಾಗಿ ಹಾಸನ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಹಾಸನ ಜಿಲ್ಲೆಯಾದ್ಯಂತ ಸಾವಿರಾರು ಬಗರ್ ಹುಕುಂ ಅರ್ಜಿಗಳು ನೆನಗುದಿಗೆ ಬಿದ್ದಿದ್ದು ಈ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಬೇಕು, ಸಕಾರಣ ನೀಡದೇ ತಿರಸ್ಕರಿಸಲ್ಪಟ್ಟಿರುವ ಅರ್ಜಿಗಳನ್ನು ಪುನರ್ ಪರಿಶೀಲಿಸಬೇಕು, ಇದುವರೆಗೂ ಅರ್ಜಿ ಸಲ್ಲಿಸದಿರುವವರಿಗೆ ಹೊಸದಾಗಿ ಸಕ್ರಮೀಕರಣಕ್ಕೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಮಾಡಿಕೊಡಬೇಕು. ಮತ್ತು ಈಗಾಗಲೇ ಸಕ್ರಮೀಕರಣ ಸಮಿತಿಯಿಂದ ಒಪ್ಪಿಗೆ ಪಡೆದು ಹಕ್ಕುಪತ್ರವನ್ನು ಪಡೆದಿರುವ ಜಮೀನುಗಳಿಗೆ ಕೂಡಲೇ ಸರ್ವೇ ಮಾಡಿಸಿ ಪಕ್ಕಾಪೋಡ್ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು ಆಗ್ರಹಿಸಿದರು.

ಸಕಲೇಶಪುರ ತಾಲ್ಲೂಕಿನಲ್ಲಿ ದಲಿತ ಬಡ ಸಾಗುವಳಿದಾರರಿಂದ ಭೂಮಿಯನ್ನು ಕಿತ್ತು ಜೀತವಿಮುಕ್ತರಿಗೆ ಭೂಮಿಯನ್ನು ನೀಡುವ ಮೂಲಕ ಸಾಗುವಳಿದಾರರನ್ನು ಜೀತಗಾರರನ್ನಾಗಿ ಮಾಡಲು ಹೊರಟಿದೆ. ಇಂತಹ ಪ್ರಕರಣಗಳನ್ನು ಪುನರ್ ಪರಿಶೀಲಿಸಿ ಸಾಗುವಳಿಯಾಗದೇ ಇರುವ ಇತರೆ ಸರ್ಕಾರಿ ಭೂಮಿಯನ್ನು ಜೀತವಿಮುಕ್ತರಿಗೆ ಮತ್ತು ಮುಳುಗಡೆ ಹೊಂದಿದವರಿಗೆ ನೀಡಬೇಕೆಂದೂ ಈ ಮೇಲಿನ ಎಲ್ಲ ಬೇಡಿಕೆಗಳನ್ನು ಈಡೇರಿಸದಿದ್ದರೆ ಕರ್ನಾಟಕ ಪ್ರಾಂತ ರೈತ ಸಂಘದಿಂದ ತೀವ್ರ ಹೋರಾಟ ನಡೆಸಲಾಗುವುದೆಂದು ರಾಜ್ಯ ಸರ್ಕಾರ-ಕ್ಕೆ ಎಚ್ಚರಿಕೆ ನೀಡಿದರು. ನಂಜೇಗೌಡ, ಪ್ರಕಾಶ್, ಎಚ್.ಆರ್.ನವೀನ್‌ಕುಮಾರ್ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ●

ಯೋಜನಾ ಆಯೋಗದ ವಿಯೋಜನೆ..........

ಪುಟ 7 ರಿಂದ

ಮತ್ತು ನವ-ಉದಾರವಾದಿ ದಾಳಿಯ ಪ್ರಸಕ್ತ ಘಟ್ಟದಲ್ಲಿ ನಮ್ಮ ಆರ್ಥಿಕ ಸಾರ್ವಭೌಮತೆಯನ್ನು ತಮ್ಮ ಅಡಿಯಾಳಾಗಿಸುವ ಸಾಮ್ರಾಜ್ಯಶಾಹಿಯ ಪ್ರಯತ್ನಗಳ ವಿರುದ್ಧ ನಮ್ಮ ಪ್ರಯತ್ನಗಳಲ್ಲಿ ಒಂದು ಪ್ರಮುಖ ಸ್ತಂಭವಾಗಿಯೇ ಮುಂದುವರೆದಿದೆ ಎಂಬ ಸಂಗತಿಯಿಂದಾಗಿ.

ಸ್ವಾತಂತ್ರ್ಯ ಸಿಕ್ಕ ಹೊಸದರಲ್ಲಿ ಎಲ್ಲ ಪಾಶ್ಚಿಮಾತ್ಯ ಶಕ್ತಿಗಳು ಭಾರತ ತನ್ನ ಆರ್ಥಿಕ ಮೂಲರಚನೆಯನ್ನು ಕಟ್ಟುವಲ್ಲಿ ನೆರವಾಗಲು ನಿರಾಕರಿಸಿದಾಗ, ಆಗಿನ ಸೋವಿಯೆತ್ ಒಕ್ಕೂಟ ತನ್ನ ಬೇಷರತ್ ಉದಾರ ನೆರವಿನೊಂದಿಗೆ ಭಾರತ ತನ್ನ ಆರ್ಥಿಕ ಮೂಲರಚನೆಯ ಬುನಾದಿಯನ್ನು ನಿರ್ಮಿಸಲು ಸಹಾಯ ಮಾಡಿತು. ಆ ಮೂಲರಚನೆ ಇಂದು ಎಷ್ಟೇ ಅಸಮರ್ಪಕ ಎಂದೆನಿಸಿದರೂ, ನಮ್ಮ ದೇಶದಲ್ಲಿ ಬಂಡವಾಳಶಾಹಿ ಅಭಿವೃದ್ಧಿ ಸಂಭವಿಸಿದ್ದು ಅದರ ಆಧಾರದ ಮೇಲೆಯೇ.

ಅದೇನೇ ಇರಲಿ, ಪ್ರಮುಖ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಎಲ್ಲೆಲ್ಲಿ ನೆಲೆಗೊಳಿಸಬೇಕು ಎಂಬುದರಲ್ಲಿ ಯೋಜನಾ ಆಯೋಗದ ಪಾತ್ರ(ಅವು ಎಲ್ಲೆಲ್ಲಿ ಸ್ಥಾಪನೆಯಾದವು ಎಂಬುದನ್ನು ಗಮನಿಸಿ) ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳನ್ನು ಸಮಗ್ರೀಕರಿಸುವಲ್ಲಿ ಮತ್ತು ಒಂದು ಮಟ್ಟದ ವರೆಗೆ ಪ್ರಾದೇಶಿಕ ಆರ್ಥಿಕ ಅಸಮತೋಲಗಳನ್ನು ತಗ್ಗಿಸುವಲ್ಲಿ ನೆರವಾಯಿತು. ಮಹತ್ವದ ಸಂಗತಿಯೆಂದರೆ, ಉದ್ಯೋಗದಲ್ಲಿ ಮೀಸಲಾತಿಯ ಮೂಲಕ, ಎಷ್ಟೇ ಸೀಮಿತವಾಗಿಯಾದರೂ ಸಾಮಾಜಿಕ ನ್ಯಾಯ ಒದಗಿಸುವ ಪ್ರಕ್ರಿಯೆಯಲ್ಲಿ ಸಾರ್ವಜನಿಕ ವಲಯ ಪ್ರಧಾನ ಕೊಡುಗೆ ನೀಡಿದೆ. ಈ ಸೀಮಿತ ನ್ಯಾಯವನ್ನು ಕೂಡ ವ್ಯಾಪಕ ಪ್ರಮಾಣದ ಖಾಸಗೀಕರಣದ ಮೂಲಕ ನಿರಾಕರಿಸಲಾಗುತ್ತಿದೆ, ಏಕೆಂದರೆ ಈ ಖಾಸಗೀಕರಣ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳಿಗೆ ಸಂವಿಧಾನ ನೀಡಿರುವ ಮೀಸಲಾತಿಯ ಖಾತ್ರಿಯನ್ನೂ ಕೂಡ ಕೊಡುವುದಿಲ್ಲ.

ಗರಿಷ್ಟ ಲಾಭಗಳಷ್ಟೇ ಗುರಿ

ಒಂದೊಮ್ಮೆ ನಮ್ಮ ದೇಶದಲ್ಲಿ ಯೋಜನಾ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಿದ ಆಳುವ ವರ್ಗಗಳೇ ಇಂದು ಅದನ್ನು ಕಳಚಿ ಹಾಕುವ ರಾಗಾಲಾಪನೆಯ ನೇತೃತ್ವವನ್ನು ವಹಿಸಿವೆ. ಇವರೆಡೂ ನಡೆದಿರುವುದು ನಿರ್ದಿಷ್ಟ ಚಾರಿತ್ರಿಕ ಸಂದರ್ಭಗಳಲ್ಲಿ, ಗರಿಷ್ಟ ಲಾಭ ಗಳಿಸುವ ಅವರ ಹಿತಾಸಕ್ತಿಗಳ ಈಡೇರಿಕೆಗಾಗಿ.

ಇಂದು ಜಾಗತೀಕರಣ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಾಬಲ್ಯ ಬೆಳೆದಿರುವಾಗ ಅದರ ಅಡಿಯಾಳು ಮಿತ್ರನಾದರೆ ತನಗೆ ಗರಿಷ್ಟ ಲಾಭ ಗಳಿಸುವ ಅವಕಾಶ ಇದೆ ಎಂದು ಭಾರತೀಯ ಬಂಡವಾಳಿಗ ವರ್ಗಕ್ಕೆ ಕಾಣುತ್ತಿದೆ. ಆದ್ದರಿಂದಲೇ ಅಂತರ್ರಾಷ್ಟ್ರೀಯ ಬಂಡವಾಳಕ್ಕೆ ಭಾರತೀಯ ಆರ್ಥಿಕವನ್ನು ತೆರೆಯಲು, ನಮ್ಮ ಮಾರುಕಟ್ಟೆಗಳನ್ನು, ಸಂಪನ್ಮೂಲಗಳನ್ನು ಲಭ್ಯಗೊಳಿಸಲು ಖಾಸಗೀಕರಣ ಮತ್ತು ಉದಾರೀಕರಣವನ್ನು ಭರದಿಂದ ನಡೆಸಲಾಗುತ್ತಿದೆ.

ಇದು ನಮ್ಮ ವಿಶಾಲ ಜನಸಮೂಹಗಳ ಬದುಕಿನ ಮಟ್ಟಕ್ಕೆ ಗಂಡಾಂತರ ತರುತ್ತಿದೆ. ಈ ಮೂಲಕ ಅವರು ಆರ್ಥಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಧ್ಯೇಯೋದ್ದೇಶಗಳಿಗೆ ತಿಲಾಂಜಲಿ ನೀಡುತ್ತಿದ್ದಾರೆ. ದೇಶದಲ್ಲಿ ಪ್ರಾದೇಶಿಕ ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸುವ ಧ್ಯೇಯಕ್ಕೂ ಅವರು ತಿಲಾಂಜಲಿ ನೀಡುತ್ತಿದ್ದಾರೆ. ಇದು ತಾವು 'ಹಿಂದುಳಿದಿದ್ದೇವೆ' ಎಂದು ಪರಿಗಣಿಸುವ ಪ್ರದೇಶಗಳು ಈಗಿರುವ ರಾಜ್ಯಗಳಿಂದ ಪ್ರತ್ಯೇಕಗೊಳ್ಳಬೇಕೆಂಬ ಬೇಡಿಕೆಗಳು ಹೆಚ್ಚುವ ಅಪಾಯವನ್ನು ಸೃಷ್ಟಿಸಿದೆ. ಇಂತಹ ಹೆಚ್ಚೆಚ್ಚು ಧ್ರುವೀಕರಣದ ಸನ್ನಿವೇಶ ಡಾ.ಅಂಬೇಡ್ಕರ್‌ರವರ ಎಚ್ಚರಿಕೆಯನ್ನು ಇಂದು ಇನ್ನೂ ಹೆಚ್ಚು ಪ್ರಸ್ತುತಗೊಳಿಸಿದೆ.

ಹೊಸ ಸಂಸ್ಥೆಯ ಕಲ್ಪನೆಯೇ ಇಲ್ಲವೇಕೆ?

ಯೋಜನಾ ಆಯೋಗವನ್ನು ಕಳಚಿ ಹಾಕುವಾಗ ಆರೆಸ್ಸೆಸ್/ ಬಿಜೆಪಿಗೆ ಇಂತಹ ದುಷ್ಪರಿಣಾಮಗಳ ಬಗ್ಗೆ ಕಾಳಜಿಯೇ ಇಲ್ಲ. ಏಕೆಂದರೆ, ಅವರಿಗೆ ಬೇಕಾಗಿರುವುದು ಭಾರತದ ಸಾಮಾಜಿಕ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಅವರ ಕಣ್ಣೋಟದ ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಗುರಿಸಾಧನೆ ಮಾತ್ರ. ಅದ್ದರಿಂದಲೇ ಯೋಜನಾ ಆಯೋಗದ ಜಾಗದಲ್ಲಿ ಯಾವುದೇ ಒಂದು ಪರ್ಯಾಯ ಸಾಂಸ್ಥಿಕ ವ್ಯವಸ್ಥೆಯನ್ನು ಅವರು ಸೂಚಿಸಿಲ್ಲ ಎಂಬುದು ಆಶ್ಚರ್ಯ ಉಂಟುಮಾಡುವುದಿಲ್ಲ. "ಮುಂದಿರುವ ದಾರಿ" ಎಂದರೆ "ಭಾರತವನ್ನು ಪರಿವರ್ತಿಸುವುದು: ಅಭಿವೃದ್ಧಿ ಅಜೆಂಡಾದ ಮರುಕಲ್ಪನೆ" ಎನ್ನುತ್ತಾರೆ ಪ್ರಧಾನ ಮಂತ್ರಿಗಳು. ಏನದು ಹೊಸ ಸಂಸ್ಥೆ, ಅದರ ಗುರಿಗಳೇನು ಮತ್ತು ಕೆಲಸಗಳೇನು ಅಥವ ಅದು ಹೇಗೆ ಕೆಲಸ ಮಾಡುತ್ತದೆ ಎಂಬುದರ ಸ್ಪಷ್ಟ ಕಲ್ಪನೆಯೇ ಇಲ್ಲ.

ಆದರೆ ರಾಜ್ಯಗಳ ವಿಷಯದಲ್ಲಿ ಹೇಳುವುದಾದರೆ, 'ಟೀಮ್ ಇಂಡಿಯಾ', "ಕೇಂದ್ರ ಮತ್ತು ರಾಜ್ಯಗಳ ಸಮಾನ ಭಾಗೀದಾರಿಕೆ", "ಒಕ್ಕೂಟ ತತ್ವವನ್ನು ಬಲಪಡಿಸುವುದು" ಇತ್ಯಾದಿ ಆಡಂಬರದ ಮಾತುಗಳೇನೇ ಇದ್ದರೂ, ಪ್ರಧಾನ ಮಂತ್ರಿಗಳು ಮುಖ್ಯಮಂತ್ರಿಗಳಿಗೆ ಕಂಪ್ಯೂಟರ್ ಪರದೆಯ ಮೇಲೆ ತೋರಿಸಿದ 'ಪವರ್ ಪಾಯಿಂಟ್' ಪ್ರಸ್ತುತಿ ನಿಜಬಣ್ಣವನ್ನು ಬಯಲು ಮಾಡಿದೆ. ಭವಿಷ್ಯದಲ್ಲಿ ಕೇಂದ್ರ ದಿಂದ ರಾಜ್ಯಗಳಿಗೆ ಕೊಡಬೇಕಾದ ಎಲ್ಲ ನಿಧಿಗಳೂ ಕೇಂದ್ರ ಇಲಾಖೆಗಳ ಮೂಲಕ ಹರಿದು ಬರಬೇಕು, ಆಮೂಲಕ ರಾಜ್ಯಗಳು ಕೇವಲ ಕೇಂದ್ರದ ಅವಲಂಬಿಗಳ ಮಟ್ಟಕ್ಕೆ, ತೊತ್ತು ರಾಜ್ಯಗಳ ಮಟ್ಟಕ್ಕೆ ಇಳಿಯುತ್ತವೆ. ಕೇಂದ್ರದ ಮೇಲೆ ಇಷ್ಟೊಂದು ವಿಪರೀತ ಅವಲಂಬನೆ ಒಂದು ಕೇಂದ್ರೀಕೃತ ಏಕಘಟಕ ಪ್ರಭುತ್ವ ರಚನೆಯತ್ತ ಸಾಗುವ ಸ್ಪಷ್ಟ ಪ್ರದರ್ಶನವಾಗಿದೆ. ಇದು ನಮ್ಮ ಸಂವಿಧಾನದ ಕಾರ್ಯಯೋಜನೆಗೆ ಮತ್ತು ಅದರ ಒಕ್ಕೂಟ ರಚನೆಗೆ ತದ್ವಿರುದ್ಧವಾದ ಸಂಗತಿ.

ಇಂತಹ ಒಂದು ಏಕಘಟಕ ರಚನೆ ನಮ್ಮ ಗಣ-ತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬುಡಮೇಲು ಮಾಡಿ ಆರೆಸ್ಸೆಸ್‌ನ 'ಹಿಂದುರಾಷ್ಟ್ರ' ಆವೃತ್ತಿಯತ್ತ ಮುನ್ನಡೆಯಲು ಅನುಕೂಲ ಕಲ್ಪಿಸಿ ಕೊಡುತ್ತದೆ. ಅಲ್ಲಿ ಕೇಂದ್ರ -ರಾಜ್ಯ ಸಂಬಂಧಗಳನ್ನು ರಾಜ್ಯಗಳ ಪರವಾಗಿ ಉತ್ತಮಗೊಳಿಸುವ ಬದಲು ತದ್ವಿರುದ್ಧವಾದದ್ದೇ ಅದರ ಗುರಿಯಾಗಿರುತ್ತದೆ, ಫಲಿತಾಂಶವೂ ಅದೇ ಆಗಿರುತ್ತದೆ. ಆದ್ದ-ರಿಂದ ಯೋಜನಾ ಆಯೋಗವನ್ನು ಕಳಚಿ ಹಾಕುವುದು ಕೇವಲ ಆರ್ಥಿಕ ರಂಗಕ್ಕಷ್ಟೇ ಸೀಮಿತವಾದ ಸಂಗತಿಯಲ್ಲ. ಅದು ಭಾರತೀಯ ಗಣತಂತ್ರವನ್ನು ಪರಿವರ್ತಿಸುವ ರಾಜಕೀಯ ಅಪಾಯವನ್ನು ತುಂಬಿ ಕೊಂಡಿದೆ. ಮೋದಿ ಸರಕಾರದ ಈ ಕ್ರಮ ಡಾ.ಅಂಬೇಡ್ಕರ್ ಅವರ ಎಚ್ಚರಿಕೆಗೆ ಲಕ್ಷ್ಯಗೊಡುವುದಂತೂ ದೂರದ ಮಾತು, ತದ್ವಿರುದ್ಧವಾಗಿ ಸಾಮಾಜಿಕ-ಆರ್ಥಿಕ ಭೇದಭಾವಗಳನ್ನು ಇನ್ನಷ್ಟು ಅಪಾಯಕಾರಕವಾಗಿ ಉಲ್ಬಣಗೊಳಿಸುತ್ತದೆ.

ನಮ್ಮ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸಬೇಕಾದರೆ, ಭಾರತೀಯ ಗಣತಂತ್ರವನ್ನು ಕಾಪಾಡಿಕೊಂಡು ಬಲಗೊಳಿಸಬೇಕು, ಅದಕ್ಕಾಗಿ ಇಂತಹ ದುಷ್ಟ ತಂತ್ರಗಳ ವಿರುದ್ಧ ಜನತಾ ಹೋರಾಟಗಳನ್ನು ಬಲಪಡಿಸಬೇಕಾಗಿದೆ. ●

ಈಗ 'ಕಾನೂನುಬಾಹಿರ' ಶುದ್ಧೀಕರಣದ ಸರದಿ !

ಪುಟ 13 ದಿಂದ

ಕೂರಿಸಿ ಪ್ರಾರ್ಥನೆಗಳನ್ನು ನಡೆಸಿದರು ಎಂದು ಇನ್ನೊಬ್ಬರು ಹೇಳಿದರು. ನಮಗೆ ಸರ್ಕಾರದ ಎಲ್ಲ ಸೌಲಭ್ಯಗಳನ್ನು ವಾಸಕ್ಕೆ ಮನೆ ಕೊಡಿಸಲಾಗುವುದು ಎಂದರು, ನಂತರ ನಮ್ಮ ಫೋಟೋ ತೆಗೆಯುವಾಗ ನನಗೆ ಭಯವಾಯುತು, ಅಲ್ಲಿಂದ ತಪ್ಪಿಸಿಕೊಂಡೆ ಎಂದರು ಇನ್ನೊಬ್ಬರು.

ಇನ್ನೊಬ್ಬಾಕೆ 76 ವರ್ಷದ ಮುದುಕಿ, 'ಶುದ್ಧೀಕರಣ' ಗೊಂಡವರಲ್ಲಿ ಅತ್ಯಂತ ಹೆಚ್ಚು ವಯಸ್ಸಾದವಳು, "ನಾನು ಇದುವರೆಗೆ ದಿನಕ್ಕೆ ಐದು ಸಲ ನಮಾಜು ಓದುತ್ತಿದ್ದೆ, ಈಗ ಗಣೇಶ ಆರತಿ ಓದುತ್ತೇನೆ. ಎರಡು ಧರ್ಮಗಳು ಹೇಳುವುದರಲ್ಲಿ ನನಗೇನೂ ವ್ಯತ್ಯಾಸ ಕಾಣುವುದಿಲ್ಲ. ಅವರು ನಮಗೆ ವಾಸಕ್ಕೆ ಒಳ್ಳೆಯ ಸ್ಥಳ, ಊಟ ಕೊಡಿಸುತ್ತೇವೆ ಎಂದರು, ನನ್ನ ಮೊಮ್ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುತ್ತೇವೆ ಎಂದರು, ಅದಕ್ಕಾಗಿ ಮತಾಂತರ ವಾದೆ, ಅದರಲ್ಲೇನು, ಧರ್ಮವೇನೂ ನಮಗೆ ತಿನ್ನಲು ಊಟ ಕೊಡುವುದಿಲ್ಲ" ಎಂದಿದ್ದಾಳೆ ಎಂದು ವರದಿಯಾಗಿದೆ.

17 ವರ್ಷಗಳ ಹಿಂದೆ ಪಶ್ಚಿಮ ಬಂಗಾಲದ ಮತ್ತೊಂದು ಹಳ್ಳಿಯಿಂದ ಮತ್ತೊಬ್ಬ ವ್ಯಕ್ತಿ "ಅವರು ಕೊಡುತ್ತೇವೆಂದ ಸೌಲಭ್ಯಗಳಿಗೆ ಆಕರ್ಷಿತರಾಗಿ ನಾವು ಅವರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಷ್ಟೇ, ಕಾಳಿಯ ಫೋಟೋ ಹಿಡಿದುಕೊಂಡು ಫೋಟೋ ತೆಗೆಸಿದರೆ ಇವೆಲ್ಲ ಸೌಲಭ್ಯಗಳು ಸಿಗುತ್ತವೆ ಎಂದರು, ನನ್ನನ್ನು ಮತಾಂತರ ಮಾಡುತ್ತಿದ್ದಾರೆ ಎಂದು ನನಗೆ ತಿಳಿಯಲಿಲ್ಲ, ನಾನೇನು ಮತಾಂತರ ಹೊಂದಿಲ್ಲ, ಇನ್ನೂ ಅಲ್ಲಾನನ್ನು ನಂಬುತ್ತೇನೆ. ನಮಗೆ ಎಂದೂ ಹಿಂದುಗಳೊಂದಿಗೆ ಮತಭೇದವಿರಲಿಲ್ಲ. ನಾವೇನೂ ಕಸಹೆಕ್ಕುವ ಹಿಂದೂಗಳಿಗಿಂತ ನಾವು ಬೇರೆ ಎಂದು ಕಂಡೇ ಇಲ್ಲ" ಎಂದಿದ್ದಾನೆ ಆತ.

ನಂತರ 350 ಬಂಗಾಲಿ ಮುಸ್ಲಿಮರ 'ಶುದ್ಧೀಕರಣ' ಮಾಡಿದ್ದೇವೆ ಎಂದು ಭಜರಂಗ ದಳದ ಉತ್ತರ ಪ್ರದೇಶ ಸಹ–ಸಂಯೋಜಕರ ಹೇಳಿಕೆ ನೋಡಿದಾಗಲೇ ಅವರಿಗೆ ಅರಿವಾದದ್ದು. ಈಗ ಆತನ ಸ್ಥಳೀಯ ಸಹಯೋಗಿ ಕಿಶೋರ್ ವಾಲ್ಮೀಕಿ ಎಂಬಾತನ ಮೇಲೆ ವಂಚನೆ ಮತ್ತು ಶಾಂತಿ ಕದಡಿದ ಕೇಸು ದಾಖಲಾಗಿದೆ.

ಕಸ ಹೆಕ್ಕುವ ಕಾಯಕದಲ್ಲಿ ತೊಡಗಿರುವ ಈ ಬಂಗಾಲಿ ಮುಸ್ಲಿಂ ವಲಸಿಗರು ದುರ್ಗಾಪೂಜೆಯ ಸಂದರ್ಭದಲ್ಲಿ ಕಾಳಿಪೂಜೆ ಮಾಡುತ್ತಾರೆ, ಅವರ ಪೂರ್ವಜರು ಹಿಂದುಗಳು, ತಾವು ಹಿಂದೂ ಧರ್ಮಕ್ಕೆ ಮರಳಲು ಇಚ್ಛಿಸಿದರು, ಅದಕ್ಕಾಗಿ ಅವರ 'ಶುದ್ಧೀಕರಣ' ಮಾಡಿದೆವು ಎಂದು ಭಜರಂಗ ದಳದ ಈ ಸಹ–ಸಂಯೋಜಕ ಮಾಧ್ಯಮಗಳಿಗೆ ಹೇಳಿದ್ದಾರೆ.

"ಅವರು ಈ ಪ್ರದೇಶಕ್ಕೆ ಅಪಖ್ಯಾತಿ ತಂದಿದ್ದಾರೆ, ಮತ್ತೆ ಇಸ್ಲಾಮಿಗೆ ಮರಳಿದರೆ ಅವರನ್ನು ಇಲ್ಲಿಂದ ಓಡಿಸಲಾಗುವುದು" ಎಂದು ಒಬ್ಬ ಮಧ್ಯಮ ವರ್ಗದ ಸ್ಥಳೀಯ ಯುವಕ ಹೇಳಿದ್ದಾನೆ. ಆತನ ಕುಟುಂಬವೂ ಬೇರೆಡೆಯಿಂದಲೇ ಬಂದು ಇಲ್ಲಿ ಮನೆಕಟ್ಟಿಕೊಂಡಿರುವಂತದ್ದು ಎಂಬುದು ಗಮನಾರ್ಹ.

ಆರೆಸ್ಸೆಸ್‌ನ ಪ್ರಾದೇಶಿಕ ಮುಖ್ಯಸ್ಥ ಮಾಧ್ಯಮಗಳಿಗೆ ಹೇಳಿದ ಪ್ರಕಾರ ಆತನ ಸಂಘಟನೆ ಪ್ರತಿತಿಂಗಳು 50ಲಕ್ಷ ರೂ. ಖರ್ಚು ಮಾಡುತ್ತದೆ, ಸರಾಸರಿಯಾಗಿ 1000 ಕುಟುಂಬಗಳ 'ಶುದ್ಧೀಕರಣ' ಮಾಡುತ್ತದೆ,(ಟಿಎನ್‌ಎನ್, ಡಿಸೆಂಬರ್9) ಆದರೂ ಇದು ಆಮಿಷಗಳಿಲ್ಲದ ಕ್ರಿಯೆ ಎನ್ನಲಾಗುತ್ತಿದೆ. ಈ ವರ್ಷ ಕ್ರಿಸ್‌ಮಸ್ ದಿನದಂದು 5000 ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನು ಹಿಂದೂ ಧರ್ಮಕ್ಕೆ ವಾಪಾಸು ತರಲಾಗುವುದು, ಇದರಲ್ಲಿ ಬಿಜೆಪಿ ಸಂಸದ ಯೋಗಿ ಆದಿತ್ಯನಾಥ ಭಾಗವಹಿಸುತ್ತಾರೆ ಎಂದೂ ತಿಳಿಸಿದ್ದಾರೆ.

ಈ ಹಿಂದೆ ಕ್ರಿಶ್ಚಿಯನ್ ಪಾದ್ರಿಗಳು ಬುಡಕಟ್ಟು ಜನಗಳಿಗೆ ಆಮಿಷಗಳನ್ನು ತೋರಿಸಿ 'ಕಾನೂನುಬಾಹಿರವಾಗಿ' ಮತಾಂತರ ಮಾಡುತ್ತಿದ್ದಾರೆ ಎಂದು ಇವರುಗಳೇ ಆಪಾದಿಸುತ್ತಿದ್ದರು. ಈಗ ಇವರ ಸರದಿ

ಸಂಸತ್ತಿನಲ್ಲಿ ಈ ಬಗ್ಗೆ ಗದ್ದಲವೆದ್ದಾಗ ಮೋದಿ ಸರಕಾರದ ಮಂತ್ರಿಗಳು ಕಾನೂನು ವ್ಯವಸ್ಥೆ ರಾಜ್ಯ–ಕ್ಕೆ ಸೇರಿದ ವಿಷಯ, ಈ ಬಗ್ಗೆ ಉತ್ತರಪ್ರದೇಶ ಸರಕಾರದಿಂದ ವರದಿ ಕೇಳಿದ್ದೇವೆ ಎಂದು ನುಣು–ಚಿಕೊಂಡರು, ಆದರೂ ಇದರಲ್ಲಿ ಆರೆಸ್ಸೆಸ್‌ನ ಹೆಸರು ತಂದದ್ದನ್ನು ಆಕ್ಷೇಪಿಸಲು ಮರೆಯಲಿಲ್ಲ! ಕಳೆದ ವಾರವಷ್ಟೇ ತಮ್ಮ ಸಂಪುಟದ ಮಂತ್ರಿಗಳೊಬ್ಬರು ತಾವು ಆಡಬಾರದ ಮಾತುಗಳಿಗೆ ಕ್ಷಮೆ ಕೇಳಿದ್ದಾರೆ, ಆದ್ದರಿಂದ ಅದನ್ನು ಅಲ್ಲಿಗೇ ಬಿಡಿ ಎಂದು ಪ್ರಧಾನಿಗಳು ಮನವಿ ಮಾಡಿದ ನಂತರ ಒಂದು ನಿರ್ಣಯ ಅಂಗೀಕರಿಸಿ ಅದನ್ನು ಮುಗಿಸಲಾಯಿತು. ಆ ನಿರ್ಣಯ ತಮ್ಮ ಸರಕಾರದ ಜೀವವುಳಿಸಿದರೂ, ಅದು ಪ್ರತಿಪಕ್ಷಗಳಿಗೆ ಮುಖವುಳಿಸಿದ ನಿರ್ಣಯ ಎಂದಿರುವ ಪ್ರಧಾನಿಗಳದ್ದು ಯಥಾಪ್ರಕಾರ ಮತ್ತೆ ದಿವ್ಯಮೌನ.

'ನಿರ್ಭಯ ನಿಧಿ' ಬಳಸುವ ಮೂರ್ತ ಯೋಜನೆ ಏಕಿಲ್ಲ? ಸಿಪಿಐ(ಎಂ) ಸಂಸದೆಯ ಪ್ರಶ್ನೆ

ದೇಶದ ರಾಜಧಾನಿಯಲ್ಲಿ ಮತ್ತೊಂದು ಅತ್ಯಾಚಾರದ ಘಟನೆ ಪ್ರಕಟವಾಗಿದೆ. ಉಬೆರ್ ಎಂಬ ವೆಬ್ ಆಧಾರಿತ ದೊಡ್ಡ ಟ್ಯಾಕ್ಸಿ ಕಂಪೆನಿಯ ಟ್ಯಾಕ್ಸಿಯೊಂದರಲ್ಲಿ ಮನೆಗೆ ಹೊರಟಿದ್ದ ಮಹಿಳಾ ಅಧಿಕಾರಿಯೊಬ್ಬರ ಮೇಲೆ ಟ್ಯಾಕ್ಸಿಯ ಡ್ರೈವರ್ ಅತ್ಯಾಚಾರ ನಡೆಸಿದ್ದಾನೆ. ಆತನೇನೋ ಪೋಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಈ ನಡುವೆ ಹಿಂದಿನ 'ನಿರ್ಭಯ' ಪ್ರಕರಣದಂತೆ ಈ ಬಾರಿಯೂ ಆಳುವ ಪಕ್ಷ ಮತ್ತು ಪ್ರಮುಖ ಪ್ರತಿಪಕ್ಷದ ನಡುವೆ ಕೆಸರು ಎರಚಾಟ ನಡೆದಿದೆ. ವ್ಯತ್ಯಾಸವೆಂದರೆ ಆಗ ಬಹಳಷ್ಟು ಗಲಭೆ ಎಬ್ಬಿಸಿದ ಪ್ರಮುಖ ಪ್ರತಿಪಕ್ಷ ಈಗ ಆಳುವ ಪಕ್ಷವಾಗಿದೆ.

ಹಿಂದಿನ ಸರಕಾರ ಆ ಭೀಕರ ಘಟನೆಯ ಹಿನ್ನೆಲೆಯಲ್ಲಿ ಆರಂಭಿಸಿದ್ದ 'ನಿರ್ಭಯ ನಿಧಿ'ಯನ್ನು ಬಳಸಿಕೊಳ್ಳಲೆ ಇಲ್ಲ ಎಂದು ಅಗ ಈ ಪ್ರತಿಪಕ್ಷ ಆಪಾದಿಸಿತ್ತು, ಆದರೆ ಅದೇ ಪಕ್ಷ ಈಗ ಆಳುವ ಪಕ್ಷವಾಗಿ ಆರು ತಿಂಗಳಾದರೂ ಆ ಬಗ್ಗೆ ಮೂರ್ತ ಯೋಜನೆಗಳು ಇನ್ನೂ ಇಲ್ಲ ಎಂಬುದು ಈಗ ಬೆಳಕಿಗೆ ಬಂದಿದೆ.

ಲಿಂಗ ಸಂವೇದಿ ಪೋಲಿಸ್ ವ್ಯವಸ್ಥೆ, ಅತ್ಯಾಚಾರಕ್ಕೆ ಒಳಗಾದವರಿಗೆ ಕಾನೂನು ಮತ್ತು ಲಿಂಗ ಸಂವೇದಿ ಆರೋಗ್ಯ ಸೇವೆಗಳನ್ನು ಒದಗಿಸುವುದರಲ್ಲಿ ಇರುವ ಕಂದರಗಳನ್ನು ಸರಿಪಡಿಸಲು ಈ ನಿಧಿಯನ್ನು ಬಳಸುವ ಬಗ್ಗೆ ಈಗಲೂ ಮೂರ್ತ ಯೋಜನೆಗಳಿಲ್ಲ ಎಂದು ಸಿಪಿಐ(ಎಂ) ಸಂಸದೆ ಟಿ.ಎನ್.ಸೀಮಾ ಹೇಳಿದ್ದಾರೆ.

ಅಷ್ಟು ಮಾತ್ರವೇ ಅಲ್ಲ, ಇಂತಹ ಅತ್ಯಾಚಾರ ಪ್ರಕರಣಗಳಲ್ಲಿ ಬದುಕುಳಿದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ, ಕಾನೂನು, ಪೋಲೀಸ್ ಮತ್ತು ಮಾನಸಿಕ ಬೆಂಬಲ ಒದಗಿಸುವ ಒಂದು ಪ್ರಾಜೆಕ್ಟನ್ನು ಆರಂಭಿಸುವ ವಿಚಾರವನ್ನು ಈಗ ರದ್ದು ಮಾಡಲಾಗಿದೆ ಎಂಬ ಮಾಧ್ಯಮ ವರದಿಗಳತ್ತವೂ ಸೀಮಾ ಅವರು ಗಮನ ಸೆಳೆದಿದ್ದಾರೆ.

ದಿಲ್ಲಿಯ ನಿರ್ಭಯ ಪ್ರಕರಣದ ನಂತರ ರಚಿಸಿದ ನ್ಯಾಯಮೂರ್ತಿ ವರ್ಮಾ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಇಂತಹ ಕೇಂದ್ರಗಳನ್ನು ರಚಿಸಬೇಕು ಎಂದು ಯೋಚಿಸಲಾಗಿತ್ತು.

ಅಸ್ಪೃಶ್ಯತೆ, ಜಾತಿ ತಾರತಮ್ಯ.....

ಪುಟ 9 ರಿಂದ

ಸಂಶೋಧನಾಕಾರರು ಇವರೆಲ್ಲರೂ ಕೂಡ ಜಾತಿ ವ್ಯವಸ್ಥೆಯ ಬೇರುಗಳ ಬಗೆಗೆ ಸಾಕಷ್ಟು ಆಳವಾಗಿ ಅಧ್ಯಯನ ನಡೆಸಿದ್ದಾರೆ. ಇನ್ನು ಲೋಹಿಯರವರು ಜಾತಿ ವ್ಯವಸ್ಥೆಯ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ ಆದರೆ ಅಧ್ಯಯನವಾಗಲಿ ಅಥವಾ ಮೂಲ ಬೇರುಗಳಿಗೆ ಕೈ ಹಾಕಲು ಹೋಗಲಿಲ್ಲ. ಜಾತಿವ್ಯವಸ್ಥೆಯನ್ನು ಹೋಗಲಾಡಿಸಬೇಕೆಂಬ ಇಚ್ಛೆ ಮಾತ್ರ ಅವರಿಗಿತ್ತು. ಮಾರ್ಕ್ಸ್‌ವಾದಿ ಇತಿಹಾಸಕಾರರನ್ನು ಹೊರತುಪಡಿಸಿದರೆ ಡಾ.ಬಿ.ಆರ್.ಅಂಬೇಡ್ಕರವರು ಹೆಚ್ಚು ಜಾತಿವ್ಯವಸ್ಥೆಯ ಕುರಿತು ಅಧ್ಯಯನ ಮಾಡಿದ್ದಾರೆ.

ಕಮ್ಯುನಿಸಂಅನ್ನು ಒಪ್ಪಿ ಮೊಟ್ಟ ಮೊದಲು ನಮ್ಮ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಯಾರು ಬೆಳೆಸಿದರೋ ಅವರೆಲ್ಲರೂ ಕೂಡ ಜಾತಿವ್ಯವಸ್ಥೆಯ ವಿರುದ್ಧ ಹೋರಾಟ ಮಾಡಿದವರೆ ಆಗಿರುತ್ತಾರೆ. ಎ.ಕೆ.ಜಿ, ಪಿ.ಸುಂದರಯ್ಯ, ಪಿ.ರಾಮಮೂರ್ತಿ ಇವರೆಲ್ಲರೂ ಕೂಡ ಜಾತಿ ವ್ಯವಸ್ಥೆಯ ವಿರುದ್ಧ ಸೆಣೆಸಾಟ ಮಾಡಿದ್ದಾರೆ. ಮೊಟ್ಟಮೊದಲು ಎ.ಕೆ.ಜಿ ಯವರು ಜೈಲಿಗೆ ಹೋಗಿದ್ದು ಜಾತಿವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ.

ವರ್ಗ ಹೋರಾಟದ ಜೊತೆ ಜೊತೆ–ಗೆ ಜಾತಿವ್ಯವಸ್ಥೆಯ ನಿರ್ಮೂಲನೆಗಾಗಿ ಸಮರಧೀರೋದ್ದಾತ ಹೋರಾಟವನ್ನು ಸಿಪಿಐ(ಎಂ) ಪಕ್ಷ ಮಾಡುತ್ತಿದೆ. ಮುಖ್ಯವಾಗಿ ಪ್ರಜಾಪ್ರಭುತ್ವ ಬಲಗೊಳ್ಳಬೇಕಾದರೆ ಅಸ್ಪೃಶ್ಯತೆ ಮತ್ತು ಜಾತಿವ್ಯವಸ್ಥೆ ನಾಶವಾಗಲೇಬೇಕು. ಇತ್ತೀಚೆಗೆ ದಲಿತ, ರೈತ ಚಳುವಳಿ ಸೇರಿದಂತೆ ಸಾಕಷ್ಟು ಚಳುವಳಿಗಳು ಎದ್ದು ಬರುತ್ತಿವೆ ಆದ–ರೆ ಸೈದ್ಧಾಂತಿಕ ಕೊರತೆಯಿಂದಾಗಿ ಚಳುವಳಿಗಳು ಮುಂದುವರೆಯಲು ಸಾಧ್ಯವಾಗುತ್ತಿಲ್ಲ. ಯಾವುದೇ ರೀತಿಯ ಚಳುವಳಿಗಳು ಪ್ರಾರಂಭವಾಗಲಿ ಅದರ ಜೊತೆಜೊತೆಯಲ್ಲೇ ಜಾತಿ ವ್ಯವಸ್ಥೆಯ ವಿರುದ್ಧವಾದ ಹೋರಾಟ ನಡೆಸಬೇಕಾಗಿದೆ. ಅಸ್ಪೃಶ್ಯತೆ ನಿವಾರಣೆಗಾಗಿ ಈಗಾಗಲೇ ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಸಾಕಷ್ಟ ದೊಡ್ಡ ಪ್ರಮಾಣದಲ್ಲಿ ಕ್ರಿಯಾಶೀಲವಾಗಿ ಕಮ್ಯುನಿಸ್ಟ್ ಪಕ್ಷಗಳ ಕಾರ್ಯಕರ್ತರು ಚಳುವಳಿಯನ್ನು ಮುನ್ನಡೆಸುತ್ತಿದ್ದಾರೆ ಎಂದು ಹೇಳಿದರು. ವಕೀಲರಾದ ಬಿ. ರಾಜಶೇಖರಮೂರ್ತಿ ನಿರೂಪಿಸಿದರು, ರಂಗಸ್ವಾಮಿ ಸ್ವಾಗತಿಸಿದರು, ಡಿ. ಮಾದೇಶ್ ವಂದಿಸಿದರು.

ಕವನ

ದೇಶವ ಮಾರಲು ಹೊರಟವರು

ದೇಶವ ಕೊಳ್ಳೆಯ ಹೊಡೆಯಲು ಇವರು
ತಾಮುಂದು ನಾಮುಂದು ಎನ್ನುವರು
ಅಧಿಕಾರ ದರ್ಪವ ತೋರಿಸಿ ಇವರು
ದೇಶವ ಮಾರಲು ಹೊರಟವರು

ಸಮಾನ ಶಿಕ್ಷಣ ಎನ್ನುವ ಇವರು
ಲಕ್ಷ ಲಕ್ಷವ ಕೇಳ್ತಾವ್ರೆ
ಯುವಕರ ರಾಷ್ಟ್ರ ಎನ್ನುವ ಇವರು
ಉದ್ಯೋಗ ನೀಡದೇ ನಿಲ್ಸವ್ರೆ

ಅನ್ನದಾತರು ಎನ್ನುವ ಇವರು
ರೈತರ ಒಕ್ಕಲು ಎಬ್ಬಿಸ್ತಾರೆ
ಕಾರ್ಮಿಕ ರಾಜ್ಯ ಎನ್ನುವ ಇವರು
ಅಂಬಾನಿ ಜೇಬಲಿ ಕುಳಿತವರೆ

ಜ್ಯಾತ್ಯಾತೀತತೆ ಅರಿಯದ ಇವರು
ಜಾತಿವಾದವ ಮಾಡ್ತಾವ್ರೆ
ದೇವರ ಹೆಸರಲ್ಲಿ ಗುಡಿಯಕಟ್ಟಲು
ದಲಿತರ ರೋಡಿಗೆ ತಂದವ್ರೆ

ಹಿಂದೂ ರಾಷ್ಟ್ರ ಎನ್ನುತಾ ಇವರು
ಕೋಮುವಾದವ ಬಿತ್ತುತಾವ್ರೆ
ಹೆಣ್ಣನ್ನು ಪೂಜಿಸು ಎನ್ನುವ ಇವರು
ಅತ್ಯಾಚಾರಕೆ ನಿಂತವ್ರೆ

ಮನೆಯನು ನಡೆಸಲು ಆಗದ ಇವರು
ದೇಶಕೆ ನಾಯಕರಾಗವ್ರೇ
ಸ್ವತಂತ್ರ ರಾಷ್ಟ್ರ ಎನ್ನುವ ಇವರು
ಪರಕೀಯರ ತಂದು ಬಿಡ್ತಾವ್ರೆ

ಮುಂದುವರಿಯುತಿದೆ ಎನ್ನುವ ಇವರು
ರಾಶಿ ಸಾಲವ ತೊರ್ಸವ್ರೆ
ಅಭಿವೃದ್ಧಿ ಹೆಸರಲ್ಲಿ ಬಂಡವಾಳಕೆ
ದೇಶವ ಮಾರಲು ಹೊರಟವ್ರೇ.

– ವೆಂಕಟೇಶ್. ಕೆ

ಪ್ರಜ್ಞಾಪೂರ್ವಕವಾದ 'ಯೋಜನೆ' ಅನಿವಾರ್ಯ'...........

ಪುಟ 12 ರಿಂದ

ಅನುಷ್ಠಾನದ ಸಲುವಾಗಿ ರಾಜ್ಯಗಳಿಗೆ ಕೊಡುತ್ತಿದ್ದ ತನ್ನ ಪಾಲಿನ ಹಣದಲ್ಲಿ ಭಾರಿ ಪ್ರಮಾಣದ ಕಡಿತಮಾಡುತ್ತಿದೆ. ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಗಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಅನುಷ್ಠಾನದ ವಿಷಯದಲ್ಲೂ ರಾಜ್ಯಗಳಿಗೆ ಕೊಡುತ್ತಿದ್ದ ತನ್ನ ಪಾಲಿನ ಹಣದಲ್ಲಿ ಭಾರಿ ಪ್ರಮಾಣದ ಕಡಿತ ಮಾಡಿದೆ. ಇದೊಂದು ಏಕಪಕ್ಷೀಯ, ನಿರಂಕುಶ ಮತ್ತು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ. ಅಲ್ಲದೆ ತ್ರಿಪುರಾದಂತಹ ಸಣ್ಣ ರಾಜ್ಯಗಳಿಗೆ ಇದು ಮಾರಕವಾಗಿದೆ. ಆದ್ದರಿಂದ, ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನವು ಆ ಕಾಯ್ದೆಯ ಮೂಲ ಆಶಯದಂತೆಯೇ ಇರಬೇಕೆಂಬುದು ನಮ್ಮ ಸಲಹೆ. ಯೋಜನೆಗಳಲ್ಲಿ ಮಾಡುವ ಯಾವುದೇ ಬದಲಾವಣೆಗಳಿಗೆ ರಾಜ್ಯಗಳ ಸಹಮತವೂ ಇರಬೇಕು. ಇದ್ದಕ್ಕಿದ್ದಂತೆ ಯೋಜನೆಗಳನ್ನು ವಿರೂಪಗೊಳಿಸ ದಂತೆ ನೋಡಿಕೊಳ್ಳಬೇಕು.

ಈಶಾನ್ಯ ರಾಜ್ಯಗಳ ಕೆಲವು ವಿಶಿಷ್ಟ ಸಮಸ್ಯೆಗಳು

ಈಶಾನ್ಯ ರಾಜ್ಯಗಳು ಆರ್ಥಿಕವಾಗಿ ಹಿಂದುಳಿದಿರುವ ಸಣ್ಣ ರಾಜ್ಯಗಳಾಗಿರುವುದರಿಂದ ಅವು ಕನಿಷ್ಠ ಪ್ರಮಾಣದ ಆಡಳಿತಾತ್ಮಕ ಖರ್ಚುಗಳನ್ನೂ ಮಾಡಲಾಗದ ಸ್ಥಿತಿಯಲ್ಲಿವೆ. ಕಣ್ಣಿಗೆ ರಾಚುವ ಪ್ರಾದೇಶಿಕ ಅಸಮತೆಗಳು ಇಲ್ಲಿವೆ. ಖಾಸಗಿ ಹೂಡಿಕೆ ಅತ್ಯಲ್ಪವಾಗಿದೆ. ಪ್ರಾದೇಶಿಕ ಅಸಮತೆಗಳ ದುರ್ಲಾಭ ಪಡೆಯುವವರಿದ್ದಾರೆ. ಆದ್ದರಿಂದ, ಸಾರ್ವಜನಿಕ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಬಿಟ್ಟು ಬೇರೆ ದಾರಿಯೇ ಇಲ್ಲ. ಹೊಸ ಯೋಜನಾ ವ್ಯವಸ್ಥೆಯು ಈ ನಿಟ್ಟಿನಲ್ಲಿ ಗಮನ ಹರಿಸಬೇಕು. ಹಾಲಿ ಇರುವ ಒಂದು ಏರ್ಪಾಡಿನಂತೆ ಕೇಂದ್ರ ಸರ್ಕಾರವು ಮೀಸಲಿಟ್ಟಿರುವ ಹಣದ ಬಳಕೆ ಕೆಲವು ಆಡಳಿತಾತ್ಮಕ ಕಾರಣಗಳಿಂದ ಸರಿಯಾಗಿ ಆಗುತ್ತಿಲ್ಲ. ಈ ಹಣದ 50% ಭಾಗವನ್ನು ನೇರವಾಗಿ ರಾಜ್ಯಗಳಿಗೆ ಬಿಡುಗಡೆ ಮಾಡಿದರೆ ಈ ರಾಜ್ಯಗಳು ತಮ್ಮ ಕೆಲವು ವಿಶಿಷ್ಟ ಸಮಸೆಗಳನ್ನು ನಿವಾರಿಸಿಕೊಳ್ಳಬಹುದು.

JANASHAKTHI KANNADA VARA PATRIKE DEC 21, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283



ಕೇರಳದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ 8ನೇ ರಾಷ್ಟ್ರೀಯ ಸಮ್ಮೇಳನ

ಕೇರಳ ರಾಜ್ಯದ ಕೊಝಿಕೋಡ ನಗರವು ಜನಪರ ಚಳುವಳಿಯ ಇತಿಹಾಸ ಹೊಂದಿದೆ 1930 ರಲ್ಲಿಯೇ ಬಲಿಷ್ಠ ಕಮ್ಯುನಿಸ್ಟ್ ಚಳುವಳಿ ಕಟ್ಟಿದ ಪಿ. ಕೃಷ್ಣ ಮೇನನ್ ಇ.ಎಂ.ಎಸ್ ಮತ್ತು ಎ.ಕೆ ಗೋಪಾಲನ್ ರವರನ್ನು ಸ್ಮರಿಸದಿದ್ದರೆ ಕೇರಳಾ ರಾಜ್ಯ ಮತ್ತು ದೇಶದ ಕಮ್ಯುನಿಸ್ಟ್ ಚಳುವಳಿಯ ಇತಿಹಾಸ ಪೂರ್ಣವಾಗಲಾರದು. ಕೊಝಿಕೋಡ ಕಮ್ಯುನಿಸ್ಟ ಚಳುವಳಿಯ ನೆಲೆ ಮತ್ತು ಶಾಲೆಯಾಗಿದೆ. ಈ ನೆಲದಲ್ಲಿ ದೇಶದ ಕಟ್ಟಡ ಕಾರ್ಮಿಕರ ಫೆಡರೇಷನನ್ನಿನ 8 ನೇ ಸಮ್ಮೇಳನವನ್ನು 5 ರಿಂದ 7 ನವೆಂಬರ್ 2014 ರವರೆಗೆ ಕೊಝಿಕೋಡ ಸಂಗಾತಿಗಳು ಯಶಸ್ವಿಯಾಗಿ ನಡೆಸಿಕೊಟ್ಟರು.

ನವೆಂಬರ್ 5 ರಂದು ಕೋಝೀಕೋಡ್‌ನ ಡಾ: ಎಂ.ಕೆ. ಪಂಥೆ ನಗರದ ಸಿ, ಕಣ್ಣನ್ ಹಾಗೂ ಪ್ರದೀಪತಾ ವೇದಿಕೆಯಲ್ಲಿ ಆರಂಭಗೊಂಡ ಸಮ್ಮೇಳನದ ಉದ್ಘಾಟನೆಯನ್ನು ಸಿ.ಐ.ಟಿ.ಯುವಿನ ರಾಷ್ಟ್ರಾಧ್ಯಕ್ಷರಾದ ಎ.ಕೆ.ಪದ್ಮನಾಭನ್ ನೇರವೇರಿಸಿದರು. ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ ಆಳುವ ವರ್ಗ ದುಡಿಯುವ ಜನವಿರೋಧಿ ಧೋರಣೆಯನ್ನು ಅನುಸರಿಸಿ ಕೆಲವೇ ಜನ ಬಂಡವಾಳಗಾರರ ಹಿತ ಬಯಸುತ್ತಿದೆ ಎಂದರು. ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುತ್ತೇನೆಂದು ಕಾರ್ಪೋರೇಟ್ ದೊರೆಗಳ ಹಣಬಲದಿಂದ ಅದ್ಧೂರಿ ಪ್ರಚಾರ ನಡೆಸಿ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ತನ್ನ ನಿಜ ಬಣ್ಣ ಬಯಲುಗೊಳಿಸಿದೆ ಎಂದರಲ್ಲದೆ ಕಾರ್ಮಿಕರ ಕಾನೂನಿಗೆ ತಿದ್ದುಪಡಿ ತರುವುದರ ಮೂಲಕ ಕಾರ್ಮಿಕ ವರ್ಗವನ್ನು ಕಾನೂನಾತ್ಮಕವಾಗಿ ಸುಲಿಗೆ ಮಾಡಲು ಸಾಮ್ರಾಜ್ಯಶಾಹಿಗಳಿಗೆ ಕಾನೂನಿನ ಬೆಂಬಲ ಸಿಗುವಂತೆ ಮಾಡಲು ಪ್ರಯತ್ನ ನಡೆದಿದೆ. 31% ಮತ ಪಡೆದು ಅಧಿಕಾರಕ್ಕೆ ಬಂದ ಬಿ.ಜೆ.ಪಿ ಇಂಗು ತಿಂದ ಮಂಗನಂತಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತಾಡಿದ ಕಟ್ಟಡ ಕಾರ್ಮಿಕರ ಫೆಡರೇಷನ್‌ನ ಅಖಿಲ ಭಾರತ ಅಧ್ಯಕ್ಷರಾದ ಸಿಂಗಾರವೇಲು ಮಾತನಾಡಿ ಸರಕಾರದ ಧೋರಣೇಯಿಂದ ಕಟ್ಟಡ ಉದ್ದಿಮೆ ಸಂಕಷ್ಟದಲ್ಲಿದೆ ಕಟ್ಟಡ ಸಾಮಾಗ್ರಿಗಳ ಬೆಲೆ ಏರಿಕೆಯಿಂದಾಗಿ ಜನ ಸಾಮಾನ್ಯ ಮನೆ ಕಟ್ಟಲು ಸಾದ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರ ಫಲವತ್ತಾದ ಭೂಮಿಯನ್ನು ಕಬಳಿಸಿ ರಿಯಲ್ ಏಸ್ಟೇಟ ದೊರೆಗಳಿಗೆ ಕೊಡುತ್ತಿದೆ ಎಂದರು.

ಮೋದಿ ಸರಕಾರ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಒಳ್ಳೆಯ ದಿನಗಳು ಬರುತ್ತಿವೆ ಎಂದಿದ್ದರು. ಈಗ ಪ್ರತಿದಿನಗಳು ನಿಕೃಷ್ಟಗೊಳ್ಳುತ್ತಿರುವುದು ಕಾಣುತ್ತಿವೆ. ಮೋದಿ ಸರಕಾರ ಭೂಸ್ವಾದೀನ ಕಾಯ್ದೆ 2013 ಕ್ಕೆ ತಿದ್ದುಪಡಿ ತರುವುದರ ಮೂಲಕ ಹಿಂದೆ ಇದ್ದ 80% ಗೆ ಬದಲು 50% ಜನ ಒಪ್ಪಿಗೆ ಕೊಟ್ಟರೆ ರೈತರ ಭೂಮಿಯನ್ನು ಸ್ವಾದೀನ ಪಡಿಸಿಕೊಳ್ಳುವ ಕಾಯಿದೆ ತಿದ್ದುಪಡಿ ಮಾಡಲಿದ್ದಾರೆ. ಮಾನವ ಅಭಿವೃದ್ಧಿ ಜಗತ್ತಿನ 187 ದೇಶಗಳಲ್ಲಿ ಭಾರತ–135 ಸ್ಥಾನದಲ್ಲಿದೆ. ಬ್ರಿಕ್ ದೇಶಗಳಾದ ಬ್ರೆಜಿಲ್, 29 ನೇ ಸ್ಥಾನದಲ್ಲಿ ರಷ್ಯಾ 57 ನೇ ಸ್ಥಾನದಲ್ಲಿ ಚೀನಾ 91, ದಕ್ಷಿಣ ಆಫ್ರಿಕಾ 118 ನೇ ಸ್ಥಾನದಲ್ಲಿದೆ. ಮಂಗಳಯಾನಕ್ಕೆ 450 ಕೋಟಿ ರೂ. ಖರ್ಚುಮಾಡಿ ಯಶಸ್ವಿಯಾದ ಭಾರತ ದೇಶದಲ್ಲಿ ಮಾನವ ಸಂಪನ್ಮೂಲ ಸರಿಯಾಗಿ ಬಳಕೆ ಮಾಡಲು ಆಗುತ್ತಿಲ್ಲ.

ಸಂಘಟನಾ ಚರ್ಚೆ :

ಪ್ರಧಾನ ಕಾರ್ಯದರ್ಶಿ ದೇಬಂಜನ್ ಮಂಡಿಸಿದ ರಾಜಕಿಯ–ಸಂಘಟನಾ ಮತ್ತು ಖಜಾಂಚಿ ಮಂಡಿಸಿದ ಲೆಕ್ಕಪರಿಶೀಲನಾ ವರದಿ ಮೇಲೆ ಒಟ್ಟು 35 ಜನ ಸಂಗಾತಿಗಳು ಸುಮಾರು 8 ಗಂಟೆಗಿಂತ ಹೆಚ್ಚಿನ ಕಾಲ ಚರ್ಚೆ ನಡೆಸಿದರು. ಕರ್ನಾಟಕದಿಂದ ಚರ್ಚೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಉಮೇಶ ಹಾಗೂ ರಾಜ್ಯ ಉಪಾಧ್ಯಕ್ಷರಾದ ಹರೀಶನಾಯ್ಕ ಪಾಲ್ಗೊಂಡು ಮಾತನಾಡಿದರು. ಅಖಿಲ ಭಾರತ ಉಪಾಧ್ಯಕ್ಷರಾದ ಮಾಲತಿ ಚಿಟ್ಟಿಬಾಬು ಪ್ರತ್ಯೇಕವಾಗಿ ಕಟ್ಟಡ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಸ್ಥಿತಿ–ಗತಿ ಕುರಿತು ಮತ್ತು ಸಂಘಟಿಸಬೇಕಾದ ಸವಾಲುಗಳು ಕುರಿತು ಮಂಡಿಸಿದ ವರದಿ ಮೇಲೆ ಪ್ರತ್ಯೇಕವಾಗಿಯೇ ಚರ್ಚೆ ನಡೆಯಿತು. ಈ ಚರ್ಚೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಉತ್ತರ ಕನ್ನಡ ಜಿಲ್ಲಾ ಮಹಿಳಾ ಪ್ರತಿನಿಧಿ ಮೀನಾಗೌಡ ಮಾತನಾಡಿದರು.

ಕರ್ನಾಟಕದಲ್ಲಿ ಕಟ್ಟಡ ಕಾರ್ಮಿಕರ ಮಂಡಳಿ ಸ್ಥಿತಿ ಗತಿ, ನಮ್ಮ ಚಳುವಳಿ ಹಾಗೂ ಸಾಧನೆಗಳು ಮತ್ತು ಹಿಂದಿನ ಬಿಜೆಪಿ ಹಾಗೂ ಇಂದಿನ ಕಾಂಗ್ರೆಸ್ ಸರಕಾರಗಳು ಸಂಗ್ರಹವಾದ ಸೆಸ್ ಹಣವನ್ನು ದುರ್ಬಳಕೆ ಮಾಡಲು ಯತ್ನಿಸಿದ್ದು ಅದಕ್ಕೆ ಕಾರ್ಮಿಕ ಸಂಘಗಳು ತೋರಿಸಿದ ಪ್ರತಿಭಟನೆ ಮತ್ತು ಸಂಘಟನಾತ್ಮಕವಾಗಿ ಆಗಿರುವ ಮುನ್ನಡೆ ಮತ್ತು ಮುಂದಿನ ಯೋಜನೆಗಳ ಕುರಿತಾಗಿ ಸಂಗಾತಿಗಳು ಸಮ್ಮೇಳನದ ಮುಂದೆ ಬೆಳಕು ಚೆಲ್ಲಿದರು.



ಕರ್ನಾಟಕದ ಪ್ರತಿನಿಧಿಗಳು

ಪಶ್ಚಿಮ ಬಂಗಾಳದ ಸಂಗಾತಿಗಳು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ ತ್ರಣಮೂಲ ಕಾಂಗ್ರೆಸಿನ ದಬ್ಬಾಳಿಕೆ ದಮನಕಾರಿ ನೀತಿಯನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಎಲ್ಲಾ ಹಂತದಲ್ಲಿ ಬ್ರಷ್ಟಾಚಾರ ತುಂಬಿದೆ. ಗುತ್ತಿಗೆದಾರ ಕೆಲಸ ಪ್ರಾರಂಭಿಸುವ ಮೊದಲೆ ತ್ರಣಮೂಲ ಗುಂಡಾಗಳಿಂದ ಹಣಕ್ಕಾಗಿ ಪೀಡಿಸಲಾಗುತ್ತಿದೆ. ಕಾರ್ಮಿಕರ ಐಖ್ಯತೆ ಬಲಗೊಳ್ಳುತ್ತಿದೆ. ಕಾರ್ಮಿಕರು ಮನೆಗೆ ಹೋಗುವ ಮೊದಲು ಸಂಘದ ಕಛೇರಿಗೆ ಭೇಟಿ ಕೊಡುತ್ತಾರೆ ಎಂದರು.

ಮಧ್ಯಪ್ರದೇಶದ ಸಂಗಾತಿಗಳು ಮಾತನಾಡುತ್ತಾ ಬಿ.ಜೆ.ಪಿ ಸರಕಾರ ರೈತರ ಭೂಮಿಯನ್ನು ಕಬಳಿಸುತ್ತಿದೆ. ಕಾರ್ಪೋರೇಟ್ ದೊರೆಗಳು ಬೊಟ್ಟು ತೋರಿಸಿದ ಭೂಮಿಯನ್ನು ರೈತರಿಂದ ಕಬಳಿಸಿ ಕೊಡಲಾಗುತ್ತಿದೆ. ಕಾರ್ಮಿಕ ಕಾನೂನುಗಳು ಜಾರಿಯಾಗುತ್ತಿಲ್ಲ. ಮಧ್ಯಪ್ರದೇಶ ಸರಕಾರ ಅತ್ಯಂತ ಬ್ರಷ್ಠ ಸರಕಾರ ಆಗಿದೆ ಎಂದರು.

ರಾಜಸ್ಥಾನದ ವಸುಂದರಾ ರಾಜೇ ಸರಕಾರ ಕಾರ್ಮಿಕ ವರ್ಗವನ್ನು ಬಗ್ಗುಬಡಿಯಲು ಕಾರ್ಮಿಕ ಕಾನೂನಿಗೆ ತಿದ್ದುಪಡಿ ಮಾಡಿ ರಾಷ್ಟ್ರಪತಿಯವರ ಅಂಗೀಕಾರಕ್ಕೆ ಹಲವಾರು ದಿನ ಡೆಲ್ಲಿಯಲ್ಲಿ ಠಿಕಾಣೆ ಹೂಡಿದ್ದರು ರಾಷ್ಟ್ರಪತಿ ಅಂಗೀಕಾರ ಸಿಗಲಿಲ್ಲ ಈ ತಿದ್ದುಪಡಿ ತರುವಾಗ ಶಾಸನಸಭೆಯಲ್ಲಿ ಕೇವಲ 22 ಶಾಸಕರಿದ್ದರು. ಅದರಲ್ಲಿ 20 ಬಿ.ಜೆ.ಪಿ ಗೆ ಸೇರಿದ್ದರೆ ಇಬ್ಬರು ಕಾಂಗ್ರೆಸ್ ಸದಸ್ಯರು 300 ಕಾರ್ಮಿಕರಿರುವ ಉದ್ದಿಮೆಯನ್ನು ಮುಚ್ಚಲು ಸರಕಾರದ ಪರವಾನಿಗೆ ಬೇಕಾಗಿಲ್ಲ ಎನ್ನುವುದು ಆ ಮಸೂದೆಯಲ್ಲಿದೆ.

ಈಗಿರುವ 20 ರಬದಲು 40 ಕಾರ್ಮಿಕರಿರುವ ಉದ್ದಿಮೆಯಲ್ಲಿ ಪಿ.ಎಫ್. ಮತ್ತು ಇಎಸ್‌ಐ ಕೊಡಬೇಕಾಗಿಲ್ಲ ಎನ್ನುವ ಕಾನೂನು ಮತ್ತು ಉದ್ದಿಮೆಯಲ್ಲಿ ಗುತ್ತಿಗೆ ಕಾರ್ಮಿಕ ಮತ್ತು ಮೂಲ ಮಾಲೀಕರ ಮಧ್ಯ ಯಾವುದೇ ಸಂಬಂಧವಿಲ್ಲ ಎಂಬ ಕಾನೂನು ಜಾರಿಗೆ ಮಾಡಲು ರಾಜಸ್ಥಾನ ಸರಕಾರ ಹೊರಟಿದೆ.

ಪ್ರತಿನಿಧಿಗಳ ಚರ್ಚೆಯ ಬಳಿಕಾ ಸಿಐಟಿಯು ಅಖಿಲ ಭಾರತ ಕೇಂದ್ರದ ಪರವಾಗಿ ಗಮನಿಸಿದ ಅಖಿಲ ಭಾರತ ಸಿಐಟಿಯು ಕಾರ್ಯದರ್ಶಿಗಳು ಹಾಗೂ ಕೇರಳ ರಾಜ್ಯದ ಪ್ರಧಾನ ಕಾರ್ಯದರ್ಶಿಗಳಾದ ಇ. ಕರೀಂ ಹಾಗು ಪ.ಬಂಗಾಳ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ದೀಪಕ್‌ದಾಸ್ ಗುಪ್ತಾ ಪ್ರತಿನಿಧಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಟಿ.ಪಿ.ರಾಮಕೃಷ್ಣನ್ ದೇಶದ ನಾನಾ ಭಾಗಗಳಿಂದ ಬಂದ ಸಂಗಾತಿಗಳನ್ನು ಸ್ವಾಗತಿಸಿದರು. ಸಮ್ಮೇಳನವು ಕಟ್ಟಡ ಕಾರ್ಮಿಕರ ಫಡರೇಷ್‌ನ ನ ನಿಯಮಾವಳಿಗೆ ಕೆಲವು ತಿದ್ದುಪಡಿ ತರಲು ಸರ್ವಾನುಮತದಿಂದ ಒಪ್ಪಿಗೆ ನೀಡಿತು. ಮುಂದಿನ ಕಾರ್ಯಯೋಜನೆ ಯನ್ನು ಚರ್ಚಿಸಿ ಅನುಮೋದಿಸಿತು.

ದುಡಿಯುವ ಮಹಿಳೆಯರ ಕುರಿತು ಪ್ರತ್ಯೇಕ ಚರ್ಚೆ ನಡೆಸಿ ಠರಾವನ್ನು ಅಂಗೀಕರಿಸುವುದರ ಮೂಲಕ ಕಟ್ಟಡ ಕಾರ್ಮಿಕರ ಫೆಡರೇಷನ್ನಿನ ಮಹಿಳಾ ಉಪ ಸಮಿತಿಯನ್ನು ರಚಿಸಲಾಯಿತು. ಕೋಮು ಸೌಹಾರ್ದರೆ ಗಟ್ಟಿಗೊಳಿಸುವ ದೃಢ ನಿರ್ಧಾರವನ್ನು ಸಮ್ಮೇಳನವು ಅಂಗೀಕರಿಸಿತು.

ಸಮ್ಮೇಳನದಲ್ಲಿ ದೇಶದ 19 ರಾಜ್ಯಗಳಿಂದ 406 ಪ್ರತಿನಿಧಿಗಳು ಹಾಗೂ ಈಜಿಪ್ಟ್, ಬ್ರಿಟನ್, ಬಾಂಗ್ಲಾದೇಶ ಹಾಗೂ ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟದ ಪ್ರತಿನಿಧಿಗಳು ಹಾಜರಿದ್ದರು.

1 ಲಕ್ಷ ಜನರ ರ್‍ಯಾಲಿಯೊಂದಿಗೆ ಸಮಾರೋಪ

ನವೆಂಬರ್ 7 ರಂದು ಸಂಜೆ ಕೋಝೀಕೋಟ್‌ನ ಸಮುದ್ರ ತೀರದಲ್ಲಿ ಒಂದು ಲಕ್ಷ ಕೇವಲ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರ ಬೃಹತ್ ಬಹಿರಂಗ ಸಭೆ ನಡೆಯಿತು. ಈ ಸಭೆಯನ್ನುದ್ದೇಶಿಸಿ ತ್ರಿಪುರಾದ ಮುಖ್ಯಮಂತ್ರಿಗಳಾದ ಮಾಣಿಕ್ ಸರ್ಕಾರ ಸೇರದಂತೆ ಹಲವು ನಾಯಕರು ಮಾತನಾಡಿದರು.



ರ್‍ಯಾಲಿಯನ್ನುದ್ದೇಶಿಸಿ ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಮಾತನಾಡುತ್ತಿರುವುದು.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI